**ಸಂಪುಟ:** 05 **ಸಂಚಿಕೆ:** 101 **ಪುಟಗಳು:** 08 **ಮಂಗಳವಾರ** 24 **ಜೂನ್** 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸಮರ್ಪಣೆಯೇ ಆಧ್ಯಾತ್ಮಿಕತೆಯ ರಹಸ್ಯ. ನಿಮ್ಮನ್ನು ನೀವು ಆಧ್ಯಾತ್ಮಿಕ ಮಾರ್ಗದಲ್ಲಿ ಸಮರ್ಪಣೆ ಮಾಡಿಕೊಂಡಷ್ಟು ಅಭಿವೃದ್ಧಿಯು ನಿಮಗೆ ಸಾಥ್ ನೀಡುವುದು.

## ಐಶ್ವರ್ಯಾ ಗೌಡಗೆ ಭಾರೀ ಸಂಕಷ್ಟ.. ಇಡಿಯಿಂದ ಆಸ್ತಿ ಮುಟ್ಟುಗೋಲು

• ಉದಯವಾಹಿನಿ, ಬೆಂಗಳೂರು

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಜ್ಯುವೆಲ್ಲರ್ಸ್ ಮಾಲೀಕರಿಗೆ 9.82 ಕೋಟಿ ರೂಪಾಯಿ ಮೌಲ್ಯದ 14 ಕೆಜಿ ಚಿನ್ನ ವಂಚಿಸಿದ ಪ್ರಕರಣ ಬೆಳಕಿಗೆ ಬಂದ ಮೇಲೆ ಅವರ ವಂಚನೆಗಳು ಹೊರ ಬಂದಿದ್ದವು. ಇವುಗಳಿಗೆ ಸಂಬಂಧಿಸಿದಂತೆ ಸದ್ಯ ಐಶ್ವರ್ಯಾ ಗೌಡ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇಡಿ ಅಧಿಕಾರಿಗಳು, ವಂಚಕಿ ಐಶ್ವರ್ಯಾ ಗೌಡಗೆ ಸಂಬಂಧಿಸಿದ ಅಂದಾಜು 3.98 ಕೋಟಿ ಮೌಲ್ಯದ ಫ್ಲಾಟ್‌ಗಳು, 2.01 ಕೋಟಿ ವೆಚ್ಚದ ನಿರ್ಮಾಣ ಹಂತದ ಕಟ್ಟಡ, ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ನಗದು ಹಾಗೂ ಐಶ್ವರ್ಯ ಬಳಸುತ್ತಿದ್ದ ವಾಹನಗಳು ಸೇರಿ 1.97 ಕೋಟಿ ಮೌಲ್ಯದಷ್ಟು ವಸ್ತು ಈಗ ಇಡಿ ವಶದಲ್ಲಿವೆ. ಹೆಚ್ಚಿನ ಆದಾಯದ ಭರವಸೆ ನೀಡಿ ಹಲವು ವ್ಯಕ್ತಿಗಳಿಂದ ಚಿನ್ನ, ಹಣವನ್ನು ಬ್ಯಾಂಕ್ ಖಾತೆಗಳ ಮೂಲಕ ಐಶ್ವರ್ಯಾ ಗೌಡ ಪಡೆದು ಕ್ರಿಮಿನಲ್ ಪಿತೂರಿಯಲ್ಲಿ ಭಾಗಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪ ಮೇಲೆ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇನ್ನು ಐಶ್ವರ್ಯಾ ಗೌಡ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿಎಂಎಲ್‌ಎ ಆಕ್ಟ್ ಅಡಿಯಲ್ಲಿ ಕೇಸ್ ದಾಖಲಿಸಿ ಇಡಿ ಅಧಿಕಾರಿಗಳು ತನಿಖೆ ಮುಂದುವರೆಸಿದ್ದಾರೆ.

## ಸಹೋದರರಿಂದ ಭಯೋತ್ಪಾಕರಿಗೆ ಸಹಾಯ, ಕೋರ್ಟ್‌ಗೆ ಹಾಜರು

• ಉದಯವಾಹಿನಿ, ನವದೆಹಲಿ

ಪಹಲ್ಗಾಮ್ ದಾಳಿಕೋರರಿಗೆ ಆಶ್ರಯ ನೀಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಎನ್‌ಐಎ ಅಧಿಕಾರಿಗಳು, ಸದ್ಯಕ್ಕೆ ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ಬೈಸರಾನ್ ವ್ಯಾಲಿಯಿಂದ 3 ಕಿಮೀ ದೂರದಲ್ಲಿ ಉಗ್ರರಿಗೆ ಆಶ್ರಯ ನೀಡಿದ್ದ ಇಬ್ಬರು ಸೋದರರನ್ನು ಎನ್‌ಐಎ ಬಂಧಿಸಿದೆ. ಪರ್ವೇಜ್, ಬಶೀರ್ ಅಹಮದ್ ಜೋತರ್ ಎಂಬ ಸೋದರರೇ ಉಗ್ರರಿಗೆ ಆಶ್ರಯ ನೀಡಿದವರು. ತಾವು ಆಶ್ರಯ ನೀಡಿದ್ದು ಉಗ್ರಗಾಮಿಗಳಿಗೆ ಎಂಬುದು ಪರ್ವೇಜ್, ಬಶೀರ್ ಅಹಮದ್ ಜೋತರ್‌ಗೆ ಗೊತ್ತಿತ್ತು. ಉಗ್ರಗಾಮಿಗಳು ಎಂಬುದು ಗೊತ್ತಿದ್ದು ಆಶ್ರಯ ನೀಡಿದ್ದಕ್ಕಾಗಿ ಇಬ್ಬರನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಪಹಲ್ಗಾಮ್ ದಾಳಿಯ ಉಗ್ರರ ಜಾಡು ಹಿಡಿಯುವಲ್ಲಿ ಎನ್‌ಐಎ ಯಶಸ್ವಿಯಾಗಿದೆ. ದಾಳಿಕೋರ ಉಗ್ರರು 2022 ರಿಂದಲೂ ಜಮ್ಮು ಕಾಶ್ಮೀರದಲ್ಲಿ ವಿವಿಧೆಡೆ ದಾಳಿ ನಡೆಸಿದ್ದಾರೆ. 2022ರಲ್ಲಿ ಪೂಂಚ್ ಜಿಲ್ಲೆಯ ದೇರಾಕಾಗಲ್ಲಿ ಪ್ರದೇಶದ ಮೂಲಕ ಪಾಕಿಸ್ತಾನದಿಂದ ಭಾರತಕ್ಕೆ ಉಗ್ರರು ಒಳನುಸುಳಿದ್ದರು. ಜಮ್ಮುವಿನಲ್ಲಿ ಒಂದು ವರ್ಷ ಉಗ್ರಗಾಮಿಗಳು ಸಕ್ರಿಯವಾಗಿದ್ದರು. ಭಾರತದ ಭದ್ರತಾ ಪಡೆಗಳ ಮೇಲೆ ನಡೆದ ಕನಿಷ್ಠ 3 ದಾಳಿಯಲ್ಲಿ ಇದೇ ಉಗ್ರರು ಭಾಗಿಯಾಗಿದ್ದಾರೆ ಎಂದು ಎನ್‌ಐಎ ಹೇಳಿದೆ.


## ಬಾಲಕನ ಕುಟುಂಬಕ್ಕೆ 8 ಲಕ್ಷ ರೂ. ಪರಿಹಾರ ನೀಡಿ

• ಉದಯವಾಹಿನಿ, ಬೆಂಗಳೂರು

ಜೀವಕ್ಕೆ ಹಾನಿಯಾಗಿರುವಂತಹ ಸಂದರ್ಭಗಳಲ್ಲಿ ತಾಂತ್ರಿಕ ಕಾರಣಗಳಿಗೆ ಬದಲಾಗಿ ನ್ಯಾಯಕ್ಕೆ ಆದ್ಯತೆ ನೀಡಬೇಕು ಎಂದು ಅಭಿಪ್ರಾಯಪಟ್ಟಿರುವ ಕರ್ನಾಟಕ ಹೈಕೋರ್ಟ್ 2023 ರಲ್ಲಿ ರೈಲು ಅಪಘಾತದಲ್ಲಿ ಮೃತಪಟ್ಟಿದ್ದ ಎಂಟು ವರ್ಷದ ಬಾಲಕನ ಕುಟುಂಬಕ್ಕೆ 8 ಲಕ್ಷ ರೂ. ಪರಿಹಾರ ನೀಡುವಂತೆ ರೈಲ್ವೆ ಇಲಾಖೆಗೆ ನಿರ್ದೇಶನ ನೀಡಿದೆ. ತಾಂತ್ರಿಕ ಕಾರಣಗಳನ್ನು ನೀಡಿ ಪರಿಹಾರ ಘೋಷಣೆಗೆ ನಿರಾಕರಿಸಿದ್ದ ರೈಲು ಅಪಘಾತಗಳ ಪರಿಹಾರ ನ್ಯಾಯ ಮಂಡಳಿಯ ಆದೇಶ ಪ್ರಶ್ನಿಸಿ ಮೃತ ಬಾಲಕನ ಪೋಷಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ್ ಅವರಿದ್ದ ಪೀಠ, ಈ ಆದೇಶ ನೀಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು, ಎಫ್ ಐ ಆರ್, ಮರಣೋತ್ತರ ಪರೀಕ್ಷಾ ವರದಿ ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನ್ಯಾಯಪೀಠ, ಮೃತ ಮಗುವಿನ ವಯಸ್ಸು ವ್ಯತ್ಯಾಸವಿದೆ ಎಂಬ ಕಾರಣ ನೀಡಿ ಪರಿಹಾರ ನಿರಾಕರಿಸುವುದಕ್ಕೆ ಸಾಧ್ಯವಿಲ್ಲ. ನ್ಯಾಯಾಧಿಕರಣದ ಆದೇಶ ಕಾನೂನಿನಲ್ಲಿ ಮಾನ್ಯತೆ ಪಡೆದುಕೊಳ್ಳುವುದಿಲ್ಲ, ಎಂದು ಅಭಿಪ್ರಾಯಪಟ್ಟಿದೆ. ರಾಯಚೂರಿನ ಮಾನ್ವಿ ತಾಲ್ಲೂಕಿನ ಅಥನೂರು ಗ್ರಾಮದ ಎಸ್.ಕೆ.ದೇವಣ್ಣ ಮತ್ತು ಬೆಟ್ಟಮ್ಮ ದಂಪತಿಯ ಮಗ ಎಸ್.ಎನ್. ನಂದಕುಮಾರ್ 2023ರ ಮಾರ್ಚ್‌ನಲ್ಲಿ ಸಹೋದರ ಸಂಬಂಧಿ ಅಮರೇಶ್ ಅವರೊಂದಿಗೆ ರಾಯಚೂರಿನಲ್ಲಿ ಬಾಗಲಕೋಟೆ - ಯಶವಂತಪುರ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಕ್ಕೆ ಟಿಕೆಟ್ ಖರೀದಿಸಿ, ಇಬ್ಬರೂ ಜನರಲ್ ಬೋಗಿಯಲ್ಲಿ ಯಶವಂತಪುರಕ್ಕೆ ಪ್ರಯಾಣಿಸುತ್ತಿದ್ದರು. ಧರ್ಮಾವರಂ ಮತ್ತು ನಾಗಸಮುದ್ರಂ ನಿಲ್ದಾಣಗಳ ನಡುವೆ ಬಾಲಕ ಶೌಚಾಲಯದ ಬಳಿ ವಾಶ್ ಬೇಸಿನ್ ಬಳಸುತ್ತಿದ್ದಾಗ ರೈಲಿನ ಜರ್ಕ್ ಮತ್ತು ವೇಗದ ಪರಿಣಾಮ ಜಾರಿ ಕೆಳಕ್ಕೆ ಬಿದ್ದು ಮೃತಪಟ್ಟಿದ್ದ.

● ಶಾಸಕರಿಂದಲೇ ಸಾಲು ಸಾಲು ಆರೋಪ ● ಬಿ ಆರ್ ಪಾಟೀಲ್ ಆಯ್ತು, ಇದೀಗ ರಾಜುಕಾಗೆ ಅವರ ಸರದಿ ● ಸರಣಿ ಆರೋಪಕ್ಕೆ ಸಿಎಂ ಕಂಗಾಲು

# ಸ್ವಪಕ್ಷೀಯರಿಂದಲೇ ಛೀಮಾರಿ!



### ಸರ್ಕಾರಕ್ಕೆ ತೀವ್ರ ಮುಜುಗರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸ್ವಪಕ್ಷೀಯ ಶಾಸಕರಾದ ಬಿ ಆರ್ ಪಾಟೀಲ್, ರಾಜು ಕಾಗೆ ಆರೋಪ ಮಾಡಿದ್ದು, ಸರ್ಕಾರಕ್ಕೆ ತೀವ್ರ ಮುಜುಗರ ಉಂಟಾಗಿದೆ. ಈ ಕುರಿತಾಗಿ ಸಚಿವ ಸಂತೋಷ್ ಲಾಡ್ ಮಾತನಾಡಿದ್ದು, ಶಾಸಕರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ರಾಜು ಕಾಗೆಯವರು ಹಿರಿಯರು. ಅವರ ಹೇಳಿಕೆ ಬಗ್ಗೆ ನನಗೇನು ಗೊತ್ತಿಲ್ಲ. ನೀವು ಅವರನ್ನೇ ಕೇಳಬೇಕು . ಇಲಾಖೆ ಬಗ್ಗೆ ಕೇಳಿದ್ರೆ ಹೇಳಬಹುದು. ಶಾಸಕಾಂಗ ಪಕ್ಷದ ಸಭೆ ಕರೆಯುತ್ತೇವೆ. ಅಲ್ಲಿ ಅವರು ತಮ್ಮ ಅಭಿಪ್ರಾಯ ಹೇಳಬಹುದು ಎಂದರು.

ಸಿಎಂ ಭೇಟಿಯಾಗಿ ತಮ್ಮ ಸಮಸ್ಯೆ ಬಗ್ಗೆ ಹೇಳಬಹುದು. ಅನುದಾನ ಎಲ್ಲರಿಗೂ ಬೇಕು. ನಮ್ಮ ಪಕ್ಷದಲ್ಲಿ ಹೇಳಿಕೆ ನೀಡಲು ಅವಕಾಶ ಇದೆ. ಬಿಜೆಪಿಯಲ್ಲಿ ಮಾತನಾಡಲು ಅವಕಾಶ ಇಲ್ಲ. ಬಿಜೆಪಿಯವರು ಭ್ರಷ್ಟಾಚಾರದ ಪಿತಾಮಹರು. ಇವರಿಗೆ ಭ್ರಷ್ಟಾಚಾರದ ಆರೋಪ ಮಾಡುವ ನೈತಿಕತೆ ಇಲ್ಲ ಎಂದರು. ಬಿ ಆರ್ ಪಾಟೀಲ್ ಆರೋಪಕ್ಕೆ ಸ್ಪಷ್ಟನೆ ನೀಡಿದ ಅವರು, ಮನೆಗಳು ಮಂಜೂರಾತಿಗೆ ಗ್ರಾಮ ಪಂಚಾಯತ್ ಗೆ ಹೋಗಬೇಕು. ಒಂದು ಸಾವಿರ ಮನೆ ನೀಡಲು ಸಾಧ್ಯವಿಲ್ಲ. ಈ ಬಗ್ಗೆ ಬಿ. ಆರ್. ಪಾಟೀಲರನ್ನ ಕೇಳಬೇಕು. ಬಿ. ಆರ್. ಪಾಟೀಲ್ ರ ಆರೋಪದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರು. ಮಾಜಿ ಸಚಿವ ನಾಗೇಂದ್ರ ಮೇಲೂ ಆರೋಪವಿತ್ತು. ಅವರು ಏನು ಡಿಸೈಡ್ ಮಾಡಿದ್ರು ಗೊತ್ತಿಲ್ಲ. ಜಮೀರ್ ಮೇಲೂ ಆರೋಪ ಬಂದಿದೆ. ಆದರೆ ಇದರಲ್ಲಿ ಜಮೀರ್ ಪಾತ್ರ ಏನು ಪಂಚಾಯ್ತಿಯಲ್ಲಿ ನಡೆಯೋದು ಅಕ್ರಮಕ್ಕೆ ಇವರು ಹೇಗೆ ಜವಾಬ್ದಾರಿ ಆಗ್ತಾರೆ ಎಂದು ಪ್ರಶ್ನಿಸಿದರು.

ಫಲಾನುಭವಿಗಳಿಗೆ ಮನೆಗಳನ್ನು ಆಯ್ಕೆ ಮಾಡುವ ಅಧಿಕಾರ ಆಯಾ ಗ್ರಾಮ ಪಂಚಾಯತ್ ಗಳಿಗೆ ಇರುತ್ತದೆ. ಆದರೆ ಅದನ್ನು ರದ್ದುಗೊಳಿಸುವ ಅಧಿಕಾರ ಶಾಸಕರಿಗೆ ಇರುತ್ತದೆ. ಶಾಸಕರು ವಸತಿ ಹಂಚಿಕೆ ಅಧ್ಯಕ್ಷರಾಗಿರುತ್ತಾರೆ. ಆದರೆ ಫಲಾನುಭವಿಗಳಿಗೆ ಗ್ರಾಮ ಪಂಚಾಯ್ತಿಯವರೇ ಮನೆ ಹಂಚಿಕೆ ಮಾಡೋದು ಎಂದು ಸ್ಪಷ್ಟಪಡಿಸಿದರು.

### ಬಿ ಆರ್ ಪಾಟೀಲ್ ಆರೋಪ ಏನು

ಅಳಂದ ಶಾಸಕರಾದ ಬಿ ಆರ್ ಪಾಟೀಲ್ ರಾಜ್ಯ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಸರ್ಕಾರದ ನಾನಾ ವಸತಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಹಾಗೂ ಅನರ್ಹರಿಗೆ ಹಣ ಪಡೆದುಕೊಂಡು ಮನೆಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಹಗರಣದ ಕುರಿತು ಕೂಡಲೇ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ನ್ಯಾಯಮೂರ್ತಿ ಒಬ್ಬರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ, ಸಂಪೂರ್ಣವಾಗಿ ವಸತಿ ಹಗರಣದ ತನಿಖೆಯನ್ನು ನಡೆಸಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಹಣ ಪಡೆದ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಬಿ ಆರ್ ಪಾಟೀಲ್ ಆಗ್ರಹಿಸಿದ್ದಾರೆ.

### ಕಾಂಗ್ರೆಸ್ ಸರ್ಕಾರಕ್ಕೆ ಕೈ ಶಾಸಕರ ಬಿಸಿ ಏಕೆ

- ಮೊದಲ ಒಂದೂವರೆ ವರ್ಷ ಗ್ಯಾರಂಟಿ ಯೋಜನೆಗಳತ್ತ ಗಮನ.
- ಸರ್ಕಾರದ ಬೊಕ್ಕಸದಿಂದ ಅನುದಾನ ಒದಗಿಸಲು ಸರ್ಕಸ್.
- ಆಡಳಿತ ಪಕ್ಷದ ಶಾಸಕರುಗಳ ಕ್ಷೇತ್ರಗಳಿಗೂ ಅನುದಾನ ಕೊರತೆ.
- ಹೊಸ ಯೋಜನೆಗಳು, ಕಾಮಗಾರಿಗಳನ್ನ ಕೈಗೆತ್ತಿಕೊಳ್ಳಲು ದೊರೆಯದ ಮಂಜೂರಾತಿ.
- ಈಗ ಕನಿಷ್ಠ 70ರಿಂದ 80 ಕೋಟಿ ಅನುದಾನ ಕೊಡುವ ಭರವಸೆ ನೀಡಿದ್ದ ಸಿಎಂ ಸಿದ್ದರಾಮಯ್ಯ.
- ಈಗ ಮಂಜೂರಾತಿ ಆಗಿರುವ ಯೋಜನೆಗಳಿಗೂ ಕಮಿಷನ್ ಕಾಟ ಆರೋಪ.
- ಶಾಸಕರ ಜೊತೆ ಸಚಿವರ ನಡವಳಿಕೆ ಸರಿ ಇಲ್ಲ ಎಂಬ ಆರೋಪ, ಸಮನ್ವಯತೆ ಕೊರತೆ.
- ★ಶಾಸಕರುಗಳಲ್ಲಿ ಹೆಚ್ಚಾದ ಅಸಹನೆ, ಬಹಿರಂಗವಾಗಿಯೇ ಸ್ಫೋಟ.




### ಸಿಎಂ, ಜಮೀರ್ ರಾಜೀನಾಮೆಗೆ ರವಿಕುಮಾರ್ ಆಗ್ರಹ

ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ ಅಂತ ಬಿಜೆಪಿ ಎಂಎಲ್‌ಸಿ ರವಿಕುಮಾರ್ ವಾಗ್ದಾಳಿ ನಡೆಸಿದ್ದಾರೆ. ಸರ್ಕಾರದ ವಿರುದ್ಧ ಕಾಂಗ್ರೆಸ್ ಶಾಸಕರಾದ ಬಿ.ಆರ್ ಪಾಟೀಲ್ ಮತ್ತು ರಾಜು ಕಾಗೆ ಆರೋಪಕ್ಕೆ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕರ್ನಾಟಕದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟುತ್ತಿದೆ. ಒಬ್ಬರಾದ ಮೇಲೆ ಒಬ್ಬರು ಮಾತಾಡ್ತಿದ್ದಾರೆ. ರಾಜು ಕಾಗೆ, ಬೇಳೂರು, ಬಿ.ಆರ್. ಪಾಟೀಲ್ ಮಾತಾಡ್ತಿದ್ದಾರೆ. ಈ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವ ಆಡ್ತಿದೆ. ಬೇಳೂರು ಗೋಪಾಲಕೃಷ್ಣ ಅವರು ಜಮೀರ್‌ರನ್ನೇ ಭ್ರಷ್ಟಾಚಾರ ಮಂತ್ರಿ ಅಂತ ಹೇಳ್ತಿದ್ದಾರೆ. ಅನೇಕ ಎಂಎಲ್ ಎಗಳು ಇದನ್ನ ಹೇಳ್ತಿದ್ದಾರೆ ಎಂದು ದೂರಿದರು. ನಮ್ಮ ಮೇಲೆ 40% ಅಂದ್ರಿ, ಸಿಎಂ, ಡಿಸಿಎಂ ಅವರೇ ನಿಮ್ಮ ಸರ್ಕಾರ ಎಷ್ಟು ಪರ್ಸೆಂಟೇಜ್ ತಗೋತಾ ಇದೆ ಹೇಳಿ ಅಂತ ಆಗ್ರಹ ಮಾಡಿದ್ರು.

### ಕಾಗೆ ಕರೆದು ಮಾತಾಡ್ತೀನಿ

ಸಿಎಂ ಅನುದಾನ ಅಂತ ಬಜೆಟ್‌ನಲ್ಲಿ ಇಲ್ಲ, ನಾವು ಗ್ರ್ಯಾಂಟ್ ಕೊಡುವುದೆಲ್ಲಾ ವಿಶೇಷ ಅನುದಾನ ಅಂತಿರುತ್ತದೆ. ಅವರು ಹೇಳುತ್ತಾರೆ, ಶಾಸಕ ರಾಜು ಕಾಗೆಯನ್ನ ಕರೆದು ಮಾತನಾಡ್ತಿನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಜಿಲ್ಲೆಯ ಯರಗೇರಾದಲ್ಲಿ ಸರ್ಕಾರದ ವಿರುದ್ಧ ಮತ್ತೊಬ್ಬ ಕಾಂಗ್ರೆಸ್ ಶಾಸಕ ರಾಜು ಕಾಗೆ ಆಕ್ರೋಶ ವ್ಯಕ್ತಪಡಿಸಿರುವ ವಿಚಾರವಾಗಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅನುದಾನದ ವರ್ಕ್ ಆರ್ಡರ್ ಸಿಗುತ್ತಿಲ್ಲ ಎಂದು ಎರಡು ದಿನದಲ್ಲಿ ರಾಜೀನಾಮೆ ನೀಡಿದ್ದರೂ ಅಚ್ಚರಿಯಿಲ್ಲ ಎಂದಿದ್ದಾರೆ. ಅವರು ಹೇಳುತ್ತಾರೆ, ಅವರಿಗೇನು ಸಿಎಂ ಅನುದಾನ ಅಂತಾ ಇದೀಯಾ ರಾಜು ಕಾಗೆಯನ್ನು ಕರೆದು ಮಾತಾಡುತ್ತೇನೆ ಎಂದರು.





### ಯಡಿಯೂರಪ್ಪ ಸರ್ಕಾರದ ವಿರುದ್ಧ ವಾಗ್ದಾಳಿ

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಒಬ್ಬೊಬ್ಬರಾಗಿಯೇ ಮುಂದಿನ ದಿನಗಳಲ್ಲಿ ಬಾಯಿ ಬಿಡುತ್ತಾರೆ ಎಂದು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಶಾಸಕರಾದ ಬಿ.ಆರ್.ಪಾಟೀಲ್ ಮತ್ತು ರಾಜು ಕಾಗೆ ಆರೋಪಕ್ಕೆ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಬಿ.ಆರ್.ಪಾಟೀಲ್ ಅವರು ಮನೆಗಳನ್ನು ಕೊಡುವ ಸಮಯದಲ್ಲಿ ದುಡ್ಡು ಕೊಡದೇ, ಲಂಚ ಕೊಡದೇ ಏನು ಕೆಲಸ ಆಗುವುದಿಲ್ಲ ಎಂದು ಗುರುತರದ ಆರೋಪ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಕರೆದರೆ ವಾಸ್ತವದ ಸ್ಥಿತಿ ಹೇಳುವುದಾಗಿ ಹೇಳಿದ್ದಾರೆ. ಸಿಎಂ ಅವರೇ ಬಿ.ಆರ್.ಪಾಟೀಲ್ ಅವರ ಬಾಯಿ ಮುಚ್ಚಿಸುವ ಆತಂಕ ನಮಗಿದೆ ಎಂದು ಅನುಮಾನ ವ್ಯಕ್ತಪಡಿಸಿದರು. ಕೇವಲ ರಾಜು ಕಾಗೆ ಮಾತ್ರವಲ್ಲ, ಹೀಗೆ ಹತ್ತಾರು ಜನರು ಈ ರೀತಿ ಹೇಳುತ್ತಿದ್ದಾರೆ. ಒಬ್ಬೊಬ್ಬರೇ ಬಾಯಿ ಬಿಡುತ್ತಾರೆ. ನೀವೇ ಕಾದು ನೋಡಿ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

# ಕಾಂಗ್ರೆಸ್ ದರ್ಬಾರಿನಲ್ಲಿ ಶಾಸಕರ ಪರಿಸ್ಥಿತಿ ತಬರನ ಕಥೆಯಂತಾಗಿದೆ!

■ ವಸತಿ ಇಲಾಖೆ ಅಕ್ರಮ, ಸರಕಾರದ ವಿರುದ್ಧ ಎಚ್‌ಡಿಕೆ ವಾಗ್ದಾಳಿ ■ ದಾಖಲೆ ಸಮೇತ ಗಂಭೀರ ಆರೋಪ

• ಉದಯವಾಹಿನಿ, ಬೆಂಗಳೂರು

ವಸತಿ ಇಲಾಖೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಕಾಂಗ್ರೆಸ್ ಸರಕಾರದ ದರ್ಬಾರಿನಲ್ಲಿ ಶಾಸಕರ ಪರಿಸ್ಥಿತಿ ತಬರನ ಕಥೆಯಂತೆ ಆಗಿದೆ ಎಂದು ತಿಳಿಸಿದರು.

ನವದೆಹಲಿಯ ತಮ್ಮ ಅಧಿಕೃತ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ಶಾಸಕರು ಅನುದಾನಕ್ಕಾಗಿ, ಸರಕಾರದ ಯೋಜನೆಗಳಿಗಾಗಿ ಕಚೇರಿಗಳ ಸುತ್ತ, ಮಂತ್ರಿಮಹೋದಯರ ಸುತ್ತ ತಬರನಂತೆ ಸುತ್ತುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರಿಗೇ ಇಂಥ ದುರ್ಗತಿ ಬಂದರೆ ಇತರೆ ಪಕ್ಷಗಳ ಶಾಸಕರ ಪರಿಸ್ಥಿತಿ ಏನು ಎಂದು ಪ್ರಶ್ನಿಸಿದರು.

ಹಿಂದೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಬರೆದಿದ್ದ 'ತಬರನ ಕಥೆ' ಎಂಬ ಕಥೆಯನ್ನು ಗಿರೀಶ್ ಕಾಸರವಳ್ಳಿ ಅವರು ಸಿನಿಮಾ ಮಾಡಿದ್ದರು. ವಾಚ್‌ಮನ್ ಒಬ್ಬ ತನ್ನ ಪಿಂಚಣಿಗಾಗಿ ಸರಕಾರಿ ಕಚೇರಿಗಳಿಗೆ ಪ್ರತಿದಿನ ಅಲೆ ಅಲೆದು ಬಸವಳಿಯುವ ಕಥೆ ಅದು. ಅಂಥದ್ದೇ ಪರಿಸ್ಥಿತಿ ರಾಜ್ಯದ ಶಾಸಕರಿಗೂ ಬಂದಿರುವುದು ದುರದೃಷ್ಟಕರ. ಶಾಸಕರು ಯೋಜನೆಗಳಿಗಾಗಿ ಮಂತ್ರಿಗಳು, ಎಂಜಿಯರ್‌ಗಳ ಕಚೇರಿಗಳ ಸುತ್ತ ತಬರನಂತೆ ಸುತ್ತುತ್ತಿದ್ದಾರೆ. ರಾಜ್ಯದಲ್ಲಿ ಇಂಥ ದುಸ್ಥಿತಿ ಹಿಂದೆಂದೂ ಇರಲಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ ಪರಿಸ್ಥಿತಿ ಹೇಗಾಗಿದೆ ಎಂದರೆ ಆಲಿ ಬಾಬಾ ಮೂವತ್ತನಾಲ್ಕು ಕಳ್ಳರು ಎನ್ನುವಂಥ ರೀತಿ ಆಗಿದೆ. ಮುಖ್ಯಮಂತ್ರಿ, ಮಂತ್ರಿಗಳು ಕಮೀಷನ್ ಉಡಾಯಿಸಿ ಮೋಜು ಮಾಡುತ್ತಿದ್ದರೆ ಶಾಸಕರು ತಮ್ಮ ಕ್ಷೇತ್ರಗಳಿಗೆ ಮುಖ ಹಾಕಲಾರದ ದುಸ್ಥಿತಿಯಲ್ಲಿ ಇದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ವಿಷಯ ಬೇರೆನಿದೆ ಇದನ್ನು ಪ್ರತಿಪಕ್ಷ ನಾಯಕರು ಹೇಳುತ್ತಿಲ್ಲ. ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು, ಅದರಲ್ಲಿಯೂ ಯೋಜನಾ ಆಯೋಗ ಉಪಾಧ್ಯಕ್ಷ ಬಿ.ಆರ್.ಪಾಟೀಲ್, ರಾಜು ಕಾಗೆ, ಬೇಳೂರು ಗೋಪಾಲಕೃಷ್ಣ ಅಂಥವರೇ ಹೇಳುತ್ತಿದ್ದಾರೆ. ಅವರೇ ಈ ಸರಕಾರಕ್ಕೆ ಸರ್ಟಿಫಿಕೇಟ್ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಳೆದ ಮೂರು ದಿನಗಳಿಂದ ವಸತಿ ಇಲಾಖೆಯದ್ದೇ ಪುರಾಣ. ಜನತೆ ಕಣ್ಣಿಗೆ ಮಂಕುಬೂದಿ ಎರಚುವ ಕೆಲಸ ಮಾಡಲಾಗುತ್ತಿದೆ. ಸರಕಾರಕ್ಕೆ ಜನರ ಭಯ ಭಕ್ತಿ ಇಲ್ಲದಾಗಿದೆ. ಬಿ.ಆರ್. ಪಾಟೀಲ್ ಶಾಸಕರಷ್ಟೇ ಅಲ್ಲ, ಅವರ ಶಾಸಕರಾದಾಗ ನಾವು ಯಾರೂ ಇನ್ನೂ ರಾಜಕಾರಣಕ್ಕೇ ಬಂದಿರಲಿಲ್ಲ. ಅವರು ಹಿರಿಯ ವ್ಯಕ್ತಿ. ಅವರ ಹಿನ್ನೆಲೆಯನ್ನು ನೋಡಿದ್ದೇವೆ. ಅನುಭವುಳ್ಳ ನಾಯಕರು. ಅಂಥವರ ಕ್ಷೇತ್ರದಲ್ಲಿ 950 ಮನೆಗಳನ್ನು ಶಾಸಕರ ಗಮನಕ್ಕೆ ಬಾರದಂತೆ ವಸತಿ ಇಲಾಖೆಯಿಂದ ನೀಡಿದ್ದಾರೆ! ಪಾಟೀಲ್ ಅವರು ಸಚಿವರ ಆಪ್ತ ಕಾರ್ಯದರ್ಶಿಗೆ ಮೊಬೈಲ್ ಕರೆ ಮೂಲಕ ಪ್ರಶ್ನೆ ಮಾಡಿದರೆ, ಅವರು ಏನು ಉತ್ತರ ನೀಡಿದ್ದಾರೆ ಎಂಬುದು ಆಡಿಯೋ ಮೂಲಕ ವೈರಲ್ ಆಗಿದೆ. ನಿಖರವಾದ ಪ್ರಕರಣ ಇದ್ದರೆ ದೂರು ಕೊಡಿ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಶಾಸಕರಿಗೆ ಉತ್ತರ ಕೊಡುತ್ತಾರೆ. ಆ ವ್ಯಕ್ತಿಗೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಕೊಟ್ಟಿದ್ದಾರಾ ಸಚಿವರು ವಸೂಲಿ ಮಾಡುವ ಪವರ್ ಕೊಟ್ಟಿದ್ದಾರಷ್ಟೇ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.



### ರಾಜ್ಯದ ಶಾಸಕರಿಗೂ ಬಂದಿರುವುದು ದುರದೃಷ್ಟಕರ

### ಮುಖ್ಯಮಂತ್ರಿ ಕೊಟ್ಟಿರುವ ಭರವಸೆ ಈಡೇರಿಲ್ಲ

ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿ ಎನ್ನುವವರು ಇದ್ದಾರಾ ಸರಕಾರ ಎನ್ನುವುದು ಇದೆಯಾ ಡಿಸಿಎಂ ನೋಡಿದರೆ ವಿಷಯ ತಿಳಿದುಕೊಂಡು ಹೇಳುತ್ತೇನೆ ಎಂದು ಕದ್ದು ಓಡುತ್ತಾರೆ. ಶಾಸಕಾಂಗ ಸಭೆಯಲ್ಲಿ ಮುಖ್ಯಮಂತ್ರಿ ಕೊಟ್ಟಿರುವ ಭರವಸೆ ಈಡೇರಿಲ್ಲ. ವಿರೋಧ ಪಕ್ಷಗಳು ಅಸೂಯೆಯಿಂದ ಮಾತಾಡುತ್ತಿಲ್ಲ. ಸಿಎಂ ಅವರೇ, ನಿಮ್ಮ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ. ನಿಮ್ಮ ಶಾಸಕರಿಗೆ ತಬರನ ಪರಿಸ್ಥಿತಿ ಬಂದಿದೆ. ಶಾಸಕರು ತಮ್ಮ ಕ್ಷೇತ್ರಗಳಿಗೆ ಅನುದಾನ ಕೇಳುತ್ತಿದ್ದಾರೆ. ಆದರೆ, ಕಮೀಷನ್ ಕೊಟ್ಟವರಿಗೆ ಮಾತ್ರ ಅನುದಾನ ಸಿಗುತ್ತಿದೆ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

# ಬೆಂಗಳೂರು ದಕ್ಷಿಣದಿಂದ ಜನಜೀವನ ಬದಲಾವಣೆ

• ಉದಯವಾಹಿನಿ, ಹಾರೋಹಳ್ಳಿ

ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಮ್ಮೆ

ಬೆಂಗಳೂರು ದಕ್ಷಿಣ ಎಂಬ ಜಿಲ್ಲಾ ಹೆಸರು ಬದಲಾವಣೆಯಿಂದ ಜಿಲ್ಲೆಯ ಜನತೆಯ ಜನಜೀವನವೂ ಬದಲಾವಣೆಯಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪ್ರತಿಪಾದಿಸಿದರು.

ಹಾರೋಹಳ್ಳಿ ತಾಲ್ಲೂಕಿನ ಮರಳವಾಡಿಯ ಗಾಂಧಿ ಫಾರಂ ಬಳಿ ಕರಿಯಪ್ಪ ಕೃಷಿ ಮಹಾವಿದ್ಯಾಲಯದ ಕಟ್ಟಡಕ್ಕೆ ಶಿವಕುಮಾರ್ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಹೆಸರು ಬದಲಾವಣೆ ಕಾರಣಕ್ಕೆ ಏನೆಲ್ಲಾ ಬದಲಾವಣೆಯಾಗುತ್ತಿದೆ ಎಂಬುದು ಜನರಿಗೆ ಅರ್ಥವಾಗುತ್ತಿದೆ. ಕೆಲವೊಬ್ಬರು ಇದನ್ನು ಟೀಕೆ ಮಾಡುತ್ತಿದ್ದಾರೆ. ಅವರುಗಳಿಗೆ ನಾನು ಉತ್ತರ ನೀಡಲು ಹೋಗುವುದಿಲ್ಲ. ನಾವು ನಮಗೆ ಇರುವ ಹೆಸರನ್ನು ಉಳಿಸಿಕೊಂಡಿದ್ದೇವೆ. ಯಾರ ಹೆಸರನ್ನು ಕಿತ್ತುಕೊಂಡಿಲ್ಲ ಎಂದರು.

ನಾನು ಈ ಹಿಂದೆ ಬೆಂಗಳೂರು ಗ್ರಾಮಾಂತರದ ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದೆ. ಸುರೇಶ್ ಅವರು ಬೆಂಗಳೂರು ಹಾಲು ಒಕ್ಕೂಟದ ಸದಸ್ಯರಾಗಿದ್ದಾರೆ. ಸಂಸತ್ ಕ್ಷೇತ್ರವನ್ನು ಬೆಂಗಳೂರು ಗ್ರಾಮಾಂತರ ಎಂದು ಕರೆಯಲಾಗುತ್ತದೆ. ಎಲ್ಲಿಂದ ಎಲ್ಲಿಗೆ ಹೋದರು ಅಮೆರಿಕಾ ಎನ್ನುತ್ತಾರೆ. ಅದೇ ರೀತಿ ಇದೂ ಕೂಡ ಬೆಂಗಳೂರು ಎಂದು ಹೇಳಿದರು.

ರೂರಲ್ ಎಜುಕೇಶನ್ ಸೊಸೈಟಿ ಉಳಿಸಿ, ಬೆಳೆಸುವುದು ನನ್ನ ಕೆಲಸ. ಜನಸಾಮಾನ್ಯರ ಮಕ್ಕಳಿಗಾಗಿ ಈ ಸಂಸ್ಥೆಯಿಂದ ಕೃಷಿ ಕಾಲೇಜು ನಿರ್ಮಾಣವಾಗಿದೆ. ಈ ಸಂಸ್ಥೆ ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಮ್ಮೆ ಎಂದರು.



**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,069/Gram24ct ₹9,230/Gram22ct | ಬೆಳ್ಳಿ: ₹110.00/Gram

## ಸಹಕಾರನಗರದಲ್ಲಿ ಟಿಟಿಡಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸಹಕಾರನಗರದ ಶ್ರೀಮದುತ್ತರಾದಿ ಮಠದಲ್ಲಿ ಜೂನ್ 24 ರಿಂದ 27ರ ವರೆಗೆ ವಿವಿಧ ಧಾರ್ಮಿಕ। ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು



ಅವುಗಳ ವಿವರಗಳು ಈ ರೀತಿ ಇವೆ : ಜೂನ್ 24, ಮಂಗಳವಾರ ಸಂಜೆ 6-00ಕ್ಕೆ ಶ್ರೀಕೃಷ್ಣಾಮೃತ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7-00ಕ್ಕೆ ಶ್ರೀ ಪ್ರಾಣೇಶಾಚಾರ್ಯ ಚೆಟ್ಟಿಯವರಿಂದ ತಿರುಪತಿ ಕ್ಷೇತ್ರದ ಮಹಿಮೆ ಧಾರ್ಮಿಕ ಪ್ರವಚನ. ಜೂನ್ 25, ಬುಧವಾರ : ಸಂಜೆ 6-00ಕ್ಕೆ ಶ್ರೀ ವೇಣುಗೋಪಾಲ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7-00ಕ್ಕೆ ಶ್ರೀ ಪ್ರಾಣೇಶಾಚಾರ್ಯ ಚೆಟ್ಟಿಯವರಿಂದ ತಿರುಪತಿ ಕ್ಷೇತ್ರದ ಮಹಿಮೆ ಧಾರ್ಮಿಕ ಪ್ರವಚನ. ಜೂನ್ 26, ಗುರುವಾರ ಸಂಜೆ 6-00ಕ್ಕೆ ಹರಿನಾಮ ಸಂಕೀರ್ತನೆ. ಗಾಯನ : ಕು|| ಅಭಿಜ್ಞಾ ಪಿ. ಕಶ್ಯಪ್, ಪಿಟೀಲು : ವಿದುಷಿ ಭಾರ್ಗವಿ, ಮೃದಂಗ : ವಿದ್ವಾನ್ ನಟರಾಜ್. ಜೂನ್ 27, ಶುಕ್ರವಾರ : ಸಂಜೆ 6-00ಕ್ಕೆ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7-00ಕ್ಕೆ ಶ್ರೀ ಪ್ರಾಣೇಶಾಚಾರ್ಯ ಚೆಟ್ಟಿಯವರಿಂದ ತಿರುಪತಿ ಕ್ಷೇತ್ರದ ಮಹಿಮೆ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀಮದುತ್ತರಾದಿಮಠ, ಸಹಕಾರನಗರ, ಬೆಂಗಳೂರು-560092

## ಪೊಲೀಸ್ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ

• ಉದಯವಾಹಿನಿ, ಬೆಂಗಳೂರು

ಸಂಚಾರ ನಿಯಮ ಉಲ್ಲಂಘಿಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬೈಕ್ ಸವಾರರೊಬ್ಬರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜ್ಞಾನಭಾರತಿ ನಿವಾಸಿ ನವೀನ್ ಗೌಡ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಜೂನ್ 21ರಂದು ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಸಿ.ಕುಮಾರ್, ದ್ವಾರಕಾನಾಥ್ ಅವರು ಕೃಷ್ಣ ಅರಮನೆ ಹೋಟೆಲ್ ಸಮೀಪದಲ್ಲಿರುವ ಎಸ್‌ಬಿಐ ಬ್ಯಾಂಕ್ ಬಳಿ ವಾಹನ ತಪಾಸಣೆ ಕೈಗೊಂಡಿದ್ದರು. ಉಲ್ಲಾಳ ಕಡೆಯಿಂದ ಬೈಕ್‌ನಲ್ಲಿ ಹೆಲ್ಮೆಟ್ ಧರಿಸದೆ ಬರುತ್ತಿದ್ದ ಆರೋಪಿಯ ವಾಹನ ತಡೆದು, ತಪಾಸಣೆ ನಡೆಸಿದರು. ಹೆಲ್ಮೆಟ್ ಧರಿಸದ ಕಾರಣಕ್ಕೆ ದಂಡ ಪಾವತಿಸುವಂತೆ ಆರೋಪಿಗೆ ಸೂಚಿಸಲಾಯಿತು. ಇದರಿಂದ ಕುಪಿತಗೊಂಡ ನವೀನ್ ಗೌಡ, ದಂಡ ಹಾಕಲು ಹೇಳಿದವರು ಯಾರು? ಹೆಲ್ಮೆಟ್ ಧರಿಸುವುದಿಲ್ಲ, ದಂಡ ಪಾವತಿಸುವುದಿಲ್ಲ. ದಂಡ ವಿಧಿಸುತ್ತಿರುವುದನ್ನು ನೋಡಿಯೇ ಉದ್ದೇಶಪೂರ್ವಕವಾಗಿ ಹೆಲ್ಮೆಟ್ ಧರಿಸದೇ ಬಂದಿದ್ದೇನೆ. ನನ್ನ ಮೇಲೆ ದೌರ್ಜನ್ಯ ಮಾಡುತ್ತೀರಾ ಎಂದು ಏರುದನಿಯಲ್ಲಿ ಮಾತನಾಡಿದ್ದಾನೆ' ಎಂದು ಪಿಎಸ್‌ಐ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ. ಅಲ್ಲದೇ ಜೆಡಿಎಸ್‌ನ ಸ್ಥಳೀಯ ಘಟಕದ ಅಧ್ಯಕ್ಷ ನಾನು ಎಂದು ಹೇಳಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ. ಬಳಿಕ ನಾವು ನೀಡಿದ ನಿರ್ದೇಶನಗಳನ್ನು ಪಾಲಿಸದೇ ಬೈಕ್ ತೆಗೆದುಕೊಂಡು ಹೋಗಿದ್ದಾನೆ. ಕಾನೂನು ಪ್ರಕಾರ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಹೇಳಿದ್ದಾರೆ. ಆರೋಪಿಯನ್ನು ಬಂಧಿಸಿ, ಬೈಕ್ ವಶಪಡಿಸಿಕೊಳ್ಳಲಾಗಿದೆ. ಆತ ಸ್ಥಳೀಯ ಘಟಕದ ಜೆಡಿಎಸ್ ಅಧ್ಯಕ್ಷ ಅಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

## ರೈತರ ನೆರವಿಗೆ ಧಾವಿಸುವಂತೆ ಪ್ರಧಾನಿ ಮೋದಿಗೆ ಹೆಚ್.ಡಿ ದೇವೇಗೌಡ ಮನವಿ

• ಉದಯವಾಹಿನಿ, ಬೆಂಗಳೂರು

ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಪ್ರಧಾನಮಂತ್ರಿ, ನರೇಂದ್ರ ಮೋದಿಯವರಿಗೆ ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಅವರು ಮನವಿ ಮಾಡಿಕೊಂಡಿದ್ದಾರೆ. ಈ ಕುರಿತು ಪ್ರಧಾನಿ ಮೋದಿ ಹಾಗೂ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್‌ಗೆ ಅವರಿಗೆ ದೇವೇಗೌಡ ಅವರು ಪತ್ರ ಬರೆದಿದ್ದಾರೆ. ಪತ್ರದಲ್ಲಿ ಕರ್ನಾಟಕದ ಗ್ರಾಮೀಣ ಭಾಗದ ಬೆಳೆಗಾರರು ಬೆಲೆ ಕುಸಿತದಿಂದ ತೀವ್ರ ಸಂಕಷ್ಟದಲ್ಲಿದ್ದಾರೆ.



ಕೇಂದ್ರ ಸರಕಾರ ಮಾರುಕಟ್ಟೆ ಮಧ್ಯಪ್ರವೇಶ ಮಾಡಿ, ನಫೆಡ್ ಮತ್ತು ಎನ್‌ಸಿಸಿಎಫ್ ಮೂಲಕ ತಕ್ಷಣ ಮಾವು ಖರೀದಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ. ಮಾವು ಕರ್ನಾಟಕದ ಪ್ರಮುಖ ತೋಟಗಾರಿಕಾ ಬೆಳೆಗಳಲ್ಲಿ ಒಂದಾಗಿದೆ, ಇದನ್ನು 1.39 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ, ವಿಶೇಷವಾಗಿ ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ, ಆರ್‌ಬಿಐ ಋತುವಿನಲ್ಲಿ ಅಂದಾಜು 8-10 ಲಕ್ಷ ಟನ್ ಉತ್ಪಾದನೆಯಾಗುತ್ತದೆ. ಆದಾಗ್ಯೂ, ಪ್ರತಿಕೂಲ ಹವಾಮಾನ ಮತ್ತು ರೋಗಗಳಿಂದಾಗಿ, ಈ ವರ್ಷ ಮಾವಿನ ಇಳುವರಿ ಶೇಕಡಾ 30 ಕ್ಕಿಂತ ಕಡಿಮೆಯಾಗಿದೆ. ಮಾವು ಬೆಲೆಗಳು ಕ್ವಿಂಟಲ್‌ಗೆ 12,000 ರೂ.ಗಳಿಂದ 2,000 ರೂ.ಗಳಿಗೆ ಇಳಿದಿವೆ, ಆದರೆ ಕೃಷಿ ವೆಚ್ಚ ಮಾತ್ರ ಕ್ವಿಂಟಲ್‌ಗೆ 5,466 ರೂ.ಗಳಷ್ಟಿದೆ.

ಇದು ರೈತರಿಗೆ ಆರ್ಥಿಕವಾಗಿ ಒತ್ತಡವನ್ನುಂಟು ಮಾಡಿದೆ, ಅನೇಕ ಸಣ್ಣ ಮತ್ತು ಅತಿ ಸಣ್ಣ ಮಾವು ಬೆಳೆಗಾರರು ಮೂಲಭೂತ ವೆಚ್ಚಗಳನ್ನು ಸಹ ಭರಿಸಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದ ಗಡಿಯಲ್ಲಿರುವ ಚಿತ್ತೂರು ಜಿಲ್ಲೆಗೆ ತೋತಾಪುರಿ ಮಾವಿನ ಹಣ್ಣುಗಳನ್ನು ಪ್ರವೇಶಿಸುವುದನ್ನು ಆಂಧ್ರಪ್ರದೇಶ ನಿಷೇಧಿಸಿರುವುದರಿಂದ ಪೂರೈಕೆ ಸರಪಳಿಯಲ್ಲಿ ಅಡ್ಡಿಯಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ವಿವಿಧ ಯೋಜನೆಗಳ ಮೂಲಕ ಸಾಕಷ್ಟು ಆರ್ಥಿಕ ಪ್ರಯೋಜನಗಳನ್ನು ಒದಗಿಸುವ ಮೂಲಕ ಮಾವು ಬೆಳೆಗಾರರಿಗೆ ನೆರವಾಗಬೇಕು. ಬೆಂಬಲ ಬೆಲೆಯಡಿ ಮಾವು ಖರೀದಿಸಬೇಕು ಎಂದು ಮನವಿ ಮಾಡಿದ್ದಾರೆ.

### ತಂತ್ರಜ್ಞಾನದ ಮೂಲಕ ದುರ್ವಾಸನೆ ಮುಕ್ತ ಕಸ ವಿಲೇವಾರಿ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಭರವಸೆ

# ನಗರದ ಇನ್ನೂ ಹೆಚ್ಚಿನ ಸ್ವಚ್ಛತೆಗಾಗಿ ಸಿಟಿಕ್ಯಾಟ್ ಕಸ ಗುಡಿಸುವ ಯಂತ್ರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಈಗಾಗಲೇ ಸಾವಿರಾರು ಮಂದಿ ಪೌರಕಾರ್ಮಿಕರಿದ್ದು, ಹಲವು ಎಲೆಕ್ಟ್ರಾನಿಕ್ ಕಸ ಗುಡಿಸುವ ಯಂತ್ರಗಳೂ ಕೆಲಸ ನಿರ್ವಹಿಸುತ್ತಿವೆ. ಆದರೆ ನಗರದ ಇನ್ನೂ ಹೆಚ್ಚಿನ ಸ್ವಚ್ಛತೆಗಾಗಿ ಸಿಟಿಕ್ಯಾಟ್ ಕಸ ಗುಡಿಸುವ ಯಂತ್ರ ಪರಿಚಯಿಸಲಾಗಿದೆ ಎಂದು ಡಿಕೆಶಿ ಹೇಳಿದ್ದಾರೆ. ಅಲ್ಲದೆ ಇನ್ನೂ ಹೆಚ್ಚಿನ ಯಂತ್ರಗಳನ್ನು ಖರೀದಿಸುವುದಾಗಿಯೂ ಹೇಳಿದ್ದಾರೆ.

ಬೆಂಗಳೂರನ್ನು ಸ್ವಚ್ಛವಾಗಿ ಮತ್ತು ಸ್ಮಾರ್ಟ್ ಆಗಿ ಮಾಡಲು ಸರ್ಕಾರವು ಶ್ರಮಿಸುತ್ತಿದೆ. ಹೊಸ ಸಿಟಿಕ್ಯಾಟ್ ವಾಹನವು ರಸ್ತೆಗಿಳಿಯಲು ಸಿದ್ಧವಾಗಿದೆ. ಇದು ಕೇವಲ ಯಂತ್ರವಲ್ಲ, ಸ್ವಚ್ಛ ಮತ್ತು ಹಸಿರು ಭವಿಷ್ಯದ ಸಂಕೇತ ಎಂದು ಶಿವಕುಮಾರ್ ಅವರು ಎಕ್ಸ್ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಸ್ವಚ್ಛ ಬೆಂಗಳೂರು, ಸ್ಮಾರ್ಟ್ ಬೆಂಗಳೂರು. ಅತ್ಯಾಧುನಿಕ ವಾಹನವು ಬೆಂಗಳೂರಿನ ಬೀದಿಗಳಲ್ಲಿ ಕೆಲಸ ಮಾಡಲು ಸಿದ್ಧವಾಗಿದೆ. ಇದು ಕೇವಲ ಯಂತ್ರವಲ್ಲ ಇದು ಸ್ವಚ್ಛ, ಹಸಿರು ಭವಿಷ್ಯದ ಬದ್ಧತೆಯ ಸಂಕೇತವಾಗಿದೆ. ನಾವು ನಮ್ಮ ನಗರವನ್ನು ಒಂದು ದಿಟ್ಟ ಹೆಜ್ಜೆಯೊಂದಿಗೆ ಪರಿವರ್ತಿಸುತ್ತಿದ್ದೇವೆ. ಬೆಂಗಳೂರು ಹೊಳೆಯುವವರೆಗೆ ನಾವು ನಿಲ್ಲುವುದಿಲ್ಲ, ಎಂದು ಅವರು ಪೋಸ್ಟ್ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ಪರಿಸರ ಇಲಾಖೆ ಯೊಂದಿಗೆ ಚರ್ಚೆ**

**2027 ಕ್ಕೆ ಕೋಲಾರಕ್ಕೆ ಎತ್ತಿನಹೊಳೆ ನೀರು:** 2027ರ ವೇಳೆಗೆ ಕೋಲಾರಕ್ಕೆ ಎತ್ತಿನಹೊಳೆ ನೀರು ತಲುಪಿಸುವ ಸರ್ಕಾರದ ಬದ್ಧತೆಯನ್ನು ಅವರು ಪುನರುಚ್ಚರಿಸಿದ್ದಾರೆ. ಪರಿಸರ ಇಲಾಖೆಯೊಂದಿಗೆ ಚರ್ಚೆ ನಡೆಸಲಾಗಿದ್ದು, ಶೀಘ್ರದಲ್ಲೇ ಯೋಜನೆ ಪೂರ್ಣಗೊಳ್ಳಲಿದೆ ಎಂದು ಅವರು ಭರವಸೆ ನೀಡಿದ್ದಾರೆ.

**ಹೊಸ ತಂತ್ರಜ್ಞಾನದ ಮೂಲಕ ದುರ್ವಾಸನೆ ಮುಕ್ತ ಕಸ ವಿಲೇವಾರಿ ಕೇಂದ್ರ**

**ಇನ್ನು ಕಸದ ವಿಚಾರವಾಗಿ ನೀವು ಪ್ರಸ್ತಾಪ ಮಾಡಿದ್ದೀರಿ. ಕಸ ವಿಲೇವಾರಿಗೆ ಸಂಬಂಧಿಸಿದಂತೆ ದೆಹಲಿ, ಚೆನ್ನೈ, ಹೈದರಾಬಾದ್‌ನಲ್ಲಿ ಅಧ್ಯಯನ ಮಾಡಿದ್ದೇವೆ. ಹೊಸ ಮಾದರಿಯಲ್ಲಿ ಒಂದು ದಿನದಲ್ಲಿ ಬಂದ ಕಸವನ್ನು ಮೂರು ದಿನಗಳಲ್ಲಿ ಖಾಲಿ ಮಾಡುವಂತೆ ಸುಡಲಾಗುವುದು. ಈಗಿನಂತೆ ಕಸವನ್ನು ತಂದು ಸುರಿಯುವುದಿಲ್ಲ. ಈ ಕಸದಿಂದ ವಿದ್ಯುತ್ ಹಾಗೂ ಅನಿಲ ಉತ್ಪಾದನೆ ಮಾಡಲಾಗುವುದು ಎಂದರು.**

ಬೈರಗೊಂಡ, ಲಕ್ಕೇನಹಳ್ಳಿಯಲ್ಲಿ ಜಲಾಶಯ ನಿರ್ಮಾಣ ಕಾಮಗಾರಿಗಳ ಸಂಬಂಧಿಸಿದಂತೆ ಅರಣ್ಯ ಇಲಾಖೆಯೊಂದಿಗೆ ಮಾತುಕತೆ ನಡೆಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ, ಹಣಕಾಸಿನ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. 2027ರೊಳಗೆ ಕೋಲಾರಕ್ಕೆ ನೀರು ತಲುಪಿಸುವುದು ಸರ್ಕಾರದ ಗುರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅರಣ್ಯ ಇಲಾಖೆಯೊಂದಿಗೆ ಚರ್ಚಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ, ಬೈರಗೊಂಡ, ಲಕ್ಕೇನಹಳ್ಳಿಯಲ್ಲಿ ಸಮತೋಲನ ಜಲಾಶಯ ನಿರ್ಮಾಣಕ್ಕೆ ಸಂಬಂಧಿಸಿದ ಹಣಕಾಸು ವಿಷಯಗಳ ಬಗ್ಗೆಯೂ ಚರ್ಚಿಸಲಾಗಿದೆ. ಸಚಿವರ ಸಲಹೆಗಳನ್ನು ಆಧರಿಸಿ ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡಲಾಗುವುದು. ತಾಂತ್ರಿಕ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಎತ್ತಿನಹೊಳೆ ಯೋಜನೆಗೆ ಸರ್ಕಾರವು ಹೆಚ್ಚಿನ ಆದ್ಯತೆ ನೀಡಿದೆ. ಬೇರೆ ಯೋಜನೆಗಳು ವಿಳಂಬವಾದರೂ ಚಿಂತೆಯಿಲ್ಲ. ಆದರೆ, ಈ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

**ಎತ್ತಿನಹೊಳೆ ಯೋಜನೆಯಲ್ಲಿ ಮೊದಲು ಕುಡಿಯುವ ನೀರು ಪೂರೈಕೆ, ನಂತರ ಕೆರೆಗಳಿಗೆ ನೀರು:** ಎತ್ತಿನಹೊಳೆ ಯೋಜನೆಯಲ್ಲಿ ಮೊದಲು ಕುಡಿಯಲು 14 ಟಿಎಂಸಿ ನೀರನ್ನು ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಇತರ ತಾಲ್ಲೂಕಿಗೆ ನೀಡಬೇಕು. ಇದಾದ ನಂತರ ನಾವು ಕೆರೆ ತುಂಬಿಸಲಾಗುವುದು ಎಂದು ಡಿಸಿಎಂ ಅವರು ತಿಳಿಸಿದರು.

## ರಾಜ್ಯದಲ್ಲಿ ಶೀಘ್ರವೇ ಜಲಾಶಯಗಳು ಭರ್ತಿ!

• ಉದಯವಾಹಿನಿ, ಬೆಂಗಳೂರು

ನಿರಂತರ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ 120 ಅಡಿಗೂ ಹೆಚ್ಚಿದೆ. ಗರಿಷ್ಠ 124.80 ಅಡಿ ಸಾಮರ್ಥ್ಯವಿರುವ ಈ ಜಲಾಶಯಕ್ಕೆ ಒಳಹರಿವು 13,856 ಕ್ಯೂಸೆಕ್ಸ್ ನಷ್ಟು ಇದ್ದು ಸದ್ಯದಲ್ಲೇ ಭರ್ತಿಯಾಗುವ ಸಾಧ್ಯತೆಗಳಿವೆ.



ಉದಯವಾಹಿನಿ ಚಿತ್ರ

ಕೊಡಗು, ಚಿಕ್ಕಮಗಳೂರು, ಕೇರಳ ಭಾಗದಲ್ಲಿ ಮುಂಗಾರು ಮಳೆ ವ್ಯಾಪಕ ಪ್ರಮಾಣದಲ್ಲಿ ಬೀಳುತ್ತಿದ್ದು, ಇದರಿಂದ ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ. ಅದೇ ರೀತಿ ಜಲಾಶಯದ ಒಳಹರಿವು ನಿರಂತರವಾಗಿ ಏರಿಕೆಯಾಗುತ್ತಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, 49.45 ಟಿಎಂಸಿ ಅಡಿ ಗರಿಷ್ಠ ಸಾಮರ್ಥ್ಯವಿರುವ ಕೆಆರ್ ಎಸ್ ಜಲಾಶಯದಲ್ಲಿ 43.30 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಶೇ.88ರಷ್ಟು ಈಗಾಗಲೇ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 14.57 ಅಡಿಯಷ್ಟು ಮಾತ್ರ ನೀರು ಸಂಗ್ರಹವಾಗಿತ್ತು. ಜೂನ್ ತಿಂಗಳಿನಲ್ಲೇ ಕಾವೇರಿ ಕೊಳ್ಳದ ಜಲಾಶಯಗಳು ಭರ್ತಿಯಾಗುವ ಸಾಧ್ಯತೆಗಳಿದ್ದು, ಕುಡಿಯುವ ನೀರು ಹಾಗೂ ರೈತರ ಬೆಳೆಗಳಿಗೆ ನೀರಿನ ಸಮಸ್ಯೆ ನಿವಾರಣೆಯಾದಂತಾಗಿದೆ. ಕಾವೇರಿ ಜಲಾನಯನ ಭಾಗದಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿರುವುದರಿಂದ ಜಲಾಶಯಗಳಿಗೆ ಒಳಹರಿವು ನಿರಂತರವಾಗಿದೆ. ಹಾರಂಗಿ ಜಲಾಶಯ ಶೇ.74, ಹೇಮಾವತಿ ಶೇ.83, ಕಬಿನಿ ಜಲಾಶಯ ಶೇ.81ರಷ್ಟು ಭರ್ತಿಯಾಗಿದ್ದು, ಒಟ್ಟಾರೆ ನಾಲ್ಕೂ ಜಲಾಶಯಗಳಲ್ಲಿ ಶೇ.84ರಷ್ಟು ನೀರಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದುಪ್ಪಟ್ಟು ನೀರಿನ ಸಂಗ್ರಹವಿದೆ. ಜಲವಿದ್ಯುತ್ ಉತ್ಪಾದಿಸುವ ಲಿಂಗನಮಕ್ಕಿ, ವರಾಹಿ, ಸೂಫ ಜಲಾಶಯಗಳಿಗೂ ಒಳಹರಿವು ಹೆಚ್ಚಾಗಿದೆ.

ಈ ಮೂರು ಜಲಾಶಯಗಳಿಂದ 38 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ ನೀರು ಹರಿಯುತ್ತಿದ್ದು, ಒಟ್ಟಾರೆ ಶೇ.31ರಷ್ಟು ಭರ್ತಿಯಾಗಿವೆ.

ಕೃಷ್ಣ ಕೊಳ್ಳದ ಭದ್ರ, ತುಂಗಭದ್ರ, ಘಟ್ಟಪ್ರಭ, ಹಾಲಮಟ್ಟಿ, ನಾರಾಯಣಪುರ ಜಲಾಶಯಗಳಿಗೂ ಸಾಕಷ್ಟು ಒಳಹರಿವಿದೆ. ಈ ಜಲಾಶಯಗಳಲ್ಲಿ ಒಟ್ಟಾರೆ ಶೇ.51ರಷ್ಟು ನೀರು ಸಂಗ್ರವಾಗಿದ್ದು, ಒಳಹರಿವುಸು 1,45,000 ಕ್ಯೂಸೆಕ್‌ಗೂ ಹೆಚ್ಚಿದೆ. ಆಲಮಟ್ಟಿ ಜಲಾಶಯ ಶೇ.61ರಷ್ಟು, ನಾರಾಯಣಪುರ ಜಲಾಶಯ ಶೇ.78 ರಷ್ಟು ಭರ್ತಿಯಾಗಿವೆ.

ಆಲಮಟ್ಟಿ ಜಲಾಶಯಕ್ಕೆ 98 ಸಾವಿರಕ್ಕೂ ಹೆಚ್ಚು ಒಳಹರಿವಿದ್ದು, 50 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ನಾರಾಯಣಪುರ ಜಲಾಶಯಕ್ಕೆ 51 ಸಾವಿರಕ್ಕೂ ಹೆಚ್ಚು ನೀರು ಹರಿದುಬರುತ್ತಿದ್ದು, 44 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

## ಹಾಡಹಗಲೇ ಮೈಕೈ ಮುಟ್ಟಿ ಯುವತಿಗೆ ಲೈಂಗಿಕ ಕಿರುಕುಳ

• ಉದಯವಾಹಿನಿ, ಆನೇಕಲ್

ಅಂಗಡಿಗೆ ಹೊರಟಿದ್ದ ಯುವತಿಗೆ ಮೈ ಕೈ ಮುಟ್ಟಿ ಹಾಡಹಗಲೇ ಲೈಂಗಿಕ ಕಿರುಕುಳ ನೀಡಿರುವ ಘಟನೆ ಬೆಂಗಳೂರು ಹೊರವಲಯದ ಆನೇಕಲ್ ತಾಲ್ಲೂಕಿನ ಮೈಲಸಂದ್ರ ಬಳಿಯಲ್ಲಿ ನಡೆದಿದೆ.

ಸಂಜೆ 4 ಗಂಟೆ ಸುಮಾರಿಗೆ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ರೇಣುಕಾ ಯಲ್ಲಮ್ಮ ಬಡಾವಣೆಯಲ್ಲಿ ಗಾಂಜಾ ನಶೆಯಲ್ಲಿದ್ದ ಐದಾರು ಮಂದಿ ಕೃತ್ಯ ಎಸಗಿದ್ದಾರೆ. ಅಲ್ಲದೇ ಪ್ರತಿರೋಧ ತೋರಿದ ಯುವತಿ ಮೇಲೆ ಹಲ್ಲೆ ಕೂಡ ಮಾಡಿದ್ದಾರೆ. ಸಂತ್ರಸ್ತ ಯುವತಿ ದಿನಸಿ ತರಲು ಹೋಗಿದ್ದರು. ಈ ವೇಳೆ ಗಾಂಜಾ ನಶೆಯಲ್ಲಿದ್ದ ಕಿರಾತಕರು ಅಡ್ಡಗಟ್ಟಿ ಆಕೆಯ ಮೈಕೈ ಮುಟ್ಟಿ ಎಳೆದಾಡಿದ್ದಾರೆ. ಯುವತಿ ಪ್ರತಿರೋಧ ತೋರಿದ್ದಕ್ಕೆ ನಡುರಸ್ತೆಯಲ್ಲೇ ಹಲ್ಲೆ ಕೂಡ ಮಾಡಿದ್ದಾರೆ. ಹೇಗೋ ಆಕೆ ಸ್ಥಳೀಯರ ನೆರವಿನಿಂದ ತಪ್ಪಿಸಿಕೊಂಡಿದ್ದಾಳೆ. ಈ ವೇಳೆ ಸ್ಥಳೀಯರ ಮೇಲೂ ಹಲ್ಲೆ ನಡೆಸಿದ ಕಿಡಿಗೇಡಿಗಳು ಯುವತಿಯ ಮನೆಗೆ ನುಗ್ಗಿ ಹಲ್ಲೆ ನಡೆಸಲು ಯತ್ನಿಸಿದ್ದಾರೆ. ಮಹಿಳೆ ಮತ್ತು ಸ್ಥಳೀಯರ ಮೇಲಿನ ಹಲ್ಲೆ ದೃಶ್ಯ



ಉದಯವಾಹಿನಿ ಚಿತ್ರ

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿ.

ಈ ಸಂಬಂಧ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸಂತ್ರಸ್ತ ಯುವತಿ ಒಂದು ವಾರದ ಹಿಂದೆಯಷ್ಟೇ ರೇಣುಕಾ ಯಲ್ಲಮ್ಮ ಬಡಾವಣೆಯಲ್ಲಿ ಬಾಡಿಗೆ ಮನೆಗೆ ಬಂದಿದ್ದಳು. ಅಣ್ಣ ವಾಸವಿದ್ದ ಮನೆ ಸಮೀಪದಲ್ಲೇ ಬಾಡಿಗೆ ಮನೆ ಪಡೆದು ವಾಸಿಸುತ್ತಿದ್ದಳು. ನಿನ್ನೆ ಸಂಜೆ ಒಬ್ಬಂಟಿಯಾಗಿ ಸಾಗುವಾಗ ಕಿಡಿಗೇಡಿಗಳು ನೀಚ ಕೃತ್ಯ ಎಸಗಿದ್ದಾರೆ. ಈ ಸಂಬಂಧ ನಿನ್ನೆ ಸಂಜೆಯೇ ದೂರು ನೀಡಿದ್ದರೂ ಪೊಲೀಸರು ಪ್ರಕರಣ ದಾಖಲಿಸಿಲ್ಲ, ಆರೋಪಿಗಳನ್ನು ವಶಕ್ಕೆ ಪಡೆಯುವ ಕೆಲಸವನ್ನೂ ಮಾಡಿಲ್ಲ ಎಂದು ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ

## ಐಶ್ವರ್ಯ ಗೌಡ ವಂಚನೆ ಪ್ರಕರಣ

• ಉದಯವಾಹಿನಿ, ಬೆಂಗಳೂರು

ಹಲವಾರು ಜನರಿಗೆ ವಂಚನೆ ಮಾಡಿದ್ದಾರೆ ಎಂದು ಆರೋಪಿಸಲಾಗಿರುವ ಮಹಿಳೆಯ ವಿರುದ್ಧದ ಹಣ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಂಸದ ಡಿ ಕೆ ಸುರೇಶ್ ಸೋಮವಾರ ಜಾರಿ ನಿರ್ದೇಶನಾಲಯ (ಇಡಿ) ಮುಂದೆ ವಿಚಾರಣೆಗೆ ಹಾಜರಾಗಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಇದಕ್ಕೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ ಸುರೇಶ್, ಇಡಿಯವರು ವಿಚಾರಣೆಗೆ ಹಾಜರಾಗಿ ಎಂದು ತಿಳಿಸಿದ್ದಾರೆ. ನಾನು ಇದಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ. ಯಾವ ಮಾನದಂಡವಿಟ್ಟುಕೊಂಡು ನನ್ನನ್ನು ವಿಚಾರಣೆಗೆ ಕರೆದಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವೆ ಎಂದು ಹೇಳಿದರು.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ಇಡಿ ಎಲ್ಲೆ ಮೀರಿ ನಡೆಯುತ್ತಿದೆ ಎಂದು ಅನೇಕ ಬಾರಿ ಹೇಳಿವೆ. ಆದಾಗ್ಯೂ, ಎಚ್ಚೆತ್ತುಕೊಂಡಿಲ್ಲ ಎಂದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟಾಗುತ್ತಿದೆ ಎಂದರ್ಥ. ಅವರ ವ್ಯಾಪ್ತಿಯನ್ನು ಮೀರಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳುವುದು ನೋಡಿದರೆ ಸರ್ಕಾರವೊಂದರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ ಎನಿಸುತ್ತಿದೆ. ಏನು ಮಾಡುತ್ತಾರೆ ಎಂದು ನೋಡೋಣ ಎಂದು ಮಾರ್ಮಿಕವಾಗಿ ನುಡಿದರು. ಐಶ್ವರ್ಯ ಗೌಡ ನಿಮ್ಮ ಹೆಸರು ಹೇಳಿಕೊಂಡು ವಂಚನೆ ಮಾಡಿದ್ದಾರೆ. ನಿಮ್ಮ ಅವರ ನಡುವೆ ಹಣಕಾಸಿನ ವ್ಯವಹಾರ ನಡೆದಿದೆಯೇ ಎಂದಾಗ, ಆ ಮಹಿಳೆ ಹಾಗೂ ನಮ್ಮ ನಡುವೆ ಯಾವುದೇ ಹಣಕಾಸು ಹಾಗೂ ಇತರೇ ವಹಿವಾಟು ನಡೆದಿಲ್ಲ. ಅವರು ಮೂರ್ನಾಲ್ಕು ಬಾರಿ ಗೃಹ ಕಚೇರಿಯಲ್ಲಿ ಭೇಟಿ ಮಾಡಿ



**ಬೆಂಗಳೂರಿನಲ್ಲಿ ಮಾತನಾಡಿದ ಅವರು, ವಿಚಾರಣೆಗೆ ಹೋದಾಗ ಇದರ ಬಗ್ಗೆ ತಿಳಿಯುತ್ತದೆ. ಅವರ ಪ್ರಶ್ನೆಗಳು ಯಾವ ಹಾದಿಯಲ್ಲಿವೆ, ವಿಚಾರಣೆಗೂ ಪ್ರಕರಣಕ್ಕೂ ಸಂಬಂಧ ಇದೆಯೋ ಇಲ್ಲವೋ ಎಂದು ತಿಳಿಯುತ್ತದೆ. ಜೊತೆಯಲ್ಲಿ ವಕೀಲರು ಇರುತ್ತಾರೆ. ನಂತರ ಯಾವುದಕ್ಕೆ ಸಂಬಂಧವಿದೆ, ಅಸಂಬದ್ಧವಾಗಿದೆ ಎನ್ನುವುದರ ಬಗ್ಗೆ ಚರ್ಚೆ ನಡೆಸುತ್ತೇವೆ ಎಂದರು.**

ಕೆಲವೊಂದು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದರು ಎನ್ನುವ ಕಾರಣಕ್ಕೆ ಅವರ ಆಯೋಜನೆಯ ಕಾರ್ಯಕ್ರಮಗಳಿಗೆ ಹೋಗಿದ್ದೇನೆ. ಇದರ ಹೊರತಾಗಿ ಬೇರೇನೂ ಇಲ್ಲ. ಇದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡುತ್ತೇನೆ ಎಂದು ಸ್ಪಷ್ಟವಾಗಿ ನುಡಿದರು. ನಟರೊಬ್ಬರು ನಿಮ್ಮ ದನಿ ಅನುಕರಣೆ ಮಾಡಿ ವಂಚನೆ ಎಸಗಿರುವ ಬಗ್ಗೆ ಕೇಳಿದಾಗ, ಈ ಬಗ್ಗೆ ನಾನು ಮಾಧ್ಯಮಗಳ ಮೂಲಕ ತಿಳಿದುಕೊಂಡಿದ್ದೇನೆ. ಈ ಕುರಿತು ಪೊಲೀಸ್ ತನಿಖೆ ನಡೆಯುತ್ತಿದೆ.

## ರೂ.8 ಕೋಟಿ ಮೌಲ್ಯದ ಗ್ರಾಮ ಠಾಣಾ ಆಸ್ತಿ ರಕ್ಷಣೆ

• ಉದಯವಾಹಿನಿ,ಕೆ.ಆರ್.ಪುರ

ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಿದ್ದ ಸುಮಾರು ರೂ.8 ಕೋಟಿ ಮೌಲ್ಯದ ಗ್ರಾಮಠಾಣಾ ಆಸ್ತಿಯನ್ನು ಬಿದರಹಳ್ಳಿ ಗ್ರಾಮ ಪಂಚಾಯಿತಿ ಸಂರಕ್ಷಿಸಿದೆ.ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡ ಅಗ್ರಹಾರ ಗ್ರಾಮದಲ್ಲಿ ಸರ್ಕಾರಿ ಸ್ವತ್ತಿನ ಸಂಖ್ಯೆ 51/1 ರಲ್ಲಿ 125 ರೂ. 170 ಅಡಿ ವಿಸ್ತೀರ್ಣದ ಜಾಗವನ್ನು ಬಿದರಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಕಾರಣಿ ಸಮಿತಿ ನಿರ್ಧಾರದಂತೆ ರಕ್ಷಣೆ ಮಾಡಲಾಗಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಗ್ರಾಮ ಠಾಣಾ ಆಸ್ತಿಯನ್ನು ಪಡೆದುಕೊಂಡಿದ್ದ ನಾರಾಯಣರೆಡ್ಡಿ ಅವರ ಹೆಸರಿಗೆ ಖಾತೆ ಮಾಡಿಕೊಡಲು ಹಿಂದಿನ ಕಾರ್ಯನಿರ್ವಹಣ ಅಧಿಕಾರಿ ಮಂಜುನಾಥ್ ಆದೇಶ ನೀಡಿದ್ದರು. ಈ ಆದೇಶವನ್ನು ಪ್ರಶ್ನಿಸಿ ಗ್ರಾಮ ಪಂಚಾಯಿತಿ ಹೈಕೋರ್ಟ್ ಮೊರೆಹೋಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ನ್ಯಾಯಾಲಯ ಪ್ರಕರಣವನ್ನು ಇತ್ಯರ್ಥಪಡಿಸಿ. ಈ ವಿವಾದವನ್ನು ಗ್ರಾಮ ಪಂಚಾಯಿತಿಯೇ ನಿರ್ಧಾರ ಕೈಗೊಳ್ಳುವಂತೆ ಬಿದರಹಳ್ಳಿ ಗ್ರಾಮ ಪಂಚಾಯಿತಿಗೆ ಆದೇಶ ನೀಡಿತ್ತು. ನಂತರ ಗ್ರಾಮ ಸಭೆಯಲ್ಲಿ ದಾಖಲೆಗಳನ್ನೆಲ್ಲ ಪರಿಶೀಲಿಸಲಾಯಿತು. ನಾರಾಯಣರೆಡ್ಡಿ ಅವರು, ಜಾಗದ ಸಂಬಂಧ ಯಾವುದೇ ಅಧಿಕೃತ ದಾಖಲೆಗಳನ್ನು ಸಲ್ಲಿಸಿರಲಿಲ್ಲ ಎಂಬುದು ದೃಢಪಟ್ಟಿತು. ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ಆಸ್ತಿಯನ್ನು ಸಂರಕ್ಷಣೆ ಮಾಡಲಾಗಿದೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಮುನಿಯಪ್ಪ ಹೇಳಿದರು.

## ಚಿಕ್ಕಪೇಟೆಯಲ್ಲಿ ಇನ್ನೂ ಮುಗಿಯದ ವೈಟ್ ಟಾಪಿಂಗ್ ಕಾಮಗಾರಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನ ಅತಿದೊಡ್ಡ ಸಗಟು ಮಾರುಕಟ್ಟೆಗಳಲ್ಲಿ ಒಂದಾದ ಚಿಕ್ಕಪೇಟೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

ಮುಂದುವರೆದ ಕಾಮಗಾರಿಯಿಂದಾಗಿ ಮಾರುಕಟ್ಟೆ ಅಸ್ತವ್ಯಸ್ತಗೊಂಡಿದ್ದು, ವ್ಯಾಪಾರಸ್ಥರು ಬಿಬಿಎಂಪಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಚಿಕ್ಕಪೇಟೆ ಮೆಟ್ರೋ ನಿಲ್ದಾಣದ ಬಳಿ ಕೇವಲ ಶೇ.10ರಷ್ಟು ವೈಟ್-ಟಾಪಿಂಗ್ ಕೆಲಸ ಮಾತ್ರ ಉಳಿದಿದೆ ಎಂದು ಬಿಬಿಎಂಪಿ ಹೇಳುತ್ತಿದೆ. ಆದರೆ, ಬಾಕಿ ಉಳಿದಿರುವ ಕಾಮಗಾರಿ ಸಾಕಷ್ಟು ಸಮಸ್ಯೆಗಳನ್ನುಂಟು ಮಾಡುತ್ತಿದೆ ಎಂದು ವ್ಯಾಪಾರಸ್ಥರು ದೂರಿದ್ದಾರೆ. ಮೆಟ್ರೋ ಜಂಕ್ಷನ್ ಬಳಿ ಕಾಮಕಾರಿ ಕೆಲಸ ಬಾಕಿಯಿದ್ದು, ಅಲ್ಲಿ ಗಂಟೆಗೆ ಸಾವಿರಾರು ಜನರು ಮತ್ತು ವಾಹನಗಳು ಹಾದು ಹೋಗುತ್ತವೆ. ಅಪೂರ್ಣ ಕೆಲಸ



ಉದಯವಾಹಿನಿ ಚಿತ್ರ

ಮತ್ತು ಬ್ಯಾರಿಕೇಡ್‌ಗಳು ಈ ಪ್ರದೇಶದಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ಹೆಚ್ಚಿಸಿದೆ. ಕೆಲಸ ಪುನರಾರಂಭವಾಗುವ ಮೊದಲು ಮಳೆ ಪ್ರಾರಂಭವಾದರೆ, ಪ್ರವಾಹ ಪರಿಸ್ಥಿತಿ ಎದುರಾಗುತ್ತದೆ. ಅಲ್ಲದೆ, ರಸ್ತೆ ಪರಿಸ್ಥಿತಿಗಳು ಕೂಡ ಹಾಳಾಗುತ್ತದೆ ಎಂದು ಸ್ಥಳೀಯರು ಹೇಳಿದ್ದಾರೆ. ಕಾಮಗಾರಿ ಕೆಲಸಗಳಿಂದಾಗಿ ಈಗಾಗಲೇ ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಬಿಬಿಎಂಪಿ ಇನ್ನೂ ತಡ ಮಾಡಿದರೆ, ಮತ್ತಷ್ಟು ಸಮಸ್ಯೆಗಳು ಎದುರಾಗುತ್ತವೆ ಎಂದು ವ್ಯಾಪಾರಸ್ಥರೊಬ್ಬರು ಹೇಳಿದ್ದಾರೆ.

**ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಇಲ್ಲಿ ಸಂಚರಿಸಲು ಸಾಕಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ. ಆ ಮೊದಲು ಈ ವೃತ್ತವನ್ನು ದಾಟಲು ಕೇವಲ 5 ರಿಂದ 7 ನಿಮಿಷ ಸಮಯ ಬೇಕಾಗುತ್ತಿತ್ತು. ಆದರೆ, ರಸ್ತೆ ಕಾಮಗಾರಿಯಿಂದಾಗಿ 15 ರಿಂದ 20 ನಿಮಿಷಗಳ ಕಾಲ ಬೇಕಾಗುತ್ತಿದೆ. ಕಾಮಗಾರಿ ಕೆಲಸಗಳಿಂದಾಗಿ ಆಟೋಗಳೂ ಕೂಡ ಇಲ್ಲಿಗೆ ಬರಲು ಬಯಸುವುದಿಲ್ಲ ಎಂದು ವಿದ್ಯಾರ್ಥಿ ಆಕಾಶ್ ಅವರು ಹೇಳಿದ್ದಾರೆ.**

### ಕನಕಪುರ ಮುಖ್ಯ ರಸ್ತೆಯಲ್ಲಿ ದುಬಾರಿ ಬೆಲೆಯ ಆಸ್ತಿಗಳನ್ನು ಖರೀದಿಸಲು ಜನರು ಆಸಕ್ತಿ ತೋರಿಸುತ್ತಿದ್ದಾರೆ

# 2ನೇ ಏರ್ಪೋರ್ಟ್ ಹೆಸರಲ್ಲಿ ಗಗನಕ್ಕೇರಿದ ಭೂಮಿ ಬೆಲೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸ್ಥಳ ಇನ್ನೂ ಅಂತಿಮಗೊಂಡಿಲ್ಲ. ಆದರೆ ಕನಕಪುರ ಅಥವಾ ನೆಲಮಂಗಲ ಹೆಸರು ವೈರಲ್ ಆಗುತ್ತಿದ್ದು, ಈ ಎರಡು ಊರುಗಳ ಭೂಮಿ ಬೆಲೆಯೂ ಗಗನಕ್ಕೇರಿದೆ.

ಹೌದು ನಿಲ್ದಾಣದ ಸಂಭಾವ್ಯ ಸ್ಥಳಗಳಾದ ಕನಕಪುರ ರಸ್ತೆ ಮತ್ತು ನೆಲಮಂಗಲದ ಕುಣಿಗಲ್ ರಸ್ತೆಯಲ್ಲಿ ರಿಯಲ್ ಎಸ್ಟೇಟ್ ಬೆಲೆಗಳು ಗಗನಕ್ಕೇರಿವೆ. ಕಳೆದ 6 ತಿಂಗಳಲ್ಲಿ ಕನಕಪುರ ರಸ್ತೆಯಲ್ಲಿ ಭೂಮಿಯ ಬೆಲೆ ಏಕಾಏಕಿ 2 ಕೋಟಿ ರೂ.ಯಿಂದ 4 ಕೋಟಿ ರೂಪಾಯಿಗೆ ಏರಿದೆ. ಆದರೆ, ನೆಲಮಂಗಲದಲ್ಲಿ ಬೆಲೆಗಳು ನಿಧಾನವಾಗಿ ಹೆಚ್ಚಾಗುತ್ತಿದ್ರೆ, ಕನಕಪುರದಲ್ಲಿ ವೇಗವಾಗಿ ಬೆಲೆ ಏರತೊಡಗಿದೆ. ಕನಕಪುರ ರಸ್ತೆ ಅಥವಾ ನೆಲಮಂಗಲದ ಕುಣಿಗಲ್ ರಸ್ತೆಯಲ್ಲಿ ಬೆಂಗಳೂರಿನ ಎರಡನೇ ವಿಮಾನ ನಿಲ್ದಾಣ ನಿರ್ಮಾಣ ಆಗುವ ಸಾಧ್ಯತೆ ಇದೆ.

ಈ ಸುದ್ದಿ ಹೊರಬೀಳುತ್ತಿದ್ದಂತೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಭಾರಿ ಬದಲಾವಣೆಗಳಾಗಿವೆ. ಕನಕಪುರ ರಸ್ತೆಯಲ್ಲಿ ಆಸ್ತಿ ಬೆಲೆಗಳು ಗಗನಕ್ಕೇರುತ್ತಿರುವುದು ಆಶ್ಚರ್ಯ ಮೂಡಿಸಿದೆ.

**ಕೋವಿಡ್ ಬಳಿಕ ಅಭಿವೃದ್ಧಿ ಹೆಚ್ಚು:** ಕನಕಪುರ ರಸ್ತೆಯಲ್ಲಿ ಬಿಲ್ಡರ್‌ಗಳು, ಡೆವಲಪರ್‌ಗಳ ಓಡಾಟ ಹೆಚ್ಚಾಗಿದೆ. ಕೋವಿಡ್-19 ಸಾಂಕ್ರಾಮಿಕದ ನಂತರ ಈ ಪ್ರದೇಶದಲ್ಲಿ ಅಭಿವೃದ್ಧಿ ಹೆಚ್ಚಾಗಿದೆ.



ಉದಯವಾಹಿನಿ ಚಿತ್ರ

**ಜಮೀನಿನ ಬೆಲೆ ಈಗ 10-20% ರಷ್ಟು ಏರಿಕೆ**

ಈಗ ವಿಮಾನ ನಿಲ್ದಾಣದ ಸುದ್ದಿಯಿಂದ ಆಸಕ್ತಿ ಮತ್ತಷ್ಟು ಹೆಚ್ಚಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಇದರಿಂದಾಗಿ ಇಲ್ಲಿನ ಜಮೀನುಗಳ ಬೆಲೆಗಳು ಏರಿಕೆಯಾಗಿವೆ. ಕನಕಪುರ ರಸ್ತೆಯ ಮುಖ್ಯ ರಸ್ತೆಯಲ್ಲಿ ರೆಸ್ಟೋರೆಂಟ್ ನಡೆಸುತ್ತಿರುವ ಮಾಲೀಕರೊಬ್ಬರು ತಮ್ಮ ಅನುಭವ ಹಂಚಿಕೊಂಡಿದ್ದು ದೊಡ್ಡ ಬಿಲ್ಡರ್ ನನ್ನ ಜಮೀನನ್ನು ಮಾರಾಟ ಮಾಡಲು ಒತ್ತಾಯಿಸುತ್ತಿದ್ದಾರೆ. ಆದರೆ, ನಾನು ಮಾರಾಟ ಮಾಡುವುದಿಲ್ಲ. ವಿಮಾನ ನಿಲ್ದಾಣ ಖಚಿತವಾದರೆ, ಬೆಲೆಗಳು ಇನ್ನಷ್ಟು ಹೆಚ್ಚಾಗುತ್ತವೆ ಎಂದು ಅವರು ಹೇಳಿದ್ದಾರೆ. ಕನಕಪುರ ರಸ್ತೆ ಮತ್ತು ನೆಲಮಂಗಲದಲ್ಲಿ ಆಸ್ತಿಗಳನ್ನು ಹೊಂದಿರುವ ರಿಯಲ್ ಎಸ್ಟೇಟ್ ಡೆವಲಪರ್ ಒಬ್ಬರು ಈ ಬಗ್ಗೆ ಮಾತನಾಡಿದ್ದು, ಕನಕಪುರ ರಸ್ತೆಯಲ್ಲಿನ ಆಸ್ತಿಗಳ ಬಗ್ಗೆ ಖರೀದಿದಾರರು ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಕೆಲವು ಸಮಯದಿಂದ, ಜನರು ಪೂರ್ವ ಬೆಂಗಳೂರಿನಿಂದ ದಕ್ಷಿಣ ಬೆಂಗಳೂರಿಗೆ ಹೋಗುತ್ತಿದ್ದಾರೆ.

**ನಿವೇಶನಗಳ ಬೆಲೆ ಪ್ರತಿ ಎಕರೆಗೆ 12-18 ಕೋಟಿ ರೂಪಾಯಿ!**

**ದಕ್ಷಿಣ ಬೆಂಗಳೂರಿನ ಬ್ರೋಕರ್ ನಂದೀಶ್ ಎಸ್. ಅವರ ಪ್ರಕಾರ, ಇಲ್ಲಿನ ಹೊಸ ಆಸ್ತಿಗಳು ಬೇಗನೆ ಮಾರಾಟವಾಗುತ್ತಿವೆ. ಕನಕಪುರ ಮುಖ್ಯ ರಸ್ತೆಯಲ್ಲಿ ದುಬಾರಿ ಬೆಲೆಯ ಆಸ್ತಿಗಳನ್ನು ಖರೀದಿಸಲು ಜನರು ಆಸಕ್ತಿ ತೋರಿಸುತ್ತಿದ್ದಾರೆ. ಹೀಗಾಗಿ, 5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬೆಲೆಯ ಐಷಾರಾಮಿ ಆಸ್ತಿಗಳನ್ನು ನಿರ್ಮಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಪ್ರಾಪರ್ಟಿ ಕನ್ಸಲ್ಟೆಂಟ್ಸ್ ಪ್ರಕಾರ, ಕನಕಪುರ ಮುಖ್ಯ ರಸ್ತೆಯಲ್ಲಿನ ಕೆಲವು ನಿವೇಶನಗಳ ಬೆಲೆ ಪ್ರತಿ ಎಕರೆಗೆ 12-18 ಕೋಟಿ ರೂಪಾಯಿ ಇದೆ.**

ಎರಡನೇ ವಿಮಾನ ನಿಲ್ದಾಣದ ಸುದ್ದಿಯು ಆಸಕ್ತಿಯನ್ನು ಹೆಚ್ಚಿಸಿದೆ. ಕನಕಪುರ ರಸ್ತೆಯಲ್ಲಿನ ಆಸ್ತಿಗಳ ಬಗ್ಗೆ ವಿಚಾರಿಸುವ ಪ್ರತಿಯೊಬ್ಬ ಕ್ಲೈಂಟ್ ವಿಮಾನ ನಿಲ್ದಾಣದ ಬಗ್ಗೆ ಕೇಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

**ನೆಲಮಂಗಲದಲ್ಲಿ ಹೇಗಿದೆ ಪರಿಸ್ಥಿತಿ:** ನೆಲಮಂಗಲ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಕೂಡಾ ಅಭಿವೃದ್ಧಿ ನಿಧಾನಗತಿಯಲ್ಲಿ ಸಾಗುತ್ತಿದೆ. ಇಲ್ಲಿ ಪ್ಲಾಟ್ ಮತ್ತು ಕೈಗಾರಿಕಾ ಅಭಿವೃದ್ಧಿಗಳು ಹೆಚ್ಚಾಗಿ ನಡೆಯುತ್ತಿವೆ. ಕಳೆದ ವರ್ಷದವರೆಗೆ 1.5 ಕೋಟಿ ರೂಪಾಯಿಯಿಂದ 2 ಕೋಟಿ ರೂಪಾಯಿ ಇದ್ದ ಜಮೀನಿನ ಬೆಲೆ ಈಗ 10-20% ರಷ್ಟು ಏರಿಕೆಯಾಗಿದೆ. ಕೃಷಿ ಭೂಮಿಯ ಬೆಲೆ 4.5 ಕೋಟಿ ರೂಪಾಯಿಯಿಂದ 5 ಕೋಟಿ ರೂಪಾಯಿಗೆ ತಲುಪಿದೆ. ಕಳೆದ ವರ್ಷದಿಂದ ಬಾಡಿಗೆ ದರಗಳು ಕೂಡಾ 30% ರಷ್ಟು ಏರಿಕೆಯಾಗಿವೆ. ಇನ್ಸ್ಲೈಟ್ ರಿಯಲ್ಟರ್ಸ್, ಲೀಗಲ್ ಅಡ್ವೈಸರ್ಸ್‌ನ ಪಾಲುದಾರರಾದ ನುಸ್ರತ್ ಸೈಯದ್ ಹುಸೇನ್ ಅವರ ಪ್ರಕಾರ, ಈ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಬೆಲೆ ಏರಿಕೆಗೆ ವಿಮಾನ ನಿಲ್ದಾಣ ಮಾತ್ರ ಕಾರಣವಲ್ಲ. ಕನಕಪುರ ರಸ್ತೆ ಹಳೆಯ ಕಾರಿಡಾರ್ ಆಗಿದೆ. ಹಾಗಾಗಿ, ಅಭಿವೃದ್ಧಿಯ ವಿಷಯದಲ್ಲಿ ನೆಲಮಂಗಲದೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ. ಕ್ವಿನ್ ಸಿಟಿ ಮತ್ತು ಫಾಕ್ಸ್‌ಕಾನ್ ಈ ಭಾಗದಲ್ಲಿ ಬರುತ್ತಿವೆ. ಇದು ಈಗಾಗಲೇ ಸಾಕಷ್ಟು ಸದ್ದು ಮಾಡುತ್ತಿದೆ. ವಿಮಾನ ನಿಲ್ದಾಣವು ಅದಕ್ಕೆ ಮತ್ತಷ್ಟು ಬಲ ನೀಡುತ್ತದೆ ಎಂದು ಹೇಳಿದ್ದಾರೆ.

## ಡಾ. ಎಸ್. ರಾಮಚಂದ್ರಯ್ಯರವರಿಗೆ "ಶ್ರೀ ಎಚ್ ಡಿ ದೇವೇಗೌಡ ಪ್ರಶಸ್ತಿ"

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಅಭಿನಂದನ ಸಮಿತಿ ವತಿಯಿಂದ ಬೆಂಗಳೂರಿನ ಡಾ. ಬಾಬು ಜಗಜೀವನ್ ರಾಮ್ ಸಂಶೋಧನ ಸಂಸ್ಥೆಯಲ್ಲಿ ನಡೆದ ವಿವಿಧ ಕ್ಷೇತ್ರದ ಸಾಧಕರಿಗೆ "**ಶ್ರೀ ಹೆಚ್. ಡಿ ದೇವೇಗೌಡ ಪ್ರಶಸ್ತಿ**" ಪ್ರಧಾನ ಸಮಾರಂಭದಲ್ಲಿ ಶಿಕ್ಷಣ ಕ್ಷೇತ್ರದಿಂದ ಬೆಂಗಳೂರಿನ ಸುಂಕದಕಟ್ಟೆ ಮಾಗಡಿ ಮುಖ್ಯ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್, ಶ್ರೀ ಲಕ್ಷ್ಮಿ ಪಬ್ಲಿಕ್ ಸ್ಕೂಲ್ -CBSE, ಶ್ರೀ ಲಕ್ಷ್ಮಿ PU ಕಾಲೇಜ್, ಶ್ರೀ ಲಕ್ಷ್ಮಿ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್, ಶ್ರೀ ಲಕ್ಷ್ಮಿ ಪ್ಯಾರ ಮೆಡಿಕಲ್ ಕಾಲೇಜ್, ವರಲಕ್ಷ್ಮಿ ಸ್ಕೂಲ್ ಆಫ್ ನರ್ಸಿಂಗ್, ಶ್ರೀ ಲಕ್ಷ್ಮಿ ಕಾಲೇಜ್ ಆಫ್ ನರ್ಸಿಂಗ್, ಶ್ರೀ ಲಕ್ಷ್ಮಿ ಕಾಲೇಜ್ ಆಫ್ ಫಾರ್ಮಸಿ. ಫೌಂಡರ್, ಚೇರ್ಮನ್. ಡಾ. ಎಸ್ ರಾಮಚಂದ್ರಯ್ಯ ಅವರ ಶಿಕ್ಷಣ ಕ್ಷೇತ್ರದಿಂದ ಅವಿರತ ಸೇವೆಯನ್ನು ಹಾಗೂ ಸಮಾಜ ಸೇವೆಯನ್ನು ಗುರುತಿಸಿ ಶ್ರೀ ಎಚ್. ಡಿ. ದೇವೇಗೌಡ ಅಭಿನಂದನ ಸಮಿತಿಯವರು "ಶ್ರೀ ಎಚ್. ಡಿ. ದೇವೇಗೌಡ ಪ್ರಶಸ್ತಿ "ಪ್ರಧಾನ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರು, ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರವರು, ಆದಿಚುಂಚನಗಿರಿಯ ಸುತ್ತೂರು ವಿವಿಧ ಶ್ರೀಗಳಿಂದ ಪ್ರಶಸ್ತಿ ಪ್ರಧಾನ ಮಾಡಲಾಯಿತು. ವೇದಿಕೆಯಲ್ಲಿ ಸಹಸ್ರಾರು ಗಣ್ಯಮಾನರು ಸಾಕ್ಷಿಯಾದರು.



ಉದಯವಾಹಿನಿ ಚಿತ್ರ

# ಮೊಬೈಲ್ ಗೀಳು; ತಗ್ಗಿದ ಪುಸ್ತಕ ಓದು: ಚಿಕ್ಕವೀರಯ್ಯ

• ಉದಯವಾಹಿನಿ, ಬಿಡದಿ

ಅತಿಯಾದ ಮೊಬೈಲ್ ಬಳಕೆಯ ಗೀಳಿನಿಂದಾಗಿ ಪುಸಕ್ತಗಳನ್ನು ಓದುವ ಹವ್ಯಾಸ ಜನರಲ್ಲಿ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಮೊಬೈಲ್ ಫೋನ್ ಬಳಕೆಯಿಂದ ಯುವಜನರಷ್ಟೇ ಅಲ್ಲದೆ, ಎಲ್ಲಾ ವಯೋಮಾನದ ಓದುಗರು ಸಹ ಪುಸ್ತಕ ಓದಿನಿಂದ ವಿಮುಖರಾಗುತ್ತಿದ್ದಾರೆ ಎಂದು ಬನ್ನಿಕುಪ್ಪೆ ಬಿ ಕ್ಲಸ್ಟರ್‌ನ ಚಿಕ್ಕವೀರಯ್ಯ ಹೇಳಿದರು.ಇಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಕೇತಗಾನಹಳ್ಳಿಯಲ್ಲಿ ಇತ್ತೀಚೆಗೆ ನಡೆದ 'ರಾಷ್ಟ್ರೀಯ ಓದುವ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಓದುಗರನ್ನು ಮತ್ತೆ ಪುಸ್ತಕಗಳತ್ತ ಕರೆತರಲು, ಓದುವ ಅಭ್ಯಾಸ



ಉತ್ತೇಜಿಸಲು, ಪುಸ್ತಕಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು, ರಾಷ್ಟ್ರೀಯ ಓದುವ ದಿನವನ್ನು ಪ್ರತಿ ವರ್ಷ ಜೂನ್ 19ರಂದು ಆಚರಿಸಲಾಗುತ್ತದೆ' ಎಂದರು. 'ಕೇರಳದ ಗ್ರಂಥಾಲಯ ಮತ್ತು ಸಾಕ್ಷರತಾ ಆಂದೋಲನದ ಪಿತಾಮಹ ಪಿ.ಎನ್. ಪಣಿಕರ್ ಅವರ ಗೌರವಾರ್ಥವಾಗಿ ಭಾರತವು ರಾಷ್ಟ್ರೀಯ ದಿನವನ್ನು ಆಚರಿಸುತ್ತಿದೆ. ಓದುವುದೆಂದರೆ ಅರಿವನ್ನು ವಿಸ್ತರಿಸಿಕೊಳ್ಳುವುದು ಎಂದರ್ಥ. ಕಲ್ಪನಾ ಶಕ್ತಿ ಮತ್ತು ಏಕಾಗ್ರತೆ ಹೆಚ್ಚುತ್ತದೆ. ವಿದ್ಯಾರ್ಥಿಗಳಲ್ಲಿ ಬೇರೆ ವಿಷಯಗಳ ಬೆಸುಗೆಯಾಗಲು ಓದು ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಥಮ್ ಬುಕ್ಸ್ ಸಹಾಯಕ ನಿರ್ದೇಶಕ ಪ್ರದೀಪ್ ದೇವರಾಜ್, ಮಾರ್ಕೆಟಿಂಗ್ ಮ್ಯಾನೇಜರ್ ಜಾನ್ ವಿಕ್ಟರ್, ಮುಖ್ಯ ಶಿಕ್ಷಕಿ ಮಂಜುಳಾ, ಎಸ್‌ಡಿಎಂಸಿ ಅಧ್ಯಕ್ಷೆ ಅನುರಾಧ, ಸದಸ್ಯರಾದ ರೇಖಾ, ಮಂಗಳ, ಅಡುಗೆ ಸಿಬ್ಬಂದಿ ಪಾರ್ವತಮ್ಮ ಹಾಗೂ ಇತರರು ಇದ್ದರು.

# ಪ್ಲಾಸ್ಟಿಕ್ ವಿರುದ್ಧ ಚಿಂತಾಮಣಿ ಸಮರ

## ನಗರಸಭೆ ಸಿಬ್ಬಂದಿ ಸಾವಿರಕ್ಕೂ ಅಧಿಕ ದಾಳಿಗಳನ್ನು ನಡೆಸಿ, ರೂ.12 ಲಕ್ಷ ದಂಡ ಸಂಗ್ರಹ

• ಉದಯವಾಹಿನಿ, ಚಿಂತಾಮಣಿ

ಏಕ ಬಳಕೆ ಪ್ಲಾಸ್ಟಿಕ್ ಅನ್ನು ಸರ್ಕಾರ ನಿಷೇಧಗೊಳಿಸಿದೆ. ನಿಷೇಧಿತ ಪ್ಲಾಸ್ಟಿಕ್ ಉತ್ಪಾದಿಸುವ, ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ನಿಯಮವನ್ನೂ ರೂಪಿಸಿದೆ. ಆದರೆ ಇದು ಬಹುತೇಕ ನಗರ ಮತ್ತು ಪಟ್ಟಣಗಳಲ್ಲಿ ಕಾನೂನಿಗಷ್ಟೇ ಸೀಮಿತವಾಗಿದೆ. ಇವುಗಳಿಗೆ ತದ್ವಿರುದ್ಧ ಎನ್ನುವಂತೆ ಚಿಂತಾಮಣಿಯಲ್ಲಿ ಪ್ಲಾಸ್ಟಿಕ್ ವಿರುದ್ಧ ಸಮರ ಸಾರಲಾಗಿದೆ. ನಗರವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಬೇಕೆಂದು ಚಿಂತಾಮಣಿ ನಗರಸಭೆ ಪಣತೊಟ್ಟಿದ್ದು, ಇದಕ್ಕೆ ಬೇಕಾದ ಸಕಲ ಸಿದ್ಧತೆ ನಡೆಸುತ್ತಿದೆ. ನಿಷೇಧಿತ ಪ್ಲಾಸ್ಟಿಕ್ ಬಳಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತಿದೆ. ಹೋಟೆಲ್, ಬೇಕರಿ ಮತ್ತು ಅಂಗಡಿ-ಮುಂಗಟ್ಟುಗಳ ಮೇಲೆ ದಾಳಿ ನಡೆಸಿ, ಪ್ಲಾಸ್ಟಿಕ್ ವಶ ಪಡಿಸಿಕೊಂಡು, ದಂಡ ವಿಧಿಸುತ್ತಿದೆ.

ಇದುವರಗೆ ನಗರಸಭೆ ಸಿಬ್ಬಂದಿ ಸಾವಿರಕ್ಕೂ ಅಧಿಕ ದಾಳಿಗಳನ್ನು ನಡೆಸಿ, ?12 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಹಾಗೂ ನಗರಸಭೆ ಸಿಬ್ಬಂದಿ ಇಚ್ಛಾಶಕ್ತಿಯಿಂದ ಶೇ 95ರಷ್ಟು ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಸಾಧನೆ ಮಾಡಲಾಗಿದೆ. ಇನ್ನೂ ಕದ್ದು ಮುಚ್ಚಿ ನಡೆಯುತ್ತಿರುವ ಶೇ 5 ರಷ್ಟನ್ನು ಸಂಪೂರ್ಣ ನಿಯಂತ್ರಿಸಿ ಶೀಘ್ರದಲ್ಲೇ 'ಪ್ಲಾಸ್ಟಿಕ್ ಮುಕ್ತ ನಗರ' ಘೋಷಣೆಗೆ ಚಿಂತಾಮಣಿ ನಗರಸಭೆ ಅಣಿಯಾಗುತ್ತಿದೆ. ನಗರಸಭೆ ಪೌರಾಯುಕ್ತರು ಮತ್ತು ಸಿಬ್ಬಂದಿಗಳ ಶ್ರಮದಿಂದ ನಗರದಲ್ಲಿ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಬಂದಿದೆ. ಇದರಲ್ಲಿ ಸಾರ್ವಜನಿಕರ ವಿವೇಚನೆ ಮತ್ತು ಸಹಕಾರವು ಇದೆ. ತಳ್ಳುವ ಗಾಡಿ ವ್ಯಾಪಾರಸ್ಥರು, ಹಣ್ಣು, ಹೂ ಮಾರಾಟಗಾರರು ಸೇರಿದಂತೆ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಚೀಲ ಬದಲಾಗಿ ಪರಿಸರಸ್ನೇಹಿ ಚೀಲ ಮಾಡಲಾಗುತ್ತಿದೆ. ರಾಮೇಗೌಡ



> ಪ್ಲಾಸ್ಟಿಕ್ ಮುಕ್ತ ನಗರ ಮಾಡಲು ಜನರ ಸಹಕಾರ ಬೇಕು. ಪ್ಲಾಸ್ಟಿಕ್ ಮುಕ್ತ ಸಮಾಜ ಮನೆಯಿಂದಲೇ ಆರಂಭವಾಗಬೇಕು. ಸದಾ ಖಾದಿ ಬಟ್ಟೆಯ ಕೈಚೀಲ ಇರಬೇಕು. ಪ್ಲಾಸ್ಟಿಕ್ ಮುಕ್ತ ಸ್ವಚ್ಛ ಹಾಗೂ ಹಸಿರು ಚಿಂತಾಮಣಿ ಮಾಡಲು ನಗರಸಭೆಯ ಸಿಬ್ಬಂದಿ ಪೌರಕಾರ್ಮಿಕರು ಶ್ರಮಿಸುತ್ತಿದ್ದಾರೆ. ನಗರದ ರಸ್ತೆಗಳ ಇಕ್ಕೆಲ್ಲಗಳಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತಿದೆ.
>
> ಜಿ.ಎನ್.ಚಲಪತಿ ಪೌರಾಯುಕ್ತ

ಪೌರಾಯುಕ್ತರಾಗಿದ್ದಾಗ ಸ್ವಚ್ಛನಗರ ಎಂಬ ರಾಜ್ಯ ಮಟ್ಟದ ಪ್ರಶಸ್ತಿಗೆ ಚಿಂತಾಮಣಿ ನಗರಸಭೆ ಭಾಜನವಾಗಿತ್ತು. ಈಗ ಮತ್ತೆ ಸ್ವಚ್ಛ ಮತ್ತು ಹಸಿರು ನಗರವಾಗಿ ರೂಪಿಸುವ ಮೂಲಕ ಪ್ರಶಸ್ತಿ ರೇಸ್‌ನಲ್ಲಿ ಚಿಂತಾಮಣಿ ನಗರಸಭೆ.

ನಗರಸಭೆಯಿಂದ ತಳ್ಳುಗಾಡಿಯ ವರ್ತಕರು ಸೇರಿದಂತೆ ಎಲ್ಲ ವ್ಯಾಪಾರಿಗಳ ಸಭೆ ನಡೆಸಿ ಪ್ಲಾಸ್ಟಿಕ್‌ನಿಂದ ಆಗುತ್ತಿರುವ ಅನಾಹುತ ಬಗ್ಗೆ ಜಾಗೃತಿ ಮೂಡಿಸಲಾಯಿತು. ಜೊತೆಗೆ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ಬಿಟ್ಟು, ಪರಿಸರ ಸ್ನೇಹಿ ಚೀಲ ಬಳಸಲು ಮೂರು ತಿಂಗಳು ಕಾಲಾವಕಾಶ ನೀಡಲಾಗಿತ್ತು. ಇದರ ನಂತರವು

> ನಗರಸಭೆ ಕೈಗೊಂಡ ನಿರಂತರ ಜಾಗೃತಿ ಕಾರ್ಯಕ್ರಮಗಳಿಂದ ನಗರದಲ್ಲಿ ಸಂಗ್ರಹವಾಗುತ್ತಿದ್ದ 9 ಟನ್ ಕಸ 4ಟನ್‌ಗೆ ಇಳಿದಿದೆ. ಸುತ್ತಮುತ್ತಲಿನ ಪರಿಸರವನ್ನು ನಾಗರಿಕ ಸಮಾಜ ಗಂಭೀರವಾಗಿ ಪರಿಗಣಿಸಬೇಕು. ಪ್ಲಾಸ್ಟಿಕ್ ಬಳಕೆಯಿಂದ ಹೊರಬರುವ ಸಂಕಲ್ಪ ಕೈಗೊಳ್ಳಬೇಕು. ಪ್ಲಾಸ್ಟಿಕ್ ಮುಕ್ತ ನಗರ ನಿರ್ಮಾಣಕ್ಕೆ ಕಾನೂನು ಜತೆಗೆ ಸಾರ್ವಜನಿಕರ ಸಹಕಾರವು ಅಗತ್ಯ.
>
> ಡಾ.ಎಂ.ಸಿ.ಸುಧಾಕರ್ ಸಚಿವ

ಪ್ಲಾಸ್ಟಿಕ್ ಮಾರಾಟ ಮಾಡುವ ಮತ್ತು ಬಳಸುವವರ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಯಿತು. ದಾಳಿಯಲ್ಲಿ ಸಿಕ್ಕ ಪ್ಲಾಸ್ಟಿಕ್ ವಶಪಡಿಸಿಕೊಂಡು ದಂಡ ವಿಧಿಸಲಾಯಿತು. ಎರಡು ಬಾರಿ ನಿಯಮ ಉಲ್ಲಂಘಿಸಿದರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವ ಎಚ್ಚರಿಕೆಯನ್ನೂ ನಗರಸಭೆಯಿಂದ ನೀಡಲಾಗಿತ್ತು. ಪ್ಲಾಸ್ಟಿಕ್ ವಿರುದ್ಧ ಹೋರಾಟಕ್ಕೆ ಮೊದಲಿಗೆ ವರ್ತಕರಿಂದ ವಿರೋಧ ವ್ಯಕ್ತಪಡಿಸಿದರು. ಚುನಾವಣೆಯಲ್ಲಿ ತಾವು ಮತದಾನ ಮಾಡುವುದಿಲ್ಲ ಎಂಬ ಎಚ್ಚರಿಕೆ ನೀಡಿದರು.

'ನಾನು ಸೋತರೂ ಪರವಾಗಿಲ್ಲ. ಸಮಾಜ ಹಾಗೂ ಮುಂದಿನ ಪೀಳಿಗೆಯ ಆರೋಗ್ಯ ಮುಖ್ಯ' ಎಂಬ ಸಚಿವರ ದೃಢ ನಿರ್ಧಾರ ನಾವು ಪ್ಲಾಸ್ಟಿಕ್ ಬಳಸುವವರ ವಿರುದ್ಧ ನಿರ್ಭೀತಿಯಿಂದ ಕೆಲಸ ಮಾಡಲು ಸಾಧ್ಯವಾಯಿತು ಎನ್ನುತ್ತಾರೆ ನಗರಸಭೆ ಅಧಿಕಾರಿಗಳು.12 ಲಕ್ಷ ದಂಡ ಸಂಗ್ರಹ: ನಗರಸಭೆಯ ಸಿಬ್ಬಂದಿ ಮಳಿಗೆಗಳ ಮೇಲೆ ಪದೇ ಪದೇ ದಾಳಿ ನಡೆಸಿ ದಂಡ ವಿಧಿಸಿದರು. ?12 ಲಕ್ಷ ದಂಡ ಸಂಗ್ರಹವಾಗಿತ್ತು. ಅದರಿಂದ ಪೌರಕಾರ್ಮಿಕರಿಗೆ ಎರಡು ತಿಂಗಳು ವೇತನ ನೀಡಲಾಯಿತು ಎಂದು ಪೌರಾಯುಕ್ತ ಚಲಪತಿ ತಿಳಿಸಿದರು.

# ಕುರುಗಲ್ ಸರ್ಕಾರಿ ಶಾಲೆಗೆ ಸಿಸಿಟಿವಿ ಕ್ಯಾಮರಾ



• ಉದಯವಾಹಿನಿ, ವೇಮಗಲ್

ಸರ್ಕಾರಿ ಶಾಲೆಗಳು ಸಮಾಜದ ಸ್ವಾಸ್ಥ್ಯ ಕಾಪಾಡುವ ಕೇಂದ್ರಗಳಿದ್ದಂತೆ. ಭವಿಷ್ಯದ ಸಮುದಾಯವನ್ನು ಸರಿದಾರಿಗೆ ತರುವ ಸಾಂಸ್ಕೃತಿಕ ಗುಡಿಗಳಿದ್ದಂತೆ. ಇವು ಕೇವಲ ವಿದ್ಯಾ ದೇಗುಲಗಳಲ್ಲ. ಭವಿಷ್ಯದ ಸಾಮಾಜಿಕ ಸ್ಥಿತಿ ರೂಪಿಸುವ ತಾಣಗಳಾಗಿವೆ ಎಂದು ಬಿಇಒ ಮಧುಮಾಲತಿ ಮೆಚ್ಚುಗೆ ವ್ಯಕ್ತಪಡಿಸಿದರು.ಪಟ್ಟಣದ ಕುರುಗಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೂಲಿಬೆಲೆ ಲಕ್ಕಿ ಆರ್ಟ್ಸ್ ಮಾಲೀಕರಾದ ನಯಜ್ ಖಾನ್ ಅವರಿಂದ ಶಾಲೆಗೆ ಕೊಡುಗೆಯಾಗಿ ನೀಡಿದ ಸಿಸಿಟಿವಿ ಕ್ಯಾಮೆರಾವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು. ಕುರುಗಲ್ ಸರ್ಕಾರಿ ಶಾಲೆಯನ್ನು ತಾಲ್ಲೂಕಿನಲ್ಲಿ ಉತ್ತಮ ಶಾಲೆಯಾಗಿ ಮಾರ್ಪಾಡು ಮಾಡಿರುವ ಇಲ್ಲಿನ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಂ ಚೌಡೇಗೌಡ ಅವರನ್ನು ಅಭಿನಂದಿಸಲಾಯಿತು.

ಚೌಡೇಗೌಡ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಕೆಲವು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶಾಲೆ ಅಭಿವೃದ್ಧಿಗೆ ಸರ್ಕಾರ ಉಚಿತ ಶಿಕ್ಷಣ ನೀಡುತ್ತಿದೆ. ಸಂವಿಧಾನ ಜಾರಿಗೆ ಬಂದ ನಂತರ ಉಚಿತ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಲಾಗಿದೆ. ಎಲ್ಲರಿಗೂ ಶಿಕ್ಷಣ ಕಡ್ಡಾಯವಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಮಕ್ಕಳು ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದರು.

ಶಿಕ್ಷಣ ತಜ್ಞ ದೇವಿದಾಸ್ ಸೇಟ್, ಬಿಆರ್‌ಪಿ ಮಲ್ಲಿಕಾರ್ಜುನಯ್ಯ, ಸಿಆರ್‌ಪಿ ವೆಂಕಟಾಚಲಪತಿ, ನಿವೃತ್ತ ಶಿಕ್ಷಕ ಬನಳಪ್ಪ, ಸೂಲಿಬೆಲೆ ಗೋಪಿನಾಥ್, ಮಂಜುನಾಥ್, ಟೈಲರ್ ಮಂಜುನಾಥ್, ಕಾಂತರಾಜ್, ಮಂಡಲ್ ಬಾಬು, ಮುರಳಿ, ಮುಖ್ಯ ಶಿಕ್ಷಕ ಮಹೇಶ್, ಉಪಸ್ಥಿತರಿದ್ದರು.

# ಮಿನಿ ನ್ಯೂಸ್

## 5 ಕೆ.ಜಿ ಗಾಂಜಾ ಜಪ್ತಿ: ಇಬ್ಬರ ಬಂಧನ

• ಉದಯವಾಹಿನಿ, ತುಮಕೂರು

ನಗರದ ಶಿರಾ ಗೇಟ್ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ ನಗರ ಠಾಣೆ ಪೊಲೀಸರು ಸುಮಾರು ರೂ.4.30 ಲಕ್ಷ ಮೌಲ್ಯದ 5 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.ನಗರದ ವೀರಸಾಗರದ ಮುಬಾರಕ್, ತಾಲ್ಲೂಕಿನ ಕೆಸರಮಡು ಗ್ರಾಮದ ಸೈಯದ್ ವಸೀಮ್ ಬಂಧಿತರು. ಮಹಾರಾಷ್ಟ್ರ ಸೇರಿದಂತೆ ವಿವಿಧ ಕಡೆಗಳಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು. ವಿದ್ಯಾರ್ಥಿಗಳು ಮತ್ತು ಕೂಲಿಕಾರರಿಗೆ ಗಾಂಜಾ ಸರಬರಾಜು ಮಾಡುತ್ತಿದ್ದರು. ವಸೀಮ್ ಬಳಿ ಗಾಂಜಾ ತೆಗೆದುಕೊಂಡು ಹೋಗಲು ಮುಬಾರಕ್ ಬಂದಿದ್ದ ವೇಳೆ ದಾಳಿ ನಡೆಸಿದ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಇಬ್ಬರು ಹಲವು ವರ್ಷಗಳಿಂದ ಗಾಂಜಾ ಮಾರಾಟ ಮಾಡುತ್ತಿದ್ದರು. ಬೇರೆ ರಾಜ್ಯಗಳಿಂದ ಗಾಂಜಾ ತರಿಸಿಕೊಳ್ಳುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

## ಕ್ಷುಲ್ಲಕ ಕಾರಣಕ್ಕೆ ಜಗಳ

• ಉದಯವಾಹಿನಿ, ಶಿರಾ

ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಕ್ಷುಲ್ಲಕ ಕಾರಣಕ್ಕಾಗಿ ಸೋಮವಾರ ನಡೆದ ಜಗಳದಲ್ಲಿ ರಘು ಎನ್ನುವ ವ್ಯಕ್ತಿ ಗಾಯಗೊಂಡಿದ್ದಾನೆ. ಕಬಾಬ್ ಅಂಗಡಿಯ ಬಳಿ ರಘು ಫೋನ್‌ಪೇ ಮಾಡುತ್ತೇನೆ ನಗದು ನೀಡಿ ಎಂದು ಕೇಳಿದ್ದಾನೆ. ಈ ಸಮಯದಲ್ಲಿ ಅಲ್ಲಿದ್ದ ಮುಸ್ತಾಫ್ ಹಾಗೂ ರಘು ನಡುವೆ ಜಗಳ ಪ್ರಾರಂಭವಾಗಿದೆ. ಮುಸ್ತಾಫ್ ರಘು ಮೇಲೆ ಚಾಕುವಿನಿಂದ ಇರಿಯಲು ಮುಂದಾದಾಗ ಕೈಗೆ ಗಾಯವಾಗಿದೆ. ಶಿರಾನಗರ ಠಾಣೆ ಪೊಲೀಸರು ಆರೋಪಿ ಮುಸ್ತಾಫನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. **ಕಾರ್ಯಾಚರಣೆ:** ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗದಂತೆ ಬೀದಿಬದಿ ವ್ಯಾಪಾರಿಗಳು ಅಂಗಡಿ ಇಟ್ಟುಕೊಳ್ಳಬೇಕು. ಸಾರ್ವಜನಿಕರಿಗೆ ತೊಂದರೆಯಾದರೆ ಪ್ರಕರಣ ದಾಖಲಿಸಲಾಗುವುದು ಎಂದು ಸೋಮವಾರ ನಗರಸಭೆ ಸಿಬ್ಬಂದಿ ಹಾಗೂ ಪೊಲೀಸರು ಬೀದಿಬದಿ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದರು.

# ನರೇಗಾ ಕೂಲಿ ನೀಡಲು ಮಹಿಳೆಯರ ಒತ್ತಾಯ



• ಉದಯವಾಹಿನಿ, ಕೆಜಿಎಫ್

ನರೇಗಾ ಯೋಜನೆ ಕಾಮಗಾರಿ ನಡೆಸುತ್ತಿರುವುದನ್ನು ತಡೆಗಟ್ಟಲು ಕೆಲ ವ್ಯಕ್ತಿಗಳು ಪ್ರಯತ್ನಿಸುತ್ತಿದ್ದು, ಕೆಲಸ ಮಾಡಿದ ಕೂಲಿಗಳಿಗೆ ಕೂಡಲೇ ಹಣ ಮಂಜೂರು ಮಾಡಬೇಕು ಎಂದು ಒತ್ತಾಯಿಸಿ ಪಾರಾಂಡಹಳ್ಳಿ ಕೂಲಿ ಮಹಿಳೆಯರು ಸೋಮವಾರ ಪಂಚಾಯಿತಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.ನರೇಗಾ ಯೋಜನೆಯಡಿ ನಡೆಯುತ್ತಿರುವ ಕೆಲ ಕಾಮಗಾರಿಗಳಲ್ಲಿ ಅಕ್ರಮ ನಡೆದಿದೆ ಎಂದು ಗ್ರಾಮಸ್ಥರು ಈಚೆಗೆ ಪಂಚಾಯಿತಿ ಕಚೇರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ನರೇಗಾ ಕಾಮಗಾರಿಯನ್ನು ಪಂಚಾಯಿತಿ ಅಧಿಕಾರಿಗಳು ನಿಲ್ಲಿಸಿದ್ದರು.

'ಯಾರೋ ದೂರು ಕೊಟ್ಟ ಮಾತ್ರಕ್ಕೆ ನರೇಗಾ ಕೂಲಿ ನಿಲ್ಲಿಸಿದ್ದರಿಂದ ಬಡವರ ಹೊಟ್ಟೆ ಮೇಲೆ ಹೊಡೆದಂತಾಗಿದೆ. ಸರ್ಕಾರ ಬಡವರಿಗೆ ಕೂಲಿ ಕೊಟ್ಟು ಅವರಿಗೆ ಬದುಕಲು ದಾರಿ ತೋರಿದೆ. 250 ಕೂಲಿ ಮಾಡಲು ಕೂಡ ಬಿಡುತ್ತಿಲ್ಲ. ಹಣವಂತರು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ದೂರು ನೀಡಿದ್ದಾರೆ. ಇದರಿಂದಾಗಿ ಬಡವರಿಗೆ ಅನ್ಯಾಯವಾಗಿದೆ' ಎಂದು ಮಹಿಳೆಯರು ದೂರಿದರು.

ದಲಿತ ಮುಖಂಡರಾದ ಎಪಿಎಲ್ ರಂಗನಾಥ್ ಮತ್ತು ಲಕ್ಷ್ಮಯ್ಯ ಮಾತನಾಡಿ, ನರೇಗಾ ಯೋಜನೆಯನ್ನು ಜೆಸಿಬಿ ಮೂಲಕ ಕೆಲಸ ಮಾಡಿದ್ದಾರೆ ಎಂದು ದೂರು ನೀಡಲಾಗಿದೆ. ದೂರು ಖಚಿತವಾಗಿದ್ದರೆ ಸಂಬಂಧ ಪಟ್ಟವರ ಮೇಲೆ ಕ್ರಮ ಕೈಗೊಳ್ಳಲಿ. ಆದರೆ, ಕೆಲಸ ಮಾಡಿದ ಬಡವರಿಗೆ ಕೂಲಿ ಕೊಡದೆ ಮೋಸ ಮಾಡುವುದು ಯಾವ ನ್ಯಾಯ? ಎಂದು ಪ್ರಶ್ನಿಸಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಮಾತನಾಡಿ, ನರೇಗಾ ಯೋಜನೆಯಲ್ಲಿ ಅಕ್ರಮ ನಡೆದಿದೆ ಎಂದು ಗ್ರಾಮದ ಕೆಲವರು ದೂರು ನೀಡಿದ್ದಾರೆ. ದೂರನ್ನು ಪರಿಶೀಲಿಸಲಾಗುತ್ತಿದೆ. ಕೂಲಿ ನೀಡಲು ಇನ್ನೂ ಮೂರು ದಿನಗಳ ಸಮಯಾವಕಾಶ ಇದೆ. ಮೂರು ಹಂತದಲ್ಲಿ ಕಾಮಗಾರಿ ಗುಣಮಟ್ಟದ ಪರಿಶೀಲನೆ ನಡೆಯುತ್ತಿದೆ. ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

# ಗ್ಯಾರೇಜಿಗಲ್ಲ, ಶಾಲಾ-ಕಾಲೇಜಿಗೆ ಕಳುಹಿಸಿ

• ಉದಯವಾಹಿನಿ, ಬಾಗೇಪಲ್ಲಿ

ಪಟ್ಟಣದ ಸಂತ ಹಜರತ್ ಷೇಕ್ ಹುಸೇನ್ ಷಾ ವಲಿ ದರ್ಗಾದ ಸಮುದಾಯದ ಭವನದಲ್ಲಿ ಭಾನುವಾರ ಜಮಿಯತ್ ಉಲೇಮಾ ಕರ್ನಾಟಕದ ಪದಾಧಿಕಾರಿಗಳು ಪ್ರತಿಭಾನ್ವಿತ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಸತ್ಕರಿಸಿದರು.ಘಟಕದ ತಾಲ್ಲೂಕು ಅಧ್ಯಕ್ಷ ಹಾಫೀಸ್ ರಿಜ್ವಾನ್ ಮಾತನಾಡಿ, ಮಕ್ಕಳನ್ನು ಗ್ಯಾರೇಜು, ಮದುವೆಗಳು ಮಾಡಿ ಕಳಿಸದೇ, ಉನ್ನತ ವಿದ್ಯಾಭ್ಯಾಸ ಮಾಡಿಸಬೇಕು. ಉನ್ನತ ಹುದ್ದೆ ಪಡೆದು ಸಮಾಜಕ್ಕೆ ಹಾಗೂ ಸಮುದಾಯಕ್ಕೆ ಸೇವೆ ಮಾಡಬೇಕು ಎಂದು ಕರೆ ನೀಡಿದರು. ಎಸ್ ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಲಾಗಿದೆ. ಮುಂದಿನ ದಿನಗಳಲ್ಲಿ ಶಾಲೆಗಳಿಗೆ ತೆರಳಿ ಪ್ರತಿಭಾನ್ವಿತರನ್ನು ಗುರುತಿಸಿ ಗೌರವಿಸಲಾಗುವುದು ಎಂದು ಹೇಳಿದರು. ಸಂಘಟನೆಯ ಪ್ರಧಾನಕಾರ್ಯದರ್ಶಿ ಮೌಲಾನಾ ರಿಯಾಜುದ್ದೀನ್, ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಲೌಕಿಕ ಶಿಕ್ಷಣವು ಅಗತ್ಯ. ಶಿಕ್ಷಣದಿಂದ ಮಾತ್ರ ಬದುಕು ಸುಖಕರ ಆಗಿರುತ್ತದೆ. ಚೆನ್ನಾಗಿ ಓದಬೇಕು. ಅಧ್ಯಯನ ಹಾಗೂ ಸಂಶೋಧನೆಗಳನ್ನು ಹೆಚ್ಚಾಗಿ ಮಾಡಬೇಕು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಉಲೇಮಾ ಸಂಘಟನೆಯ



> ಅಲ್ಪಸಂಖ್ಯಾತ ಸಮುದಾಯದ ಬಹುತೇಕರು ಅಕ್ಷರ ಕಲಿತಿಲ್ಲ. ಇಂದಿನ ಮಕ್ಕಳಿಗೆ ಆಸ್ತಿ ಹಣ ಒಡವೆ ಮಾಡುವುದಕ್ಕಿಂತ ಉತ್ತಮ ಶಿಕ್ಷಣ ಕೊಡಿಸಿ
>
> ಮೌಲಾನಾ ರಿಯಾಜುದ್ದೀನ್ ಪ್ರಧಾನ ಕಾರ್ಯದರ್ಶಿ ಜಮಿಯತ್ ಉಲೇಮಾ

ಖಜಾಂಚಿ ಆದಿಲ್‌ಖಾನ್, ಕರವೇ ಸ್ವಾಭಿಮಾನಿ ಬಣದ ತಾಲ್ಲೂಕು ಉಪಾಧ್ಯಕ್ಷ ಜಬೀವುಲ್ಲಾ, ನಿವೃತ್ತ ಶಿಕ್ಷಕ ಮುನೀರ್‌ಅಹಮದ್, ಶಿಕ್ಷಣ ಅಧಿಕಾರಿ ರಫೀಕ್ ಅಹಮದ್, ಸಮುದಾಯದ ಕಲೀಮುಲ್ಲಾ, ಜುಬೇರ್, ಆಸೀಫ್, ಮದೀನಾ ಮಸೀದಿ ಅಧ್ಯಕ್ಷ ಜಬೀವುಲ್ಲಾ, ತೌಫಿಕ್ ಮಸೀದಿ ಅಧ್ಯಕ್ಷ ಖಾದಿರ್, ಉಸ್ಮನೀಯ ಮಸೀದಿ ಕಾರ್ಯದರ್ಶಿ ಅಲ್ತಾಫ್, ಅಯಾಜ್, ಕೈಸರ್, ಹಸೀಂ, ನೂರು, ಹಾಫೀಸ್ ಅಬ್ದುಲ್ ಮಜೀದ್ ಇದ್ದರು.

### ಚಿಕ್ಕವಯಸ್ಸಿನಲ್ಲೇ ಮದುವೆ ಬೇಡ

> ತಂದೆ-ತಾಯಿ ಮಕ್ಕಳಿಗೆ ಓದಲು ಅವಕಾಶ ಕೊಡಬೇಕು. ಚಿಕ್ಕವಯಸ್ಸಿನಲ್ಲಿ ಹೆಣ್ಣುಮಕ್ಕಳಿಗೆ ಮದುವೆಗಳು ಮಾಡುವುದು ಬೇಡ. ಗಂಡುಮಕ್ಕಳನ್ನು ಗ್ಯಾರೇಜುಗಳಿಗೆ ಹಾಗೂ ದುಡಿಯಲು ಕಳಿಸದೇ ಉನ್ನತ ವಿದ್ಯಾಭ್ಯಾಸ ಮಾಡಿಸಬೇಕು ಎಂದು ಸಂಶೋಧನಾ ವಿದ್ಯಾರ್ಥಿನಿ ನೂರ್ ಬಾನು ಹೇಳಿದರು. ಶಿಕ್ಷಣ ಪಡೆದರೆ ಮಾತ್ರ ಸಮಾಜದಲ್ಲಿ ಗೌರವ ಸಿಗುತ್ತದೆ. ಡಾ.ಬಿ.ಆರ್.ಅಂಬೇಡ್ಕರ್ ಅಬ್ದುಲ್ ಕಲಾಂ ಅವರು ಸರ್ಕಾರಿ ಶಾಲೆಗಳಲ್ಲಿ ಓದಿ ಮಹನಿಯರಾಗಿದ್ದಾರೆ. ಮಹನೀಯ ಆದರ್ಶಗಳು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

# ಕಸ ವಿಲೇವಾರಿ ಘಟಕ ಇದ್ದರೂ ನೀಗದ ಸಮಸ್ಯೆ

• ಉದಯವಾಹಿನಿ, ಮಾಲೂರು

ಕಸ ವಿಲೇವಾರಿ ಘಟಕ ಆರಂಭವಾಗಿ ತಿಂಗಳು ಕಳೆದರೂ ಕಸದ ಸಮಸ್ಯೆ ನಿವಾರಣೆಯಾಗಿಲ್ಲ. ಇದರಿಂದ ನಗರದ ರಸ್ತೆಗಳು ಗಬ್ಬು ನಾರುತ್ತಿವೆ.ಸಮರ್ಪಕವಾಗಿ ಕಸ ವಿಲೇವಾರಿಯಾಗದೆ ನಗರದ ಹಲವು ರಸ್ತೆಗಳ ಬದಿ ಕಸದ ರಾಶಿ ರಾರಾಜಿಸುತ್ತಿದೆ. ನಾಗರಿಕರು ಮೂಗು ಮುಚ್ಚಿಕೊಂಡು ಸಂಚಾರ ಮಾಡಬೇಕಾದ ಪರಿಸ್ಥಿತಿ ಇದೆ.

ಈ ಹಿಂದೆ ಹಾರೋಹಳ್ಳಿ ಬಳಿ ಎರಡು ಎಕರೆ ವಿಸ್ತೀರ್ಣದಲ್ಲಿ ಆರಂಭವಾಗಿದ್ದ ಕಸ ವಿಲೇವಾರಿ ಘಟಕ (ಯಾರ್ಡ್) ಗ್ರಾಮಸ್ಥರ ವಿರೋಧದಿಂದ ಸ್ಥಗಿತಗೊಂಡಿತ್ತು. ನಂತರ ನಗರದ ಸುತ್ತಮುತ್ತಲು ಇರುವ ಹಾಳು ಬಾವಿ ಹಾಗೂ ಕಲ್ಲುಕ್ವಾರಿಗಳಲ್ಲಿ ಕಸ ತುಂಬಿಸಲಾಗುತ್ತಿತ್ತು. 2024 ಆಗಸ್ಟ್‌ನಲ್ಲಿ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಪುರಸಭೆ ಮಾಲೂರು ವತಿಯಿಂದ ತಾಲ್ಲೂಕಿನ ಚಿಕ್ಕ ಇಗ್ಗಲೂರು ಗ್ರಾಮದ ಬಳಿ 5 ಎಕರೆ ವಿಸ್ತೀರ್ಣದಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ಘಟಕವನ್ನು ?6 ಕೋಟಿ ವೆಚ್ಚದಲ್ಲಿ ಆರಂಭಿಸಲಾಗಿದೆ. ಇನ್ನೇನೂ ಕಸದ ಸಮಸ್ಯೆ ನಿವಾರಣೆ ಆಯಿತು ಎಂಬ ಭರವಸೆ ಹೊಂದಿದ್ದ ಸಾರ್ವಜನಿಕರಲ್ಲಿ ಮತ್ತೆ ನಿರಾಸೆ ಮೂಡಿದೆ. ಘಟಕ ಆರಂಭವಾಗಿ ಆರೇಳು ತಿಂಗಳಾದರೂ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ.

# ಭೋವಿ ಸಮುದಾಯದವರನ್ನು ಎಂಎಲ್‌ಸಿ ಮಾಡಿ

• ಉದಯವಾಹಿನಿ, ಮೈಸೂರು

ಕಳೆದ 45 ವರ್ಷಗಳಿಂದ ಭೋವಿ ಸಮುದಾಯದವರನ್ನು ಕಾಂಗ್ರೆಸ್ ಪಕ್ಷ ಎಂಎಲ್‌ಸಿ ಮಾಡಿಲ್ಲ. ಹೀಗಾಗಿ ಈ ಬಾರಿ ಈ ಸಮುದಾಯದ ಯಾರನ್ನಾದರೂ ಒಬ್ಬರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡಬೇಕೆಂದು ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ವಕ್ತಾರ ಜಿ.ವಿ.ಸೀತಾರಾಂ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಪಕ್ಷದ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಕಳೆದ ಚುನಾವಣೆಯಲ್ಲಿ ಪಕ್ಷಕ್ಕೆ ಶೇ.80ರಷ್ಟು ಮಂದಿ ಮತ ಚಲಾಯಿಸಿದ ಅಂಕಿ ಅಂಶ ಇದೆ. ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರು ನಿಗಮಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿಸಿದ್ದು, ಇವರು ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಈ ಸಮುದಾಯದ ಬಗ್ಗೆ ಒಲವಿದೆ. ಹೀಗಾಗಿ ಈ ಬಾರಿ ಸಮುದಾಯದ ಒಬ್ಬರನ್ನು ಎಂಎಲ್ಸಿ ಮಾಡಬೇಕೆಂದು ಕೋರುತ್ತಿರುವುದಾಗಿ ತಿಳಿಸಿದರು. 1980 ರಲ್ಲಿ ಪೀರಣ್ಣ ಅವರನ್ನು ಗುಂಡೂರಾವ್ ಅವರು ಎಂಎಲ್ಸಿ ಮಾಡಿದ್ದರು. ನಂತರ ಇದುವರೆಗೆ ಸಮುದಾಯದ ಯಾರೂ ಸಹಾ ಎಂಎಲ್ಸಿ ಆಗಿಲ್ಲ. ಪರಿಷತ್‌ನ 75 ಸ್ಥಾನಗಳಲ್ಲಿ 64 ಚುನಾಯಿತರು, 11 ನಾಮಕರಣದವಾಗಿರುತ್ತಾರೆ. ಈ 11 ಮಂದಿಯನ್ನು ರಾಜ್ಯಪಾಲರು ನಾಮ ನಿರ್ದೇಶನ ಮಾಡುತ್ತಾರೆ. ಹೀಗಾಗಿ ಪರಿಶಿಷ್ಟರ ಆಯ್ಕೆ ವೇಳೆ ಈ ಸಮುದಾಯಕ್ಕೆ ಆದ್ಯತೆ ನೀಡಬೇಕೆಂದರು. ಕಾಂಗ್ರೆಸ್ ಪಕ್ಷದಿಂದ ಈಗ 33 ಮಂದಿ ಎಂಎಲ್‌ಸಿಗಳು ಇದ್ದಾರೆ. ಆದರೆ, ಇವರಲ್ಲಿ ಒಬ್ಬರೇ ಒಬ್ಬರು ಈ ಸಮುದಾಯದವರು ಇಲ್ಲ. 2013, 2023ರ ಚುನಾವಣೆ ವೇಳೆ ಇವರು ರಾಜ್ಯಾದ್ಯಂತ




ಪ್ರವಾಸ ಕೈಗೊಂಡು ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ. ಪಕ್ಷದ ಪರವಾಗಿ ನಿಂತಿದ್ದಾರೆ. ಆದರೂ ಒಂದೇ ಒಂದು ಸಂಸದ ಅಥವಾ ರಾಜ್ಯಸಭಾ ಸ್ಥಾನವೂ ದೊರೆತಿಲ್ಲ. ಆದ್ದರಿಂದ ಕನಿಷ್ಠ ಪಕ್ಷ ಈ ಬಾರಿ ಎಂಎಲ್ಸಿಯನ್ನಾದರೂ ಮಾಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಬಸವರಾಜು, ಪರಮೇಶ್, ರಾಮಸ್ವಾಮಿ ಹಾಜರಿದ್ದರು.

# ಅರುಣ್‌ಕುಮಾರ್, ಭಾಸ್ಕರ್ ಪ್ರಸಾದ್ ಬಂಧನಕ್ಕೆ ಒತ್ತಾಯ

## ನಗರದ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ

• ಉದಯವಾಹಿನಿ, ಮೈಸೂರು

ವಕೀಲ ಅರುಣ್‌ಕುಮಾರ್ ಮತ್ತು ಭಾಸ್ಕರ್ ಪ್ರಸಾದ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ದಲಿತ ಮಹಾಸಭಾದ ಪದಾಧಿಕಾರಿಗಳು ನಗರದ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಒಳ ಮೀಸಲಾತಿಯ ವಿರೋಧಿಯಲ್ಲ. ಅರುಣ್‌ಕುಮಾರ್ ಮತ್ತು ಭಾಸ್ಕರ್ ಪ್ರಸಾದ್ ವಿರುದ್ಧ ದೂರು ದಾಖಲಾಗಿರುವುದರಲ್ಲಿ ಸಚಿವ ಮಹದೇವಪ್ಪ ಅವರ ಪಾತ್ರ ಇಲ್ಲ ಎಂದು ತಿಳಿಸಿದರು. ಸಚಿವ ಮಹದೇವಪ್ಪ ಮತ್ತು ಪರಿಷತ್ ಸದಸ್ಯ ತಿಮ್ಮಯ್ಯ ಅವರು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ತತ್ವದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರಳ ಸಜ್ಜನಿಕೆಗೆ ಹೆಸರಾದ ಇವರನ್ನು ಅವಹೇಳನಕಾರಿಯಾಗಿ ನಿಂದಿಸಿರುವುದು ಹಾಗೂ ಬೆದರಿಸುತ್ತಿರುವುದು ಖಂಡನೀಯ. ಆದರೆ, ಅರುಣ್‌ಕುಮಾರ್ ಮತ್ತು ಭಾಸ್ಕರ್ ಪ್ರಸಾದ್ ಅವರು ಬಿಜೆಪಿಯ ಏಜೆಂಟ್ ಗಳಾಗಿ ವರ್ತಿಸುತ್ತಿದ್ದಾರೆ ಎಂದು



### ಭಾಸ್ಕರ್ ಪ್ರಸಾದ್ ವಿರುದ್ಧ ದೂರು ದಾಖಲೆ

ಕಿಡಿ ಕಾರಿದರು. ನಮ್ಮ ನಾಯಕರು ಒಳ ಮೀಸಲಾತಿಯ ಪರವಾಗಿದ್ದಾರೆ. ಪ.ಜಾತಿ ಜನಾಂಗದವರ ಜಾತಿ ಸಮೀಕ್ಷೆ ಪ್ರಗತಿಯಲ್ಲಿದೆ. ಒಳ ಮೀಸಲಾತಿ ಜಾರಿ ಮಾಡಲು ಕಂಕಣಬದ್ಧರಾಗಿದ್ದಾರೆ.

ಭಾಸ್ಕರ್ ಪ್ರಸಾದ್ ಮತ್ತು ಅರುಣ್‌ಕುಮಾರ್ ಅವರು ತಮ್ಮ ರಾಜಕೀಯ ಪ್ರಚಾರಕ್ಕಾಗಿ ಕಾಂಗ್ರೆಸ್ ನಾಯಕರ ಬಗ್ಗೆ ಸುಳ್ಳು ಪ್ರಚಾರ ಮಾಡುತ್ತಿರುವುದು ಖಂಡನೀಯ ಎಂದು ದೂರಿದರು. ಮುಂದಿನ ದಿನಗಳಲ್ಲಿ ಸಚಿವ ಮಹದೇವಪ್ಪ ಮತ್ತು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಕಣ್ಣುಗಳಿಗೆ ಮತ್ತು ದೈಹಿಕವಾಗಿ ಹಲ್ಲೆಯಾದರೆ ಅರುಣ್‌ಕುಮಾರ್ ಮತ್ತು ಭಾಸ್ಕರ್ ಪ್ರಸಾದ್ ಅವರೇ ನೇರ ಕಾರಣ. ಆದ್ದರಿಂದ ಇವರ

> ಇದು ಸಮುದಾಯಗಳ ನಡುವೆ ದ್ವೇಷ, ವಿಭಾಗೀಯತೆ ಮತ್ತು ಒಡಕನ್ನು ಉಂಟು ಮಾಡುವ ಸಾಧ್ಯತೆ ಇದೆ. ಇಂತಹ ಕೃತ್ಯಗಳು ಸಮಾಜದಲ್ಲಿ ಅದರಲ್ಲೂ ಜನಾಂಗೀಯ ಸೌಹಾರ್ದತೆ ಕದಡುವ ಸಂಚಾಗಿದೆ. ಅದರಲ್ಲೂ ಇಂತಹ ವ್ಯಕ್ತಿಗಳಿಂದ ರಾಜಕಾರಣದಲ್ಲಿರುವ ವ್ಯಕ್ತಿಗಳಿಗೆ ಸೂಕ್ತ ಭದ್ರತೆ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿರುದ್ಧ ದೂರು ದಾಖಲಿಸಿ, ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಹಾಸಭಾದ ಅಧ್ಯಕ್ಷ ಎಸ್.ರಾಜೇಶ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಅಹಿಂದ ಸಂಘಟನೆ ಅಧ್ಯಕ್ಷ ದೇವಪ್ಪನಾಯಕ, ಕೇಶವ, ಸತ್ಯ, ಲೋಕೇಶ್ ಮಾದಾಪುರ, ನಾಗೇಶ್, ಸೈಯದ್ ಫಾರೂಕ್, ಎಸ್.ಎ.ರಹೀಮ್, ರವಿನಂದನ್, ಯೋಗೇಶ್ ಉಪ್ಪಾರ್, ಶಿವಣ್ಣ, ರಾಜಶೇಖರ್, ಶ್ರೀನಿವಾಸ್, ಧನಪಾಲ್, ಕುರುಬರಳ್ಳಿ ಪ್ರಕಾಶ್, ಉದಯಕುಮಾರ್, ಬಾಬು ಸೋಹೇಲ್, ಚನ್ನಯ್ಯ, ರವಿನಾಯಕ ಸೇರಿದಂತೆ ಹಲವರು ಭಾಗವಹಿಸಿದ್ದರು.


# ಬಂಗಾರಪೇಟೆ: ಕೆರೆ ಮಣ್ಣು ಅಕ್ರಮ ಸಾಗಣೆ

• ಉದಯವಾಹಿನಿ, ಬಂಗಾರಪೇಟೆ

ತಾಲ್ಲೂಕಿನ ಹಲವು ಕೆರೆಗಳಲ್ಲಿ ಇಟ್ಟಿಗೆ ಕಾರ್ಖಾನೆ ಮಾಲೀಕರು ಹಾಗೂ ಇತರರು ಅಕ್ರಮವಾಗಿ ಮಣ್ಣು ತೆಗೆಯುವ ಮೂಲಕ ಕೆರೆಗಳ ಮೂಲ ಸ್ವರೂಪವನ್ನೇ ಹಾಳು ಮಾಡುತ್ತಿದ್ದಾರೆ. ಕೆರೆಗಳನ್ನು ಸಂರಕ್ಷಣೆ ಮಾಡಬೇಕಾದ ಅಧಿಕಾರಿಗಳು ಜಾಣ ಮೌನ ವಹಿಸಿದ್ದಾರೆ ಎಂಬ ಆರೋಪ ಸಾರ್ವಜನಿಕರದ್ದು. ತಾಲ್ಲೂಕಿನ ಬೂದಿಕೋಟೆ ಹೋಬಳಿ ಗಾಜಗ, ಬನಹಳ್ಳಿ, ಗುಟ್ಟಹಳ್ಳಿ, ರಾಮಸಂದ್ರ ಗ್ರಾಮಗಳ ಕೆಲವು ಕೆರೆಗಳಲ್ಲಿ

ಪ್ರಭಾವಿಗಳು ಹಾಡಹಗಲೇ ರಾಜಾರೋಷವಾಗಿ ಇಲಾಖೆ ಅಧಿಕಾರಿಗಳ ಅನುಮತಿ ಪಡೆಯದೆ ಟ್ರಾಕ್ಟರ್ ಹಾಗೂ ಜೆಸಿಬಿ ಬಳಸಿ ಇಟ್ಟಿಗೆ ಕಾರ್ಖಾನೆ, ಅನಧಿಕೃತ ಲೇಔಟ್ ನಿರ್ಮಾಣ, ತೋಟಗಳಿಗೆ ಅಕ್ರಮವಾಗಿ ಮಣ್ಣು ಸಾಗಣೆ ಮಾಡುತ್ತಿದ್ದಾರೆ. ಕೆರೆ ಕುಂಟೆ ಸರಿಯಾಗಿ ಇದ್ದರೆ ಮಾತ್ರ ಮಳೆ ನೀರು ಶೇಖರಣೆಯಾಗುತ್ತದೆ. ಇದರಿಂದಾಗಿ ಅಂತರ್ಜಲ ಮಟ್ಟ ವೃದ್ಧಿಯಾಗುತ್ತದೆ. ಆದರೆ, ಕೆಲವು ಜನರು ಹಣದಾಸೆಗೆ ಕೆರೆಗಳಲ್ಲಿ ಅಕ್ರಮವಾಗಿ ಮಣ್ಣುಗಾರಿಕೆ ಮಾಡುವ ಮೂಲಕ ಕೆರೆಗಳ ನಾಶಕ್ಕೆ ಮುಂದಾಗಿದ್ದಾರೆ.

ಬೇಸಿಗೆ ಕಾಲದಲ್ಲಿ ಕೆರೆಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ನಿತ್ಯ ಜೆಸಿಬಿಯೊಂದಿಗೆ ಹತ್ತಾರು ಟ್ರ್ಯಾಕ್ಟರ್ ಬಳಸಿ ಮಣ್ಣು ತೆಗೆಯುವ ದಂಧೆ ಹೆಚ್ಚಾಗುತ್ತಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಮೈರಾಡ ಸಂಸ್ಥೆ ಹಾಗೂ ಸೀಗಲ್ ಸಂಸ್ಥೆಗಳು ಸೇರಿದಂತೆ



> ಕೆರೆಗಳಲ್ಲಿ ಕಾನೂನು ಬಾಹಿರವಾಗಿ ಮಣ್ಣು ತೆಗೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲುವ ಮೂಲಕ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತದೆ. ಅಂತರ್ಜಲ ಮಟ್ಟ ಸಂರಕ್ಷಣೆಗಾಗಿ ಕೆರೆಗಳನ್ನು ಸಂರಕ್ಷಣೆ ಮಾಡಬೇಕು
>
> ಹುಣಸನಹಳ್ಳಿ ಎನ್.ವೆಂಕಟೇಶ್ ಕರ್ನಾಟಕ ದಲಿತ ರೈತ ಸೇನೆ ರಾಜ್ಯಾಧ್ಯಕ್ಷ

ಇತರ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಕೆರೆಗಳಲ್ಲಿ ಇರುವ ಹೂಳು ತೆಗೆದು ಕೆರೆಗಳನ್ನು ಜೀರ್ಣೋದ್ದಾರ ಮಾಡುತ್ತಿದ್ದರೆ ಮತ್ತೊಂದು ಕಡೆ ಕೆಲವರು ಅಕ್ರಮ ಮಣ್ಣುಗಾರಿಕೆಯಿಂದ ಹಣ ಸಂಪಾದಿಸಲು ಕೆರೆಗಳನ್ನು ಹಾಳು ಮಾಡಲು ಹೊರಟಿದ್ದಾರೆ.ಮಣ್ಣು ತೆಗೆಯುವವರು ವಾರದ ರಜೆ ದಿನಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕಂದಾಯ ಮತ್ತು ಗಣಿ ಮತ್ತು

> ಕೆರೆಗಳಲ್ಲಿ ಕಾನೂನು ಬಾಹಿರವಾಗಿ ಮಣ್ಣು ತೆಗೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲುವ ಮೂಲಕ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತದೆ. ಅಂತರ್ಜಲ ಮಟ್ಟ ಸಂರಕ್ಷಣೆಗಾಗಿ ಕೆರೆಗಳನ್ನು ಸಂರಕ್ಷಣೆ ಮಾಡಬೇಕು ಹುಣಸನಹಳ್ಳಿ
>
> ಎನ್.ವೆಂಕಟೇಶ್ ಕರ್ನಾಟಕ ದಲಿತ ರೈತ ಸೇನೆ ರಾಜ್ಯಾಧ್ಯಕ್ಷ

ಭೂವಿಜ್ಞಾನ ಇಲಾಖೆ, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ರಜೆ ಇದ್ದರೆ ಸ್ಥಳಕ್ಕೆ ಬರುವುದಿಲ್ಲ ಎಂಬ ಮುಂದಾಲೋಚನೆಯಿಂದ ಮಣ್ಣು ಎತ್ತುವುದು ಎಗ್ಗಿಲ್ಲದೆ ನಡೆಯುತ್ತಿದೆ ಎಂಬುದು ಸಾರ್ವಜನಿಕರ ಆರೋಪ. ಅಕ್ರಮ ಮಣ್ಣುಗಾರಿಕೆಯಲ್ಲಿ ತೊಡಗಿರುವವರನ್ನು ಸಾರ್ವಜನಿಕರು ತಡೆದು ಮಣ್ಣು ತೆಗೆಯುವವರನ್ನು ಪ್ರಶ್ನಿಸಿದರೆ 'ನಾವು ಪರವಾನಗಿ ಪಡೆದಿದ್ದೇವೆ' ಎಂದು ಸಾಬೂನು ಹೇಳುವ ಮೂಲಕ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡುತ್ತಿದ್ದು ಇದ್ದರಿಂದ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಕೆರೆಗಳಲ್ಲಿ ಅಕ್ರಮವಾಗಿ ಮಣ್ಣು ತೆಗೆಯುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದರ ಮೂಲಕ ಕೆರೆಗಳನ್ನು ಸಂರಕ್ಷಣೆ ಮಾಡಬೇಕು ಎಂದು ಸಾರ್ವಜನಿಕರ ಒತ್ತಾಯವಾಗಿದೆ.


ಅಂತರಾಳದಿಂದ... EDITORIAL

# ಅಮೆರಿಕ ಎನ್ನುವ ಭಸ್ಮಾಸುರ!

ಜಗತ್ತಿನ ಪ್ರತಿಷ್ಠಿತ ಪ್ರಶಸ್ತಿಯಾಗಿರುವ ಶಾಂತಿ ನೊಬೆಲ್‌ಗಾಗಿ ರಶ್ಯ ಮತ್ತು ಅಮೆರಿಕ ನಡುವೆ ಪೈಪೋಟಿ ತೀವ್ರವಾಗಿದೆ. ಸರ್ವಾಧಿಕಾರಿಗಳು ತಮ್ಮ ರಕ್ತಸಿಕ್ತ ಕೈಗಳನ್ನು ಒರೆಸಿಕೊಳ್ಳಲು ಕರವಸ್ತ್ರದಂತೆ ಬಳಕೆಯಾಗುತ್ತಾ ಬಂದಿರುವ ನೊಬೆಲ್ ಶಾಂತಿ ಪ್ರಶಸ್ತಿಗೆ ಈ ಬಾರಿ ಪ್ರಮುಖ ಸ್ಪರ್ಧಿಯಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಹೊಮ್ಮಿದ್ದಾರೆ. ವಿಶೇಷವೆಂದರೆ, ಅವರಿಗೆ ನೊಬೆಲ್ ಶಾಂತಿಯನ್ನು ನೀಡಲು ನೆರೆಯ ಪಾಕಿಸ್ತಾನದ ಸೇನಾ ಮುಖ್ಯಸ್ಥರ ಶಿಫಾರಸು ಬೇರೆ. ಈ ಶಿಫಾರಸನ್ನು ನೀಡಲು ಪಹಲ್ಗಾಮ್‌ನ ಭಯೋತ್ಪಾದಕ ದಾಳಿಗೆ ನೀಡಿರುವ ಕುಮ್ಮಕ್ಕು ಅವರ ವಿಶೇಷ ಅರ್ಹತೆಯಾಗಿದೆ. ರವಿವಾರ ನಸುಕಿನ ವೇಳೆ ಅಮೆರಿಕ ಯುದ್ಧ ವಿಮಾನಗಳು ಇರಾನ್‌ನ ಮೂರು ಸ್ಥಳಗಳ ಮೇಲೆ ಬಾಂಬ್ ದಾಳಿಗಳನ್ನು ನಡೆಸಿವೆ. ಆ ಮೂಲಕ, ಈವರೆಗೆ ಕಾಪಾಡಿಕೊಂಡು ಬಂದ ತನ್ನ 'ಇಸ್ರೇಲ್‌ನ ಮುಖವಾಡವನ್ನು ಅಮೆರಿಕ ಹರಿದುಕೊಂಡಿದ್ದು, ಇರಾನ್ ವಿರುದ್ಧದ ಸಂಘರ್ಷದ ಹಿಂದಿರುವ ನಿಜವಾದ ಖಳ ನಾನೇ ಎನ್ನುವುದನ್ನು ಘೋಷಿಸಿಕೊಂಡಿದೆ. ಅಮೆರಿಕದ ಯುದ್ಧ ವಿಮಾನಗಳು ಇರಾನ್‌ನ ಮೂರು ಪ್ರಮುಖ ಪರಮಾಣು ಸ್ಥಾವರಗಳ ಮೇಲೆ ಬಾಂಬ್ ದಾಳಿಗಳನ್ನು ನಡೆಸಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ. ಇರಾನ್ ಅಣ್ವಸ್ತ್ರಗಳನ್ನು ಹೊಂದುವುದನ್ನು ತಡೆಯಲು ಈ ದಾಳಿಯನ್ನು ನಡೆಸಿರುವುದಾಗಿಯೂ ಅಮೆರಿಕ ಹೇಳಿಕೊಂಡಿದೆ. ಈ ಹಿಂದೆ ಇರಾಕ್‌ನ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲೂ 'ಇರಾಕ್ ರಾಸಾಯನಿಕ ಅಸ್ತ್ರಗಳನ್ನು ಹೊಂದಿದೆ' ಎನ್ನುವ ಆರೋಪಗಳನ್ನು ಮಾಡಿ ತನ್ನ ದಾಳಿಯನ್ನು ಸಮರ್ಥಿಸಿಕೊಂಡಿದ್ದ ಅಮೆರಿಕ, ಇದೀಗ ಅದೇ ಹಳೆ ಹಾಡಿಗೆ ಹೊಸ ರಾಗವನ್ನು ಜೋಡಿಸಲು ಹೊರಟಿದೆ. ಈ ದಾಳಿಯು ಯುದ್ಧ ಸಮನ್ವಯದ ಭಾಗವಾಗಿದೆ ಎಂದು ಇಸ್ರೇಲ್ ಕೂಡ ಹೇಳಿಕೊಂಡಿದೆ. ಇಸ್ರೇಲ್‌ಗೆ ಸ್ವತಂತ್ರ ಅಸ್ತಿತ್ವವಿಲ್ಲ. ಅಮೆರಿಕವು ಮಧ್ಯಪ್ರಾಚ್ಯದಲ್ಲಿ ನರಮೇಧಗಳನ್ನು ನಡೆಸುವುದಕ್ಕಾಗಿ ಹಾಕಿಕೊಂಡಿರುವ ಮುಖವಾಡದ ಹೆಸರೇ ಇಸ್ರೇಲ್ ಎನ್ನುವುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದೆ. ಈ ಹಿಂದಿನ ಅಮೆರಿಕ ಅಧ್ಯಕ್ಷರೂ ಇಸ್ರೇಲ್ ನಡೆಸುತ್ತಿರುವ ನಾಗರಿಕರ ಮಾರಣ ಹೋಮಕ್ಕೆ ಪೂರ್ಣ ಪ್ರಮಾಣದ ಬೆಂಬಲವನ್ನು ಘೋಷಿಸಿದ್ದರು. ಇದೀಗ ಸಂಘರ್ಷವು ಇರಾನ್ ವಿರುದ್ಧದ ಪೂರ್ಣಪ್ರಮಾಣದ ದಾಳಿಯ ರೂಪವನ್ನು ಪಡೆದುಕೊಂಡಿದೆ. ಇಸ್ರೇಲ್–ಇರಾನ್ ನಡುವಿನ ದಾಳಿಯಲ್ಲಿ ಅಮೆರಿಕ ರಂಗ ಪ್ರವೇಶಿಸಿದೆ ಎನ್ನುವುದಕ್ಕಿಂತ, ನಾನೇ ಇಸ್ರೇಲ್ ಎನ್ನುವುದನ್ನು ಅದು ಈ ಮೂಲಕ ಜಗತ್ತಿಗೆ ಘೋಷಿಸಿಕೊಂಡಿದೆ ಎನ್ನುವುದೇ ಹೆಚ್ಚು ಸರಿಯಾದದ್ದು. ಅಣ್ವಸ್ತ್ರ ಹೊಂದಲು ಪ್ರಯತ್ನಿಸುತ್ತಿರುವುದು ಅಮೆರಿಕದ ದಾಳಿಗೆ ಕಾರಣವೇ ಅಥವಾ ಇರಾನ್ ಅಣ್ವಸ್ತ್ರವನ್ನು ಹೊಂದದೇ ಇದ್ದುದೇ ದಾಳಿಗೆ ಕಾರಣವೇ ಎನ್ನುವುದನ್ನು ಚರ್ಚಿಸಲು ಇದು ಸರಿಯಾದ ಸಂದರ್ಭವಾಗಿದೆ. ಮೂರನೇ ಮಹಾಯುದ್ಧ ಅಣ್ವಸ್ತ್ರ ಪ್ರಯೋಗದೊಂದಿಗೆ ಮುಕ್ತಾಯವಾಗುತ್ತದೆ ಎನ್ನುವ ಆತಂಕ ಜಗತ್ತಿನ ಪ್ರಜ್ಞಾವಂತರೆಲ್ಲರದಾಗಿದೆ. ಇದೇ ಸಂದರ್ಭದಲ್ಲಿ ಮೂರನೇ ಮಹಾಯುದ್ಧವನ್ನು ತಡೆದಿರುವುದು ಕೂಡ ಈ ಅಣ್ವಸ್ತ್ರ ಪ್ರಯೋಗದ ಭಯ ಎನ್ನುವುದು ಕೂಡ ವಾಸ್ತವವಾಗಿದೆ. ಇರಾಕ್, ಲಿಬಿಯಾ ಸೇರಿದಂತೆ ಮಧ್ಯಪ್ರಾಚ್ಯದ ದೇಶಗಳು ಸರ್ವನಾಶವಾಗಲು, ಅಮೆರಿಕ ಅವುಗಳ ಮೇಲೆ ಅತ್ಯಂತ ಸುಲಭವಾಗಿ ಎರಗಲು ಮುಖ್ಯ ಕಾರಣಗಳಲ್ಲಿ ಒಂದು, ಅವುಗಳು ಮಾರಕ ರಾಸಾಯನಿಕ ಅಸ್ತ್ರಗಳು ಅಥವಾ ಅಣ್ವಸ್ತ್ರಗಳು ಹೊಂದಿಲ್ಲದೇ ಇದ್ದುದೇ ಆಗಿದೆ. ಸೋವಿಯತ್ ರಶ್ಯದಿಂದ ಬೇರ್ಪಟ್ಟಾಗ ಉಕ್ರೇನ್ ತನ್ನಲ್ಲಿದ್ದ ಅಣ್ವಸ್ತ್ರ ನೆಲೆಗಳನ್ನು ನಾಶ ಪಡಿಸಿತು. ಅದರ ಪರಿಣಾಮವಾಗಿಯೇ ಅತ್ಯಂತ ಸುಲಭವಾಗಿ ರಶ್ಯದ ದಾಳಿಗೆ ತುತ್ತಾಯಿತು. ನಿಜಕ್ಕೂ ಉಕ್ರೇನ್ ಬಳಿ ಅಣ್ವಸ್ತ್ರ ಇದ್ದಿದ್ದರೆ ರಶ್ಯ ಅದರ ಮೇಲೆ ದಾಳಿ ನಡೆಸುತ್ತಿತ್ತೆ ಇತರ ದೇಶಗಳು ಆ ಯುದ್ಧಕ್ಕೆ ಅವಕಾಶ ನೀಡುತ್ತಿತ್ತೆ ಭಾರತ–ಪಾಕಿಸ್ತಾನದ ನಡುವಿನ ಸಂಘರ್ಷ ಉಲ್ಬಣಗೊಳ್ಳುವ ಮೊದಲೇ ತಣ್ಣಗಾಗಿದ್ದು ಉಭಯ ದೇಶಗಳಲ್ಲೂ ಅಣ್ವಸ್ತ್ರಗಳಿರುವುದರಿಂದ ಯಾವುದೇ ಒಂದು ದೇಶದ ಬಳಿ ಅಣ್ವಸ್ತ್ರ ಇಲ್ಲ ಎಂದಾಗಿದ್ದರೆ ಯುದ್ಧವನ್ನು ತಡೆಯುವ ಪ್ರಯತ್ನ ಯಶಸ್ವಿಯಾಗುತ್ತಿರಲಿಲ್ಲ. ಚೀನಾದಂತಹ ದೇಶಗಳು ಗಡಿಭಾಗದಲ್ಲಿ ತಕರಾರುಗಳನ್ನು ಮಾಡುತ್ತವೆಯಾದರೂ, ಪೂರ್ಣ ಪ್ರಮಾಣದ ಯುದ್ಧವನ್ನು ಘೋಷಿಸುವುದಕ್ಕೆ ಸಿದ್ಧವಿಲ್ಲ ಎಂದರೆ ಅದಕ್ಕೆ ಕಾರಣ ಭಾರತದ ಬಳಿಯಿರುವ ಅಣ್ವಸ್ತ್ರ. ಆದುದರಿಂದ, ಇರಾನ್‌ನ ವಿರುದ್ಧದ ದಾಳಿಗೆ ಅದರ ಬಳಿಯಿರುವ ಅಣ್ವಸ್ತ್ರವೇ ಕಾರಣ ಎಂದು ಅಮೆರಿಕ ಅದೆಷ್ಟು ಅರಚಿದರೂ ಅದನ್ನು ನಂಬುವ ಸ್ಥಿತಿಯಲ್ಲಿ ಜಗತ್ತು ಇಲ್ಲ. ಅಣ್ವಸ್ತ್ರ ಇದ್ದಿದ್ದು ಅಮೆರಿಕಕ್ಕೆ ಸ್ಪಷ್ಟವಿದ್ದರೆ ಅದು ಖಂಡಿತವಾಗಿಯೂ ದಾಳಿ ಮಾಡುವ ಸಾಹಸಕ್ಕೆ ಇಳಿಯುತ್ತಿರಲಿಲ್ಲ. ವಿಪರ್ಯಾಸವೆಂದರೆ ಸ್ವತಃ ಅಪಾರ ಪ್ರಮಾಣದ ಅಣ್ವಸ್ತ್ರಗಳನ್ನು ಹೊಂದಿರುವ ಅಮೆರಿಕ ಈ ದಾಳಿಯನ್ನು ನಡೆಸಿದೆ. ಜಗತ್ತಿನ ಪುಂಡ, ಭಯೋತ್ಪಾದಕ ದೇಶವಾಗಿರುವ ಇಸ್ರೇಲ್ ಅನಧಿಕೃತವಾಗಿ ಅಪಾರ ಪ್ರಮಾಣದಲ್ಲಿ ಅಣ್ವಸ್ತ್ರಗಳನ್ನು ಹೊಂದಿದೆ ಮತ್ತು ಅದು ಫೆಲೆಸ್ತೀನ್‌ನಲ್ಲಿ ನಡೆಸಿರುವ ನಾಗರಿಕರು, ಮಕ್ಕಳು, ಮಹಿಳೆಯರ ಮಾರಣಹೋಮ ಆ ದೇಶವನ್ನು ಭಯೋತ್ಪಾದಕ ದೇಶವಾಗಿ ಗುರುತಿಸಲ್ಪಡುವಂತೆ ಮಾಡಿದೆ. ಹೀಗಿರುವಾಗ, ಇರಾನ್ ಅಣ್ವಸ್ತ್ರವನ್ನು ತಯಾರಿಸುತ್ತಿದೆ ಎನ್ನುವ ಕಾರಣವನ್ನು ಒಡ್ಡಿ ಅಮೆರಿಕ ದಾಳಿ ನಡೆಸಲು ಮುಂದಾಗಿರುವುದನ್ನು ಜಗತ್ತು ಸ್ವೀಕರಿಸುವುದಾದರೂ ಹೇಗೆ? ಡಾಲರ್ ಕೇಂದ್ರಿತವಾದ ಜಗತ್ತಿನ ಆರ್ಥಿಕತೆಗೆ ಧಕ್ಕೆ ಬಂದಿರುವುದೇ ಅಮೆರಿಕದ ಈ ಹತಾಶೆಯ ನಡೆಗೆ ಮುಖ್ಯ ಕಾರಣವಾಗಿದೆ.

**ಹಿಟ್ಲರ್ ನಡೆಸಿದ ಗ್ಯಾಸ್‌ಛೇಂಬರ್ ನರಮೇಧ'ಗಳ ಸಂತ್ರಸ್ತರೆಂಬ ಕಾರಣವನ್ನು ಮುಂದಿಟ್ಟುಕೊಂಡು ಅದನ್ನೂ ಮೀರಿಸಿದ ಹತ್ಯಾಕಾಂಡಗಳನ್ನು ನಡೆಸಲು ಪರವಾನಿಗೆಗಳನ್ನು ಪಡೆದುಕೊಂಡಿರುವ ಇಸ್ರೇಲ್ ಎನ್ನುವ ಹಿಟ್ಲರ್‌ನ ಅನೈತಿಕ ಕೂಸು ಕಳೆದ ಎರಡು ತಿಂಗಳಲ್ಲಿ ಸಹಸ್ರಾರು ಮಕ್ಕಳನ್ನು ತಿಂದು ತೇಗಿ ಟ್ರಂಪ್‌ನ ಶಾಂತಿಯ ಆಂದೋಲನಕ್ಕೆ ಬಿರುಸಿನ ಕೊಡುಗೆಗಳನ್ನು ನೀಡುತ್ತಿದೆ. ಇವುಗಳ ಮುಂದೆ ರಶ್ಯವು ಉಕ್ರೇನ್‌ನ ಮೇಲೆ ಕ್ಷಿಪಣಿಗಳನ್ನು ಹಾರಿಸುತ್ತಾ ಜಗತ್ತಿಗೆ ಸಾರುತ್ತಿರುವ ಶಾಂತಿಯ ಸಂದೇಶ ಮಂಕಾಗಿದೆ. ಇದೀಗ ಜಾಗತಿಕ ಶಾಂತಿಗಾಗಿ ನಡೆಯುತ್ತಿರುವ ಇರಾನ್–ಇಸ್ರೇಲ್ ನಡುವಿನ ಸಂಘರ್ಷಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೊಸ ತಿರುವನ್ನು ನೀಡಿದ್ದಾರೆ.**

## ರಾಮಾಯಣ



**ಅರಣ್ಯ ಮಾರ್ಗವನ್ನು ಕ್ರಮ ಪಡಿಸಿದ್ದು**

• ಹಿಂದಿನ ಸಂಚಿಕೆಯಿಂದ — 78ನೆಯ ಅಧ್ಯಾಯ

ನಿರ್ಮಲಾಂತಃಕರಣನಾದ ಭರತನು ಗುಹನನ್ನು ಕುರಿತು ಮೃದುವಚನದಿಂದ ಎಲೈ ಗುಹನೆ, ನಿನ್ನ ಮನಸ್ಸಿನಲ್ಲಿ ಅಂಥ ಸಂಶಯ ಬೇಡ. ನನಗೆ ಅಣ್ಣನಾದ ಶ್ರೀರಾಮನು ನನ್ನ ತಂದೆಯಾದ ದಶರಥರಾಯನಿಗೆ ಸಮಾನನು. ಆದಕಾರಣ ಆತನನ್ನು ವನದಿಂದ ಕರೆದುಕೊಂಡು ಬರುವುದಕ್ಕೆ ಹೋಗುತ್ತೇನೆ. ನಿನ್ನ ಮನಸ್ಸಿನಲ್ಲಿ ಸಂಶಯ ಬೇಡ. ನಿನ್ನೊಡನೆ ಸತ್ಯವನ್ನೇ ನುಡಿಯುತ್ತಿದ್ದೇನೆ ಎಂದು ನುಡಿದನು. ಗುಹನು ಅತ್ಯಂತ ಸಂತೋಷಯುಕ್ತನಾಗಿ ಭರತನನ್ನು ಕುರಿತು ಭರತ, ನೀನು ಸತ್ಯಸಂಧನು ಕೃತಾರ್ಥನು. ಭೂಮಂಡಲದಲ್ಲಿ ನಿನಗೆ ಸಮಾನರಾದವರನ್ನು ಕಾಣೆನು. ದೈವಾನುಕೂಲದಿಂದ ತನಗೆ ತಾನೇ ಬಂದ ರಾಜ್ಯಾಧಿಪತ್ಯವನ್ನು ಬಿಡಲೆಣಿಸಿದ್ದೀಯೆ. ಲೋಕದಲ್ಲಿ ನಿನ್ನ ಕೀರ್ತಿಯು ಎಂದೆಂದಿಗೂ ಸ್ಥಿರವಾಗಿರುವುದು. ವನಕ್ಕೆ ಬಂದ ಶ್ರೀರಾಮನನ್ನು ತಿರುಗಿ ಕರೆದುಕೊಂಡು ಹೋಗುವುದಕ್ಕೆ ನೀನು ಅತಿಪ್ರಯಾಸದಿಂದ ಬಂದೆ ಎಂದು ಹೇಳಿದನು. ಅಷ್ಟರಲ್ಲಿ ರಾತ್ರಿಯಾಯಿತು. ಭರತನು ಅಲ್ಲಿಯೇ ಸೇನೆಯನ್ನು ವಿಶ್ರಾಂತಿಗೊಳಿಸಿ ಶತ್ರುಘ್ನನ ಸಮೀಪದಲ್ಲಿ ತಾನು ಮಲಗಿದನು. ಮಹಾತ್ಮನಾದ ಭರತನಿಗೆ ರಾಮವಿಯೋಗವು ಒಳಗೊಳಗೆ ಶೋಕದಿಂದ ಕುದಿಯುವಂತೆ ಮಾಡಿತ್ತು. ಒಣಗಿದ ಮರದೊಳಗೆ ಸೇರಿಕೊಂಡ ಬೆಂಕಿಯಂತೆ ಸುಡುತ್ತಿತ್ತು. ಶೋಕವು ಬೆಟ್ಟದಂತೆ ಅವನ ಮೇಲೆ ಕುಳಿತಿತ್ತು. ಪುನಃಪುನಃ ನಿಟ್ಟಿಸಿರುಬಿಡುತ್ತ ಎಚ್ಚರದಪ್ಪಿದವನಂತಾಗಿದ್ದನು. ಭರತನ ಹೃದಯದಲ್ಲಿ ಶಾಂತಿಯ ಲೇಶವೂ ಇರಲಿಲ್ಲ. ಅದನ್ನು ಕಂಡು ಗುಹನು ಭರತನಿಗೆ ಸಮಾಧಾನವನ್ನು ಹೇಳಿದನು.

**ಗುಹನು ಶ್ರೀ ರಾಮ ಲಕ್ಷ್ಮಣರ ವೃತ್ತಾಂತನನ್ನು ಭರತನಿಗೆ ಹೇಳಿದ್ದು**

ಆಮೇಲೆ ಅರಣ್ಯವಾಸಿಯಾದ ಗುಹನು ಮಹಾತ್ಮನಾದ ಭರತನನ್ನು ಮೃದುನುಡಿಗಳಿಂದ ಸಂತವಿಡುತ್ತ ಹೀಗೆಂದನು: ಎಲೈ ಭರತನೆ, ಲಕ್ಷ್ಮಣಸಮೇತನಾದ ಶ್ರೀರಾಮನು ಇಲ್ಲಿಗೆ ಬಂದಿದ್ದಾಗ ಲಕ್ಷ್ಮಣನು ರಾತ್ರಿಯಲ್ಲಿ ಆತನನ್ನು ಕಾದಿರಬೇಕೆಂದು ನಿದ್ರೆಯಿಲ್ಲದೆ ಕುಳಿತುಕೊಂಡಿದ್ದನು. ನಾನು ಆತನನ್ನು ಕುರಿತು ಎಲೈ ಲಕ್ಷ್ಮಣ, ನಾನು ನಿನ್ನ ಸಲುವಾಗಿ ಉತ್ತಮವಾದ ಸುಪ್ಪತ್ತಿಗೆಯನ್ನು ತರಿಸಿದ್ದೇನೆ. ಈ ಸುಪ್ಪತ್ತಿಗೆಯ ಮೇಲೆ ಶಯನಮಾಡು. ಶ್ರೀರಾಮನು ವ್ರತಸ್ಥನು. ಮಿಕ್ಕವರು ನೆಲದ ಮೇಲೆ ಮಲಗಬಹುದು. ಅತ್ಯಂತ ಸುಖವನ್ನನುಭವಿಸಿಕೊಂಡಿದ್ದ ನೀನು ನೆಲದ ಮೇಲೆ ಮಲಗಬೇಡ.

ನಾನು ಎಚ್ಚರಿಕೆಯಿಂದ ಶ್ರೀರಾಮನನ್ನು ಕಾದಿರುತ್ತೇನೆ. ನನಗೆ ಅವನಿಗಿಂತಲೂ ಹೆಚ್ಚಿನ ಪ್ರಿಯಸಖನಿಲ್ಲ. ಆತನಿಗೆ ನಾನೂ ಪ್ರಿಯಸಖನು. ಇದು ಸತ್ಯ, ಶ್ರೀರಾಮನ ಕೃಪೆಯಿಂದಲೇ ನಾನು ಸಮಸ್ತ ಲೋಕಗಳಲ್ಲಿಯೂ ಕೀರ್ತಿಯನ್ನು ಪಡೆದೇನು, ಆತನಿಂದಲೇ ಧರ್ಮಾರ್ಥ ಕಾಮಗಳನ್ನೂ ಪಡೆಯುವನು. ಆದಕಾರಣ ಸೀತಾಸಮೇತನಾಗಿ ಮಲಗಿರುವ ಶ್ರೀರಾಮನನ್ನು ನಾನು ಕಾದಿರುತ್ತೇನೆ. ಅವರು ನಿದ್ರೆ ತಿಳಿದೆದ್ದ ಮೇಲೆ ನಾನು ನಿದ್ರೆಯನ್ನು ಮಾಡುತ್ತೇನೆ' ಎಂದು ಹೇಳಿದೆನು. ಲಕ್ಷ್ಮಣನು ನನ್ನನ್ನು ಕುರಿತು ಗುಹ, ಶ್ರೀರಾಮನು ಎಂಥವನೆಂದು ನೀನು ಬಲ್ಲೆಯಾ ರಣರಂಗದಲ್ಲಿ ದೇವಾಸುರರಲ್ಲಾರೂ ಈತನಿಗೆದುರಾಗಿ ನಿಲ್ಲುವವರಿಲ್ಲ, ಅಂಥ ಸ್ವಾಮಿಯು ಹುಲ್ಲು ಹಾಸಿಗೆಯಮೇಲೆ ಸೀತಾಸಮೇತನಾಗಿ ಮಲಗಿದ್ದಾನೆ, ನೋಡು.

**ಮುಂದುವರಿಯುವುದು...**

# ಕಣ್ಣಿಗೆ ಕಾಣುವ ದೇವರು ಯೋಧ

• ಉದಯವಾಹಿನಿ, ವಿಶೇಷ

ನನ್ನ ಪ್ರಕಾರ ಇಂದಿನ ದೇವರು ಎಂದರೆ ನಮ್ಮನ್ನು ಗಡಿಯಲ್ಲಿ ಕಾಯುತ್ತಿರುವ ಆ ಯೋಧರು. ತಮ್ಮ ಜೀವನವನ್ನು ದೇಶಕ್ಕೋಸ್ಕರ ತಮ್ಮ ಜೀವ ಮತ್ತು ಜೀವನವನ್ನೇ ಕೊಡಲು ಸಿದ್ಧರಿರುವ ಅವರೇ ನಿಜವಾದ ದೇವರು ಅವರು ಯಾವುದೇ ಸಂದರ್ಭದಲ್ಲೂ ನಮಗೆ ನಮ್ಮ ಕುಟುಂಬಕ್ಕೆ ನಮ್ಮ ದೇಶಕ್ಕೆ ರಕ್ಷಣೆ ಕೊಡುತ್ತಿದ್ದಾರೆ.

ದೇವರು ಇದ್ದಾರೋ ಅಥವಾ ಇಲ್ಲವೋ ನಂಗೊತ್ತಿಲ್ಲ

ಆದ್ರೆ, ಸಾವು ನನ್ನ ಕಣ್ಣು ಮುಂದೆ ಇದ್ರು,
ನಮ್ಮನ್ನೆಲ್ಲಾ ಕಾಯ್ತು ಇದ್ದಾರಲ್ಲ
ಈ ಸೈನಿಕ ಅಣ್ಣಂದಿರು ಇವರಲ್ಲಿ ನಾನು
ಆ ಭಗವಂತನನ್ನು ಕಾಣಾ ಇದ್ದೀನಿ.''

ನನ್ನ ಮಾತಿನಲ್ಲಿ ಕೇಳಿಕೊಳ್ಳುವ ಒಂದು ಪ್ರಶ್ನೆ ಎಂದರೆ, ದೇವರು ಇರುವುದು ನಿಜವಾಗಿಯೂ ಸತ್ಯವೇ ಆದರೆ, ಅವನು ಗಡಿಯಲ್ಲಿ ದೇಶ ಕಾಯುತ್ತಿದ್ದ ಎಷ್ಟೋ ಸೈನಿಕರ ಪ್ರಾಣಗಳನ್ನು ಉಳಿಸಬೇಕಿತ್ತು. ಅವರ ಕುಟುಂಬಕ್ಕೆ ರಕ್ಷಣೆ ನೀಡಬೇಕಿತ್ತು. ದೇವರು ಇದ್ದಾನೆ ಎಂದು ನಾನು ಸತ್ಯವಾಗಿಯೂ ನಂಬುತ್ತೇನೆ. ಆದರೆ ಗಡಿಯಲ್ಲಿ ವಿಗ್ರಹಕ್ಕೆ ಜೀವವಿದೆ ಎಂದು ಪೂಜಿಸು ನಾನು ನಂಬುವುದಿಲ್ಲ. ದೇಶದ ಗಡಿಯಲ್ಲಿ ಹಗಲು–ಇರುಳು ಎನ್ನದೆ ಅನ್ನ–ನೀರು ಇಲ್ಲದೆ ತನ್ನ ಕುಟುಂಬವನ್ನು ಲೆಕ್ಕಿಸದೆ ಇಡೀ ದೇಶದ ಜನರ ಜೀವವನ್ನು ರಕ್ಷಿಸುವ ಆ ಯೋಧ ನನ್ನ ಪ್ರಕಾರ ದೇವರು. ದೇವರು ಎಂದರೆ ನಮ್ಮ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತದೆ. ದೇವರು ನಿಜವಾಗಿಯೂ ಇದ್ದಾರಾ? ಎಲ್ಲಿದ್ದಾರೆ? ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ಯಾಕೆ ಜನರಿಗೆ ಕಷ್ಟಗಳನ್ನು ಕೊಡುತ್ತಿದ್ದಾರೆ.

ಆದರೆ ನಾನು ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ ದೇವರನ್ನು ಸೈನಿಕರಲ್ಲಿ ಕಾಣಬೇಕು. ಅವರಿಗೆ ನಮ್ಮ ಮನಸ್ಸಿನಲ್ಲಿ ಗುಡಿಯನ್ನು ಕಟ್ಟಿ ಆರಾಧಿಸಬೇಕು. ಅವರಿಗೆ ಒಳ್ಳೆಯದಾಗಲೆಂದು ಬಯಸಬೇಕು. ನಾವು ನಾಡಿನ ಒಳಗೆ ಹೊಟ್ಟೆ ತುಂಬಾ ಊಟ ಮಾಡಿ ನೆಮ್ಮದಿಯಾಗಿ ನಿದ್ರೆ ಮಾಡುತ್ತಿದ್ದೇವೆ. ಎಂದರೆ ಅದಕ್ಕೆ ಮುಖ್ಯ ಕಾರಣವೇ ಸೈನಿಕರು. ಅವರು ತಮ್ಮ ನಿದ್ರೆ, ಊಟ ಎಲ್ಲವನ್ನು ಬಿಟ್ಟು ನಮ್ಮನ್ನು ಕಾಯುತ್ತಿರುವುದೇ ಕಾರಣ. ನಮ್ಮ ನೆಮ್ಮದಿಗೆ ಅವರೇ ಕಾರಣ. ಎಲ್ಲರೂ ಸೈನಿಕರನ್ನು ದೇವರು ಎಂದು ಹೇಳುತ್ತಾರೆ. ಅದು ಸುಲಭ ಆದರೆ ಯಾರಾದರೂ ಅವರ ಮಗನನ್ನು ಸೈನಿಕರನ್ನಾಗಿ ಕಳುಹಿಸಲು ಇಷ್ಟಪಡುವುದಿಲ್ಲ. ಯಾರಾದರೂ ಹೋದರೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಈ ಒಂದು ಕಾರಣದಿಂದಲೇ ನಮ್ಮ ದೇಶ ಇನ್ನೂ ಮುಂದುವರೆಯುತ್ತಿರುವ ದೇಶವಾಗಿಯೇ ಉಳಿದಿದೆ. ದೇಶದೊಳಗಿನ ಎಲ್ಲರಲ್ಲೂ ಒಬ್ಬ ಯೋಧನಿದ್ದಾನೆ. ಎಲ್ಲರೂ ದೇಶವನ್ನು ಕಾಯಲು ಸಿದ್ಧರಾದರೆ ದೇಶಕ್ಕೆ ಸೈನಿಕರ ಅವಶ್ಯಕತೆಯೇ ಇರುವುದಿಲ್ಲ. ಯಾರು ದೇಶದೊಳಗೆ ಬರುವುದಿಲ್ಲ. ನಾನು ನಿಜವಾಗಿಯೂ ಯೋಧರನ್ನು ಇಷ್ಟಪಡುತ್ತೇನೆ. ನಾವು ಅವರನ್ನು ಪ್ರತಿನಿತ್ಯವು ಮನದಲ್ಲಿ ನೆನೆಯಬೇಕು.

**ದೇವರು ಇರುವುದು ಸತ್ಯ**
**ನಮ್ಮ ಕಣ್ಣಿಗೆ ಕಾಣುವ ಯೋಧ**



**ವಿಶ್ವಾಸ್.ಡಿ.ಗೌಡ**

# ಉದ್ಯಮ, ಶಿಕ್ಷಣ ಸಂಸ್ಥೆಗಳನ್ನು ಒಟ್ಟುಗೂಡಿಸಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು,

ಹಲವಾರು ಕಾರಣಗಳಿಂದ ಜಾಗತಿಕ ಉದ್ಯಮ ಕ್ಷೇತ್ರ ಬದಲಾಗುತ್ತಿದ್ದು, ಪ್ರತಿಕ್ರಿಯಾಶೀಲ ಮತ್ತು ಪ್ರಾಯೋಗಿಕ ಮ್ಯಾನೇಜ್ಮೆಂಟ್ ಶಿಕ್ಷಣ ಒದಗಿಸಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಜಾಸ್ತಿಯಾಗಿದೆ. ಈ ನಿಟ್ಟಿನಲ್ಲಿ ಐಎಸ್‌ಎಂಇ ಸಂಸ್ಥೆಯು ಬೋರ್ಡ್ ಆಫ್ ಸ್ಟಡೀಸ್ ಸಭೆಯನ್ನು ಆಯೋಜಿಸಿದ್ದು, ಈ ಸಭೆಯಲ್ಲಿ ಆಕ್ಸೆಂಚರ್, ಜೆಪಿ ಮೋರ್ಗನ್ ಚೇಸ್, ಗ್ರಾಂಟ್ ಥಾರ್ನ್ ಟನ್, ಸೇಲ್ಸ್ ಫೋರ್ಸ್.ಕಾಮ್, ಇನ್ಫೋಸಿಸ್, ಟಿಸಿಎಸ್, ಎಲ್‌ಟಿ, ಏಸರ್ ಮತ್ತು ರಿಲಯನ್ಸ್ ರೀಟೇಲ್ ನಂತಹ ಪ್ರಮುಖ ಸಂಸ್ಥೆಗಳ 30ಕ್ಕೂ ಹೆಚ್ಚು ಹಿರಿಯ ಉದ್ಯಮ ತಜ್ಞರು ಮತ್ತು ಶಿಕ್ಷಣ ತಜ್ಞರು ಭಾಗವಹಿಸಿ ಪಿಜಿಡಿಎಂ ಪಠ್ಯಕ್ರಮವನ್ನು ಈ ಕಾಲಕ್ಕೆ ಮತ್ತು ಉದ್ಯಮದ ಅಗತ್ಯಗಳಿಗೆ ಹೊಂದಿಕೊಳ್ಳುವಂತೆ ರೂಪಿಸುವ ಕುರಿತು ಸಂವಾದ ನಡೆಸಿದರು.

ಐಎಸ್‌ಎಂಇನ ಬೋರ್ಡ್ ಆಫ್ ಸ್ಟಡೀಸ್ ಸಭೆಯಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಮಾರಾಟ ಕೌಶಲ್ಯ, ಎಐ ನಂತಹ ಡೇಟಾ ಆಧಾರಿತ ತಂತ್ರಜ್ಞಾನಗಳು ಮತ್ತು ಮಾನವ ಕೇಂದ್ರಿತ ನಾಯಕತ್ವದಂತಹ ಪ್ರಾಯೋಗಿಕ ಕೌಶಲ್ಯಗಳನ್ನು ಸಂಯೋಜಿಸುವ ಕುರಿತು ಚರ್ಚಿಸಲಾಯಿತು. ಮಾರ್ಕೆಟಿಂಗ್ ಮತ್ತು ಮಾರಾಟದ ಮೂಲಭೂತ ಸಿದ್ಧಾಂತಗಳನ್ನು ಮರುವ್ಯಾಖ್ಯಾನಿಸುವುದರಿಂದ ಹಿಡಿದು ಎಐ ಆಧರಿತ ಡಿಸಿಷನ್ ಮೇಕಿಂಗ್ ಅನ್ನು ವಿವಿಧ ಕ್ಷೇತ್ರಗಳಲ್ಲಿ ಸಂಯೋಜಿಸುವವರೆಗೆ ಈ ಸಭೆಯಲ್ಲಿ ಚರ್ಚೆ ನಡೆಸಲಾಗಿದ್ದು, ಶಿಕ್ಷಣವು ವಿದ್ಯಾರ್ಥಿಗಳನ್ನು ಕೇವಲ ಅವರ ಉದ್ಯೋಗಕ್ಕೆ ಹೊಂದಿಕೊಳ್ಳಲು ಸಜ್ಜುಗೊಳಿಸಲು ನೆರವಾಗುವುದರ ಬದಲಾಗಿ ಹೊಸ ಕಾಲಕ್ಕೆ ಸಿದ್ಧಗೊಳಿಸಬೇಕಾದ ಅಗತ್ಯವನ್ನು ಸಾರಲಾಯಿತು.

ಈ ಕುರಿತು ಮಾತನಾಡಿರುವ ಐಎಸ್‌ಎಂಇಯ ನಿರ್ದೇಶಕರಾದ ಡಾ. ನಿತಿನ್‌ಗಾರ್ಗ್ ಅವರು, ಮಾರಾಟ ಸಿದ್ಧತೆ, ರಿಯಲ್ ಟೈಮ್ ಡೇಟಾ ಬಳಕೆ, ನೀತಿಶಾಸ್ತ್ರ ಇತ್ಯಾದಿ ಕುರಿತು ನಾವು ಸಂವಾದ ನಡೆಸಿದ್ದೇವೆ. ಬೋರ್ಡ್ ಆಫ್ ಸ್ಟಡೀಸ್ ಸಭೆಯಲ್ಲಿ ದೊರೆತಿರುವ ಒಳನೋಟಗಳು ನಮ್ಮ ಗಮನವನ್ನು ಇನ್ನಷ್ಟು ತೀಕ್ಷ್ಣಗೊಳಿಸಲು ಮತ್ತು ಪ್ರಸ್ತುತ ಹಾಗೂ ಭವಿಷ್ಯಕ್ಕೆ ಸಲ್ಲುವ ಶಿಕ್ಷಣವನ್ನು ಒದಗಿಸಲು ಸಹಾಯ ಮಾಡುತ್ತವೆ, ಎಂದು ಹೇಳಿದರು.

**ಐಎಸ್‌ಎಂಇಯ ಡೀನ್ ಡಾ. ರೋನಿ ಕುರಿಯನ್ ಅವರು, ಚರ್ಚೆಯಲ್ಲಿ ಹೊರಹೊಮ್ಮಿದ ವಿಚಾರಗಳು ಭವಿಷ್ಯ ಸಿದ್ಧ ವೃತ್ತಿಪರರನ್ನು ರೂಪಿಸುವ ಐಎಸ್‌ಎಂಇನ ಬದ್ಧತೆಗೆ ನೆರವಾಗಲಿದೆ. ಬೋರ್ಡ್ ಆಫ್ ಸ್ಟಡೀಸ್ ಸಭೆಯ ಚರ್ಚೆಗಳು ಬದಲಾಗುತ್ತಿರುವ ಉದ್ಯಮ ಕ್ಷೇತ್ರಕ್ಕೆ ಹೊಂದಿಕೊಳ್ಳುವ ವಿದ್ಯಾರ್ಥಿಗಳನ್ನು ಒದಗಿಸಲು ನಮಗೆ ಮೌಲ್ಯಯುತ ಮಾರ್ಗದರ್ಶನವನ್ನು ನೀಡಿವೆ, ಎಂದು ಹೇಳಿದರು.**

# ಮದುವೆ ಸಂಭ್ರಮಕ್ಕೆ ಸಿದ್ಧಗೊಳಿಸಿರುವ ಸಂಪ್ರದಾಯ ಆಭರಣ ಸಂಗ್ರಹ ಬಿಡುಗಡೆ

• ಉದಯವಾಹಿನಿ, ಬೆಂಗಳೂರು,

ಅತ್ಯಂತ ಜನಪ್ರಿಯ ಆಭರಣ ಸಂಸ್ಥೆಗಳಲ್ಲಿ ಒಂದಾಗಿರುವ ಎವಿಆರ್ ಸ್ವರ್ಣ ಮಹಲ್ ಜ್ಯುವೆಲರ್ಸ್ ಇದೀಗ ದಕ್ಷಿಣ ಭಾರತದ ಮದುಮಗಳನ್ನು ಅದ್ದೂರಿಯಾಗಿ ಸಿಂಗರಿಸುವುದಕ್ಕಾಗಿಯೇ ಸಿದ್ಧಗೊಳಿಸಿರುವ ತನ್ನ ಸಂಪ್ರದಾಯ ಎಂಬ ಅದ್ಭುತ ಆಭರಣ ಸಂಗ್ರಹವನ್ನು ಲೋಕಾರ್ಪಣೆ ಮಾಡಿದೆ.

ಈ ಸಂಗ್ರಹವನ್ನು ಇತ್ತೀಚೆಗೆ ಬೆಂಗಳೂರಿನ ಬಸವನಗುಡಿಯ ಗಂಜಾಂ ಮಂಟಪದಲ್ಲಿ ಅದ್ದೂರಿಯಾಗಿ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಫ್ಯಾಷನ್ ಶೋ ನಡೆದಿದ್ದು, ನಟಿ ಧನ್ಯ ರಾಮ್ ಕುಮಾರ್ ಮತ್ತು ವಂಶಿ ಉದಯ್ ಅವರು ಈ ಆಭರಣ ಸಂಗ್ರಹವನ್ನು ಪ್ರದರ್ಶಿಸಿದರು.

ಕನ್ನಡ, ತಮಿಳು, ತೆಲುಗು, ಮಲಯಾಳಂ ಸಂಪ್ರದಾಯದ ಸಂಗ್ರಹಗಳನ್ನು ಪ್ರದರ್ಶಿಸಲಾಯಿತು. ಸಂಪ್ರದಾಯ' ಆಭರಣ ಸಂಗ್ರಹವು ದಕ್ಷಿಣ ಭಾರತದ ವಿವಾಹ ಸಂಪ್ರದಾಯಗಳಿಗೆ ಸಲ್ಲಿಸಿರುವ ಗೌರವ ಎಂದು ಸಂಸ್ಥೆ ತಿಳಿಸಿದ್ದು, ಈ ಆಭರಣ ಸಂಗ್ರಹವು ಈ ಕಾಲದ ಮದುಮಗಳು ತನ್ನ ಪರಂಪರೆಯನ್ನು ಹೆಮ್ಮೆಯಿಂದ ಧರಿಸಲು ಅನುವು ಮಾಡಿಕೊಡುತ್ತದೆ.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಎ.ಬಿ.ಎಸ್. ಸಂಜಯ್ ಅವರು, ಸಂಪ್ರದಾಯ ಕೇವಲ ಒಂದು ಆಭರಣ ಸಂಗ್ರಹ ಮಾತ್ರವಲ್ಲ, ಇದು ದಕ್ಷಿಣ ಭಾರತದ ವಿವಾಹ ಸಂಪ್ರದಾಯಕ್ಕೆ ಸಂದ ಗೌರವವಾಗಿದೆ ಎಂದರು. 'ಸಂಪ್ರದಾಯ' ಸಂಗ್ರಹವು ಕರ್ನಾಟಕ ಮತ್ತು ತಮಿಳುನಾಡಿನಲ್ಲಿರುವ ಎವಿಆರ್ ಸ್ವರ್ಣ ಮಹಲ್ ಜ್ಯುವೆಲರ್ಸ್ ನ 20 ಶೋರೂಂಗಳಲ್ಲಿ ಲಭ್ಯವಿದೆ. ಈ ಸಂಗ್ರಹವನ್ನು ವೀಕ್ಷಿಸಲು https:// avrswarnamahal. com ಗೆ ಭೇಟಿ ನೀಡಬಹುದು.

**ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಎಸ್. ಸೌಮ್ಯ ಅವರು, ಸಂಪ್ರದಾಯ ಸಂಗ್ರಹದ ಪ್ರತಿಯೊಂದು ಆಭರಣವೂ ಹೊಸ ಬದುಕಿನ ಕಾಲಿಡುತ್ತಿರುವ ವಧುವಿನ ಘನತೆ ಮತ್ತು ಮದುವೆ ಸಂಪ್ರದಾಯಗಳಿಂದ ಜನ್ಮತಾಳಿವೆ ಎಂದರು. ನಿರ್ದೇಶಕರಾದ ಎ.ವಿ.ಆರ್. ಸಿದ್ಧಾಂತ್ ಅವರು, ಈ ಸಂಗ್ರಹವು ಹಳೆಯದು ಮತ್ತು ಹೊಸದರ ಮಧ್ಯದ ಸೇತುವೆಯಾಗಿದೆ. ಸಂಪ್ರದಾಯವನ್ನು ಸಂಭ್ರಮಿಸುವ ಪ್ರತಿಯೊಬ್ಬ ವಧುವಿಗಾಗಿ ಈ ಸಂಗ್ರಹವನ್ನು ರಚಿಸಲಾಗಿದೆ ಎಂದರು. ಮತ್ತೊಬ್ಬ ನಿರ್ದೇಶಕರಾದ ಎ.ವಿ.ಆರ್. ಶ್ರೀ ಸ್ಮರಣ್, ಸಂಪ್ರದಾಯ ಸಂಗ್ರಹವು ಚಿನ್ನದ ಮೂಲಕ ಕಥೆಗಳನ್ನು ಹೇಳುವ ನಮ್ಮ ಹುಮ್ಮಸ್ಸಿನ ಪ್ರತಿಬಿಂಬವಾಗಿದೆ ಎಂದರು.**

# ಎಸ್‌ಎಸ್ ವಿರುದ್ಧ ವರುಣ್ ಚಕ್ರವರ್ತಿ ಬ್ಯಾಟಿಂಗ್ ಮೂಲಕ ರೋಮಾಂಚಕ ಗೆಲುವು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು,

ವರುಣ್ ಚಕ್ರವರ್ತಿ ಕೊನೆಯ ಎರಡು ಎಸೆತಗಳಲ್ಲಿ ಸಿಕ್ಸರ್ ಮತ್ತು ಬೌಂಡರಿ ಬಾರಿಸಿ ಡಿಡಿ ತಂಡವು ಟಿಎಂಪಿಎಲ್ 2025ರ ರೋಮಾಂಚಕ ಪಂದ್ಯವನ್ನು ಗೆಲ್ಲಲು ಸಹಾಯ ಮಾಡಿದಾಗ ಆರ್. ಅಶ್ವಿನ್ ಅವರ ಭಾವನೆಗಳು ಉತ್ತುಂಗಕ್ಕೇರಿದವು.

ತಮಿಳುನಾಡು ಪ್ರೀಮಿಯರ್ ಲೀಗ್ ಟಿಎಂಪಿಎಲ್ 2025 ರ ಪಂದ್ಯ 19 ರಲ್ಲಿ ಸೇಲಂ ಸ್ಪಾರ್ಟನ್ಸ್ (ಎಸ್ ಎಸ್) ವಿರುದ್ಧ ವರುಣ್ ಚಕ್ರವರ್ತಿ ಬ್ಯಾಟಿಂಗ್ ಮೂಲಕ ರೋಮಾಂಚಕ ಗೆಲುವು ಸಾಧಿಸಿದಾಗ ದಿಂಡಿಗಲ್ ಡ್ರಾಗನ್ಸ್ (ಡಿಡಿ) ನಾಯಕ ರವಿಚಂದ್ರನ್ ಅಶ್ವಿನ್ ತಮ್ಮ ಅಮೂಲ್ಯ ಪ್ರತಿಕ್ರಿಯೆಯನ್ನು ಮರೆ ಮಾಡಲು ಸಾಧ್ಯವಾಗಲಿಲ್ಲ. ಜೂನ್ 22 ರ ಭಾನುವಾರ ತಿರುನಲ್ವೇಲಿಯ ಇಂಡಿಯನ್ ಸಿಮೆಂಟ್ ಕಂಪನಿ ಮೈದಾನದಲ್ಲಿ ಪಂದ್ಯ ನಡೆಯಿತು.

189 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಪಂದ್ಯವು ಕೊನೆಯ ಮೂರು ಎಸೆತಗಳಲ್ಲಿ 10 ರನ್‌ಗಳ ಅಗತ್ಯವಿತ್ತು, ಕೈಯಲ್ಲಿ ಎರಡು ವಿಕೆಟ್ ಇತ್ತು, ವರುಣ್ ಚಕ್ರವರ್ತಿ (1 ರನ್) ಎಂ. ಪೊಯಮೋಳಿಯನ್ನು ಎದುರಿಸಿದರು. ಓವರ್‌ನ ನಾಲ್ಕನೇ ಎಸೆತದಲ್ಲಿ ಎರಡು ರನ್‌ಗಳು ಬಂದವು, ನಂತರ ಪಿಚ್ ಹೊರಗೆ ಬಿದ್ದ ಎಸೆತಕ್ಕೆ ನೋ–ಬಾಲ್ ಬಂದಿತು.

ಚಕ್ರವರ್ತಿ ಅದನ್ನು ಲಾಭ ಮಾಡಿಕೊಂಡು ಲಾಂಗ್–ಆನ್ ಮೇಲೆ ಆರು ರನ್‌ಗಳಿಸಿದರು, ನಾಯಕ ಅಶ್ವಿನ್ ಡಗೌಟ್ ನಿಂದ ಆತಂಕದಿಂದ ನೋಡುತ್ತಿದ್ದಾಗ ಅಂತಿಮ ಎಸೆತದಲ್ಲಿ ಸಮೀಕರಣವನ್ನು ಒಂದು ರನ್‌ಗೆ ಇಳಿಸಿದರು. ನಂತರ 33 ವರ್ಷದ ಅಶ್ವಿನ್ ಲಾಂಗ್–ಆಫ್ ಮೇಲೆ ಕೊನೆಯ ಎಸೆತವನ್ನು ನಾಲ್ಕು ರನ್‌ಗಳಿಸಿ ತಂಡಕ್ಕೆ ರೋಮಾಂಚಕ ಗೆಲುವು ತಂದುಕೊಟ್ಟರು, ಅಶ್ವಿನ್ ಭಾವನಾತ್ಮಕ, ಅಮೂಲ್ಯವಾದ ಅಭಿವ್ಯಕ್ತಿಯೊಂದಿಗೆ ಪ್ರತಿಕ್ರಿಯಿಸಲು ಮತ್ತು ನಂತರ ನೆಮ್ಮದಿಯ ನಗೆ ಬೀರಲು ಪ್ರೇರೇಪಿಸಿದರು.

# ಆದ್ವಿಕ್ ಅಭಿನವ್ ಕೃಷ್ಣ –ಚೆಸ್ ರಜತ ಪದಕ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಹರಿಯಾಣದ ಗುರು ಗ್ರಾಮದಲ್ಲಿ ಶನಿವಾರ ಕೊನೆಗೊಂಡ 9 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್ ಶಿಪ್‌ನ ಓಪನ್ ವಿಭಾಗದಲ್ಲಿ ಕರ್ನಾಟಕದ ಮಾಸ್ಟರ್ ಆದ್ವಿಕ್ ಅಭಿನವ್ ಕೃಷ್ಣ ರನ್ನರ್ ಆಪ್ ಸಾಧಿಸಿ ರಜತ ಪದಕ ಗಳಿಸಿದ್ದಾರೆ. ಮುಕ್ತ ವಿಭಾಗದಲ್ಲಿ ಒಟ್ಟು 11 ಕ್ಕೆ 9.5 ಉತ್ತಮಾಂಕಗಳನ್ನು ಕಲೆ ಹಾಕಿದ ಅದ್ವಿಕ್ 2 ನೇ ಸ್ಥಾನ ಪಡೆದಿದ್ದು, ಇದರೊಂದಿಗೆ ಇಟಲಿಯಲ್ಲಿ ನಡೆಯಲಿರುವ ವಿಶ್ವ ಕೆಡೆಟ್ ಅಂಡರ್– 10 ಚೆಸ್ ಚ್ಯಾಂಪಿಯನ್ ಶಿಪ್ ನಲ್ಲಿ ಭಾರತವನ್ನು ಪ್ರತಿನಿಧಿಸುವ ಅರ್ಹತೆ ಪಡೆದಿದ್ದಾರೆ.

ಬೆಂಗಳೂರಿನ ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಶಾಲೆಯಲ್ಲಿ 4 ನೇ ತರಗತಿ ಓದುತ್ತಿರುವ ಆದ್ವಿಕ್, ಶ್ರೀಮತಿ ರಾಧಿಕಾ ರಾವ್ ಮತ್ತು ಅಭಿನವ ಕೃಷ್ಣ ಅವರ ಪುತ್ರ. ಜಿಲ್ಲೆ, ರಾಜ್ಯದ ಅನೇಕ ಪ್ರಮುಖ ಚೆಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಯಗಳಿಸಿರುವ ಮಾಸ್ಟರ್ ಆದ್ವಿಕ್ ಈಗಾಗಲೇ ದೆಹಲಿ, ಕಲ್ಕತ್ತಾ, ಅಮೃತ್ ಸರ, ಪೂನಾ, ತಮಿಳು ನಾಡು, ಹೈದರಾಬಾದ್, ಚೆನ್ನೈ, ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆದ ವಿವಿಧ ಚೆಸ್ ಸ್ಪರ್ಧೆಗಳಲ್ಲಿ ವಿಜೇತನಾಗಿರುವುದು ಈ ಬಾಲಕನ ಅಗ್ಗಳಿಕೆ. ಮಾಸ್ಟರ್ ಆದ್ವಿಕನ ಚೆಸ್ ತರಬೇತುದಾರರಾದ ಖ್ಯಾತ ಚೆಸ್ ಕೋಚ್– ಜಯರಾಮ ರಾಮಣ್ಣ ಅವರ ಅಭಿಪ್ರಾಯದಂತೆ ಆದ್ವಿಕ್ ಪ್ರಾಮಾಣಿಕವಾಗಿ ಪ್ರಯತ್ನಿಸುವ, ಬಹು ಬದ್ಧತೆಯ, ಪರಿಶ್ರಮಿಸುವ ಪ್ರತಿಭಾವಂತ ಬಾಲಕ.

ಈಗಾಗಲೇ ಜಿಲ್ಲೆ– ರಾಜ್ಯ–ರಾಷ್ಟ್ರೀಯ ಮಟ್ಟದ ಅನೇಕ ಚೆಸ್ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನಗಳಿಸಿರುವ ಇವನಿಗೆ ಅಂತರರಾಷ್ಟ್ರೀಯ ಮಟ್ಟದ ಚೆಸ್ ಕ್ರೀಡಾ ಜಗತ್ತಿನಲ್ಲಿ ಉತ್ತಮ ಭವಿಷ್ಯವಿದೆ –ಎಂದು ಶುಭ ಹಾರೈಸಿದ್ದಾರೆ.

**ಮಾಸ್ಟರ್– ಆದ್ವಿಕ್ ಅಭಿನವ್ ಕೃಷ್ಣ ಅವರು, ಖ್ಯಾತ ಲೇಖಕಿ ವೈ.ಕೆ.ಸಂಧ್ಯಾ ಶರ್ಮ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ– ರಂಗಕರ್ಮಿ ಎಸ್.ವಿ.ಕೃಷ್ಣ ಶರ್ಮ ಅವರ ಮೊಮ್ಮಗ ಹಾಗೂ ನಬಾರ್ಡ್ ಹಿರಿಯ ಅಧಿಕಾರಿ ಶ್ರೀ ಹೆಚ್. ಎನ್. ರಂಗನಾಥ್ ರಾವ್ ಮಾತು ಶ್ರೀಮತಿ ಸುನಂದಾ ರಾವ್ ಅವರ ಹೆಮ್ಮೆಯ ಮೊಮ್ಮಗ ಕೂಡ.**

# ಜೇನುತುಪ್ಪಕ್ಕೆ ಕರಿಮೆಣಸು ಸೇರಿಸಿ ಸೇವಿಸಿದ್ರೆ...

ಜೇನುತುಪ್ಪವನ್ನು ಕಾಳು ಮೆಣಸಿನ ಪುಡಿಯೊಂದಿಗೆ ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸೋದ್ರಿಂದ ಹಲವಾರು ಪ್ರಯೋಜನಗಳಿವೆ. ತಿಳಿದ್ರೆ ನೀವೂ ತಿನ್ನಲು ಆರಂಭಿಸುತ್ತೀರಾ. ಮಕ್ಕಳಿಂದ ಹಿಡಿದು ವಯಸ್ಸಾದವರಿಗೂ ಉತ್ತವಾಗಿದೆ. ಜೇನುತುಪ್ಪ ಕರಿಮೆಣಸು ಎರಡೂ ಔಷಧೀಯ ಗುಣಗಳಿಂದ ಸಮೃದ್ಧವಾಗಿದೆ. ಹಾಗಾಗಿ ಇದನ್ನು ಆಯುರ್ವೇದದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಜೇನುತುಪ್ಪದ ಜೊತೆಗೆ ಚಿಟಿಕೆ ಕರಿಮೆಣಸನ್ನು ಸೇವಿಸಿದರೆ ಅವು ದೇಹವನ್ನು ಅನೇಕ ಗಂಭೀರ ಕಾಯಿಲೆಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಈ ಮನೆಮದ್ದು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಜೀರ್ಣಕ್ರಿಯೆ, ಶೀತ, ತೂಕ ನಷ್ಟ ಮತ್ತು ಇತರ ಸಮಸ್ಯೆಗಳಿಗೆ ಪ್ರಯೋಜನಕಾರಿಯಾಗಿದೆ.

**ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ**

ಜೇನುತುಪ್ಪ, ಕರಿಮೆಣಸು ಎರಡೂ ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿವೆ. ಅವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ, ಇದು ಕಾಲೋಚಿತ ಕಾಯಿಲೆಗಳು, ಸೋಂಕುಗಳು ಮತ್ತು ಅಲರ್ಜಿಗಳನ್ನು ತಡೆಯುತ್ತದೆ. ಇದು ದೇಹದ ಜೀವ ಕೋಶಗಳನ್ನು ಫ್ರೀ ರಾಡಿಕಲ್‌ಗಳಿಂದ ರಕ್ಷಿಸುತ್ತದೆ. ನಿಮಗೆ ಸುಸ್ತಾದಂತೆ ಭಾಸವಾದಾಗ ಇದನ್ನು ಸೇವಿಸೋದು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ.

**ಶೀತ ಮತ್ತು ಕೆಮ್ಮಿನಿಂದ ಪರಿಹಾರ :** ಜೇನುತುಪ್ಪವು ನೈಸರ್ಗಿಕ ಬ್ಯಾಕ್ಟೀರಿಯಾ ವಿರೋಧಿ ಗುಣವನ್ನು ಹೊಂದಿದ್ದು, ಕರಿಮೆಣಸು ಪೈಪರಿನ್ ಎಂಬ ಅಂಶವನ್ನು ಹೊಂದಿರುತ್ತದೆ. ಇದು ಉಸಿರಾಟದ ವ್ಯವಸ್ಥೆಯನ್ನು ತೆರೆಯುತ್ತದೆ ಮತ್ತು ಸೋಂಕಿನ ವಿರುದ್ಧ ಹೋರಾಡುತ್ತದೆ. ಬೆಳಿಗ್ಗೆ ಇದನ್ನು ಸೇವಿಸುವುದರಿಂದ ಗಂಟಲು ನೋವು,ಕಫ ಮತ್ತು ಕೆಮ್ಮಿನಿಂದ ಪರಿಹಾರ ಸಿಗುತ್ತದೆ.

ಶೀತವನ್ನು ತ್ವರಿತವಾಗಿ ಗುಣಪಡಿಸುತ್ತದೆ. ಈ ಮಿಶ್ರಣವು ಮಕ್ಕಳು ಮತ್ತು ವೃದ್ಧರಿಗೆ ಪ್ರಯೋಜನಕಾರಿಯಾಗಿದೆ.

**ಜೀರ್ಣಕ್ರಿಯೆ ಚೆನ್ನಾಗಿರುತ್ತದೆ:** ಕರಿಮೆಣಸು ಹೊಟ್ಟೆಯಲ್ಲಿ ಕಿಣ್ವಗಳ ಸ್ರವಿಸುವಿಕೆಯನ್ನು ಹೆಚ್ಚಿಸುವ ಮೂಲಕ ಜೀರ್ಣಕ್ರಿಯೆಯನ್ನು ವೇಗಗೊಳಿಸುತ್ತದೆ, ಜೇನುತುಪ್ಪವು ಕರುಳನ್ನು ಸ್ವಚ್ಛಗೊಳಿಸಲು ಸಹಾಯ ಮಾಡುತ್ತದೆ. ಅನಿಲ, ಅಜೀರ್ಣ, ಮಲಬದ್ಧತೆ ಅಥವಾ ಆಮ್ಲೀಯತೆಯಿಂದ ಬಳಲುತ್ತಿರುವವರಿಗೆ ಇದರ ಸೇವನೆ ಒಳ್ಳೆಯದು. ಇದು ಹೊಟ್ಟೆಯನ್ನು ಹಗುರವಾಗಿರಿಸುತ್ತದೆ ಮತ್ತು ಹಸಿವನ್ನು ನಿಯಂತ್ರಿಸುತ್ತದೆ.



**ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ**

**ಕರಿಮೆಣಸು ಚಯಾಪಚಯ ಕ್ರಿಯೆಯನ್ನು ವೇಗಗೊಳಿಸುತ್ತದೆ ಮತ್ತು ಕೊಬ್ಬನ್ನು ಕರಗಿಸಲು ಸಹಾಯ ಮಾಡುತ್ತದೆ. ಜೇನುತುಪ್ಪವು ನೈಸರ್ಗಿಕ ಸಕ್ಕರೆಯನ್ನು ಹೊಂದಿದ್ದು ಇದು ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಪ್ರತಿದಿನ ಬೆಳಿಗ್ಗೆ ಇದನ್ನು ಸೇವಿಸುವುದರಿಂದ ದೇಹದಲ್ಲಿ ಸಂಗ್ರಹವಾದ ಕೊಬ್ಬನ್ನು ಕ್ರಮೇಣ ಕಡಿಮೆ ಮಾಡುತ್ತದೆ. ಇದು ಹೊಟ್ಟೆಯ ಕೊಬ್ಬನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗಿದೆ.**



**ಕೀಲು ನೋವು ಮತ್ತು ಊತದಲ್ಲಿ ಪರಿಹಾರ**

ಕರಿಮೆಣಸು ಉರಿಯೂತ ಮತ್ತು ನೋವನ್ನು ಕಡಿಮೆ ಮಾಡುವ ಉರಿಯೂತದ ಗುಣಗಳನ್ನು ಹೊಂದಿದೆ. ಜೇನುತುಪ್ಪದೊಂದಿಗೆ ಇದನ್ನು ಸೇವಿಸುವುದರಿಂದ ಸಂಧಿವಾತ, ಕೀಲು ಬಿಗಿತ ಮತ್ತು ನೋವಿನಿಂದ ಪರಿಹಾರ ಸಿಗುತ್ತದೆ. ಇದು ದೇಹಕ್ಕೆ ಒಳಗಿನಿಂದ ಉಷ್ಣತೆಯನ್ನು ನೀಡುತ್ತದೆ, ಇದು ನೋವನ್ನು ನಿವಾರಿಸಲೂ ಸಹಾಯ ಮಾಡುತ್ತದೆ.

**ಹೇಗೆ ಸೇವಿಸುವುದು?:** ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ 1 ಟೀಚಮಚ ಜೇನುತುಪ್ಪದಲ್ಲಿ ಒಂದು ಚಿಟಿಕೆ ಫ್ರೆಶ್ ಕರಿಮೆಣಸಿನ ಪುಡಿಯನ್ನು ಮಿಕ್ಸ್ ಮಾಡಿ. ನೀರಿಲ್ಲದೆ ನಿಧಾನವಾಗಿ ನೆಕ್ಕಿರಿ. ನಿಯಮಿತವಾಗಿ ಸೇವಿಸುವುದರಿಂದ, ನೀವು 1–2 ವಾರಗಳಲ್ಲಿ ವ್ಯತ್ಯಾಸವನ್ನು ಕಾಣಲಾರಂಭಿಸುತ್ತೀರಿ.

# ಇರಾನ್‌ನ 6 ವಾಯುನೆಲೆ ಮೇಲೆ ಇಸ್ರೇಲ್ ದಾಳಿ

## 15 ಯುದ್ಧ ವಿಮಾನಗಳ ಆಕಂದ್ರನ ನುಂಗಿದ ಪ್ರಕ್ಷುಬ್ಧ ಗಾಳಿ, ಮಧ್ಯಪ್ರಾಚ್ಯದ ಸಮಸ್ಯೆಗಳು ಮತ್ತಷ್ಟು ಜಟಿಲ

**ತೆಹ್ರಾನ್:** ಇರಾನ್ ಮೇಲಿನ ಅಮೆರಿಕದ ವೈಮಾನಿಕ ದಾಳಿಯಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಇಸ್ರೇಲ್, ಇರಾನ್‌ನ ಪ್ರಮುಖ ಮಿಲಿಟರಿ ನೆಲೆಗಳ ಮೇಲಿನ ತನ್ನ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಇರಾನ್‌ನ 6 ಪ್ರಮುಖ ವಾಯುನೆಲೆಗಳನ್ನು ಗುರಿಯಾಸಿಕೊಂಡು ಇಸ್ರೇಲ್ ದಾಳಿ ನಡೆಸಿದ್ದು, 15ಕ್ಕೂ ಹೆಚ್ಚು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ.

ಈ ಕುರಿತ ವಿಡಿಯೋ ಸಾಕ್ಷಿಗಳನ್ನು ಬಿಡುಗಡೆ ಮಾಡಿರುವ ಇಸ್ರೇಲ್, ವೈಮಾನಿಕ ದಾಳಿಯಲ್ಲಿ ಇರಾನ್‌ನ 6 ಪ್ರಮುಖ ವಾಯು ನೆಲೆಗಳಿಗೆ ಭಾರೀ ಹಾನಿಯುಂಟಾಗಿದೆ ಎಂದು ಪ್ರತಿಪಾದಿಸಿದೆ. ಇಸ್ರೇಲ್ ಬಿಡುಗಡೆ ಮಾಡಿರುವ ವಿಡಿಯೋದಲ್ಲಿ, ವಾಯುನೆಲೆ ಬಳಿ ನಿಲ್ಲಿಸಿದ್ದ 15 ಫೈಟರ್ ಜೆಟ್‌ಗಳ ಮೇಲೆ ಬಾಂಬ್ ಬೀಳುತ್ತಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ವಾಯುನೆಲೆಯಲ್ಲಿ ಇರಿಸಲಾಗಿದ್ದ 15 ಈ–14 ಯುದ್ಧ ವಿಮಾನಗಳು ಸಂಪೂರ್ಣವಾಗಿ ನಾಶವಾಗಿದ್ದು, ಕ್ಷಿಪಣಿ ಸಂಗ್ರಹಾರ ಕೂಡ ನಾಶವಾಗಿದೆ ಎಂದು ಮೂಲಗಳು ಖಚಿತಪಡಿಸಿವೆ. ಪಶ್ಚಿಮ ಇರಾನ್‌ನ ಕೆರ್ಮನ್‌ಶಾ ಪ್ರದೇಶದ ಮೇಲೆ ನಡೆಸಿದ ವೈಮಾನಿಕ ದಾಳಿಯಲ್ಲಿ, ಇಸ್ರೇಲಿ ಪ್ರದೇಶದ ಕಡೆಗೆ ಗುರಿಯಿಟ್ಟಿದ್ದ ಹಲವಾರು ಮೇಲ್ಮೈಗೆ ಚಿಮ್ಮುವ ಕ್ಷಿಪಣಿ ಉಡಾವಣಾ ತಾಣಗಳನ್ನು ನಾಶಮಾಡಲಾಗಿದೆ. ಇದೇ ವೇಳೆ ಇರಾನ್‌ನ 15ಕ್ಕೂ ಹೆಚ್ಚು ಈ–14 ಯುದ್ಧ ವಿಮಾನಗಳು ಸಂಪೂರ್ಣವಾಗಿ ನಾಶವಾಗಿವೆ ಎಂದು ಇಸ್ರೇಲ್ ರಕ್ಷಣಾ ಪಡೆ ಮಾಹಿತಿ ನೀಡಿದೆ.



**ಕ್ಷಿಪಣಿ ಸಂಗ್ರಹಾರ ಕೂಡ ನಾಶ**


**ಹಾರಾಟ ನಡೆಸುವ ಸಾಮರ್ಥ್ಯ**

**ಇಸ್ರೇಲ್ ವೈಮಾನಿಕ ದಾಳಿ ಇರಾನ್‌ನ ವಾಯುಸೇನೆಗೆ ಬಲವಾದ ಪೆಟ್ಟು ನೀಡಿದ ಎಂದು ಹೇಳಲಾಗಿದ್ದು, ವಾಯುನೆಲೆಯಲ್ಲಿದ್ದ ಮಿಲಿಟರಿ ಸಿಬ್ಬಂದಿಗೆ ಪ್ರತಿಕ್ರಿಯೆ ನೀಡಲೂ ಸಮಯ ದೊರತಿಲ್ಲ ಎಂಬುದು ಹಾನಿಯನ್ನು ನೋಡಿದರೆ ಸ್ಪಷ್ಟವಾಗುತ್ತದೆ ಎಂದು ಮಿಲಿಟರಿ ತಜ್ಞರು ಅಂದಾಜಿಸಿದ್ದಾರೆ. ಇರಾನ್ ಇನ್ನು ಮುಂದೆ ಈ ವಿಮಾನ ನಿಲ್ದಾಣಗಳಿಂದ ಹಾರಾಟ ನಡೆಸುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದು, ಇರಾನ್ ವಾಯುಸೇನೆಯ ಕಾರ್ಯಾಚರಣೆಗಳಿಗೆ ಭಾರೀ ಪೆಟ್ಟು ಬಿದ್ದಿದೆ ಎಂದು ಇಸ್ರೇಲ್ ವಾಯುಪಡೆ ಕೂಡ ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಮಾಹಿತಿ ನೀಡಿದೆ.**

ಇಸ್ರೇಲ್ ರಾಜ್ಯವನ್ನು ರಕ್ಷಿಸುವ ಸಲುವಾಗಿ ಇರಾನ್ ಆಡಳಿತದ ಮಿಲಿಟರಿ ಸಾಮರ್ಥ್ಯಗಳನ್ನು ಕುಗ್ಗಿಸಲು, ಇರಾನ್‌ನ ವಾಯುಪ್ರದೇಶದ ಮೇಲೆ ವೈಮಾನಿಕ ಶ್ರೇಷ್ಠತೆಯನ್ನು ಸಾಧಿಸಲು, ಪ್ರಯತ್ನಗಳನ್ನು ಮುಂದುವರೆಸಿದ್ದೇವೆ. ಎಂದು ಐಡಿಎಫ್ ತನ್ನ ಟೆಲಿಗ್ರಾಮ್ ಹೇಳಿಕೆಯಲ್ಲಿ ತಿಳಿಸಿವೆ. ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಐಡಿಎಫ್, ರನ್‌ವೇಗಳು, ಭೂಗತ ಬಂಕರ್‌ಗಳು, ಇಂಧನ ತುಂಬುವ ವಿಮಾನ ಮತ್ತು ಇರಾನ್‌ನ ವಾಯುಸೇನೆಗೆ ಸೇರಿದ 15 ಎಫ್ –14, ಎಫ್–5, ಎಹೆಚ್ –1 ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಸ್ಪಷ್ಟಪಡಿಸಿದೆ. ಇರಾನ್‌ನ ಮೂರು ಪರಮಾಣು ಸ್ಥಾವರಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ದಾಳಿ ನಡೆಸಿರುವ ಬೆನ್ನಲ್ಲೇ, ಇಸ್ರೇಲ್ ಕೂಡ ಇರಾನ್‌ನ 6 ಪ್ರಮುಖ ವಾಯುನೆಲೆಗಳನ್ನು ಧ್ವಂಸಗೊಳಿಸಿರುವುದು ಮಧ್ಯಪ್ರಾಚ್ಯದ ಸಂಘರ್ಷದ ತೀವ್ರತೆಯನ್ನು ಸಾರಿ ಹೇಳುತ್ತಿದೆ. ಒಟ್ಟಿನಲ್ಲಿ ಈ ಸಂಘರ್ಷ ಆದಷ್ಟು ಬೇಗ ಕೊನೆಯಾಗಬೇಕಿದೆ.

# ಮೂವರು ಶಾಸಕರನ್ನು ಉಚ್ಚಾಟಿಸಿದ ಸಮಾಜವಾದಿ ಪಕ್ಷ

**ಲಕ್ನೌ:** ಪಕ್ಷದ ಮೂಲ ಮೌಲ್ಯಗಳಿಗೆ ವಿರುದ್ಧವಾದ ಸಿದ್ಧಾಂತಗಳನ್ನು ಬೆಂಬಲಿಸುತ್ತಿದ್ದಾರೆ, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪದ ಮೇಲೆ ಸಮಾಜವಾದಿ ಪಕ್ಷವು ಸೋಮವಾರ ತನ್ನ ಮೂವರು ಶಾಸಕರನ್ನು ಪಕ್ಷದಿಂದ ಹೊರಹಾಕಿದೆ. ಅಭಯ್ ಸಿಂಗ್, ರಾಕೇಶ್ ಪ್ರತಾಪ್‌ಸಿಂಗ್, ಮನೋಜ್ ಕುಮಾರ್ ಪಾಂಡೆ ಅವರನ್ನು ಪಕ್ಷದಿಂದ ಹೊರಹಾಕಲಾಗಿದೆ ಎಂದು ಎಸ್‌ಪಿ ತನ್ನ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಂಡ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಸಮಾಜವಾದಿ ಪಕ್ಷದ ಒಳಗೊಳ್ಳುವಿಕೆ ಮತ್ತು ಪ್ರಗತಿಪರ ತತ್ವಗಳಿಗೆ ವಿರುದ್ಧವಾದ ಕೋಮುವಾದಿ, ವಿಭಜಕ ಮತ್ತು ನಕಾರಾತ್ಮಕ ಸಿದ್ಧಾಂತಗಳನ್ನು ಅನುಮೋದಿಸಿದ್ದಕ್ಕಾಗಿ ಶಾಸಕರನ್ನು ತೆಗೆದುಹಾಕಲಾಗಿದೆ ಎಂದು ಪಕ್ಷ ಹೇಳಿದೆ. ಉಚ್ಚಾಟಿತ ನಾಯಕರು ರೈತ ವಿರೋಧಿ, ಮಹಿಳಾ ವಿರೋಧಿ, ಯುವ ವಿರೋಧಿ, ವ್ಯವಹಾರ ವಿರೋಧಿ, ಉದ್ಯೋಗ ವಿರೋಧಿ ಮತ್ತು ಅಂಚಿನಲ್ಲಿರುವವರ ಹಕ್ಕುಗಳಿಗೆ ವಿರುದ್ಧವಾದ ಈ ನಾಯಕರಿಗೆ ಸ್ವಯಂ ತಿದ್ದುಪಡಿಗಾಗಿ ಗ್ರೇಸ್ ಅವಧಿ ನೀಡಲಾಗಿತ್ತು, ಆದರೆ ಆ ಸಮಯ ಈಗ ಮುಗಿದಿದೆ ಎಂದು ಎಸ್‌ಪಿ ಹೇಳಿದೆ. ಶಕ್ತಿಗಳನ್ನು ಬೆಂಬಲಿಸುತ್ತಿದ್ದಾರೆ ಎಂದು ಪಕ್ಷ ಆರೋಪಿಸಿದೆ. ಸಾರ್ವಜನಿಕ ಕಲ್ಯಾಣ, ಅದರ ಮೂಲ ಸೈದ್ಧಾಂತಿಕ ಚೌಕಟ್ಟಿಗೆ ವಿರುದ್ಧವಾಗಿ ವರ್ತಿಸುವ ವ್ಯಕ್ತಿಗಳಿಗೆ ಪಕ್ಷದಲ್ಲಿ ಯಾವುದೇ ಅವಕಾಶವಿಲ್ಲ ಎಂದು ಅದು ಹೇಳಿದೆ. ಭವಿಷ್ಯದಲ್ಲಿ ಜನವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರು, ಪಕ್ಷದ ಮೂಲಭೂತ ಮೌಲ್ಯಗಳನ್ನು ವಿರೋಧಿಸುವವರು ಶಾಶ್ವತವಾಗಿ ಹೊರಹಾಕಲ್ಪಡುತ್ತಾರೆ ಎಂಬ ಎಚ್ಚರಿಕೆಯೊಂದಿಗೆ ಹೇಳಿಕೆ ಮುಕ್ತಾಯಗೊಂಡಿದೆ. ನೀವು ಎಲ್ಲಿದ್ದರೂ ವಿಶ್ವಾಸಾರ್ಹರಾಗಿರಿ. ಶುಭಾಶಯಗಳು ಎಂದು ಕೊನೆಯ ಟಿಪ್ಪಣಿಯಲ್ಲಿ ತಿಳಿಸಲಾಗಿದೆ.



ಟ್ರಂಪ್‌ಗೆ ನೊಬೆಲ್ ಕೊಡಿಸಲು ಬೆಲ್ ಒತ್ತಿದ 24 ಗಂಟೆಯೊಳಗೆ ಇರಾನ್ ಮೇಲಿನ ದಾಳಿ ಖಂಡಿಸಿದ ಪಾಕಿಸ್ತಾನ

# ಟ್ರೋಲಿಗರ ಬಾಯಿಗೆ ಆಹಾರವಾದ ಪಾಕಿಸ್ತಾನದ ದ್ವಿಮುಖ ನೀತಿ

**ಇಸ್ಲಾಮಾಬಾದ್:** ಭಾರತ–ಪಾಕಿಸ್ತಾನ ನಡುವೆ ಕದನ ವಿರಾಮ ಒಪ್ಪಂದ ಜಾರಿಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕು ಎಂದು ಪಾಕಿಸ್ತಾನ ಆಗ್ರಹಿಸಿತ್ತು. ಈ ಅಧಿಕೃತ ಹೇಳಿಕೆಯ 24 ಗಂಟೆಯೊಳಗೆ, ಇರಾನ್ ಮಿಲಿಟರಿ ನೆಲೆಗಳ ಮೇಲೆ ಅಮೆರಿಕ ನಡೆಸಿದ ವೈಮಾನಿಕ ದಾಳಿಯನ್ನು ಪಾಕಿಸ್ತಾನ ಖಂಡಿಸಿದೆ. ಪಾಕಿಸ್ತಾನದ ಈ ದ್ವಿಮುಖ ನೀತಿ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಟ್ರೋಲ್‌ಗೆ ಗುರಿಯಾಗಿದೆ. ಹೌದು, ನೊಬೆಲ್ ಶಾಂತಿ ಪ್ರಶಸ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು ಸೂಚಿಸಿ, ಪಾಕಿಸ್ತಾನ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿದೆ. ಆದರೆ ಇದಾದ 24 ಗಂಟೆಯೊಳಗೆ ಅಮೆರಿಕದ ಅತ್ಯಾಧುನಿಕ ಯುದ್ಧ ವಿಮಾನಗಳು ಇರಾನ್‌ನ ಪರಮಾಣು ಸ್ಥಾವರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಪಾಕಿಸ್ತಾನ ಈ ದಾಳಿಯನ್ನು ಖಂಡಿಸಿದ್ದು, ಮಧ್ಯಪ್ರಾಚ್ಯದ ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುವ ಪ್ರಯತ್ನ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ಪಾಕಿಸ್ತಾನದ ಈ ದ್ವಿಮುಖ ನೀತಿ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಚರ್ಚೆಯಾಗುತ್ತಿದೆ. ಪಾಕಿಸ್ತಾನ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂದು ನೆಟ್ಟಿಗರು ಟ್ರೋಲ್ ಮಾಡುತ್ತಿದ್ದಾರೆ.

**ಇರಾನ್ ಮೇಲೆ ಅಮೆರಿಕ ದಾಳಿ:** ಆದರೆ ಇಸ್ರೇಲ್ ಮತ್ತು ಇರಾನ್ ಸಂಘರ್ಷದಲ್ಲಿ ನೇರವಾಗಿ ಧುಮುಕಿದ ಅಮೆರಿಕ, ಇರಾನ್‌ನ ಮೂರು ಪ್ರಮುಖ ಪರಮಾಣು ನೆಲೆಗಳನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಿತು. ಈ ದಾಳಿಯನ್ನು ಕೊಂಡಾಡಿರುವ ಡೊನಾಲ್ಡ್ ಟ್ರಂಪ್, ಇರಾನ್‌ನಲ್ಲಿ ಆಡಳಿತ ಬದಲಾವಣೆಗಾಗಿ ಎಂಐಜಿಎ ಯೋಜನೆಯನ್ನು ಮುಂದಿಟ್ಟಿದ್ದಾರೆ.



**ಟ್ರೋಲ್‌ಗೆ ಗುರಿಯಾದ ಪಾಕಿಸ್ತಾನ:** ಡೊನಾಲ್ಡ್ ಟ್ರಂಪ್ ಅವರಿಗೆ ನೊಬೆಲ್ ಪ್ರಶಸ್ತಿಗಾಗಿ ಬ್ಯಾಟ್ ಬೀಸಿದ್ದ ಪಾಕಿಸ್ತಾನ, ಇರಾನ್ ಮೇಲಿನ ಅಮೆರಿಕದ ವೈಮಾನಿಕ ದಾಳಿಯನ್ನು ತೀವ್ರವಾಗಿ ಖಂಡಿಸಿದೆ. ಇದು ಟ್ರೋಲಿಗರಿಗೆ ಆಹಾರವಾಗಿದ್ದು, ಪಾಕಿಸ್ತಾನದ ದ್ವಿಮುಖ ನೀತಿಗೆ ಕುಹುಕವಾಡಿದ್ದಾರೆ.

ಓರ್ವ ಸಾಮಾಜಿಕ ಜಾಲತಾಣ ಬಳಕೆದಾರ ಡೊನಾಲ್ಡ್ ಟ್ರಂಪ್‌ಗೆ ನೊಬೆಲ್ ಕೇಳಿದ್ದ ಪಾಕಿಸ್ತಾನ 24 ಗಂಟೆಯೊಳಗೆ ಇರಾನ್ ಮೇಲಿನ ಅಮೆರಿಕ ದಾಳಿಯನ್ನು ಖಂಡಿಸಿದೆ. ಇದು ಮದುವೆ ಮಾಡಿಕೊಂಡ ಜೋಡಿ, ಭಾನುವಾರ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಂತಿದೆ ಎಂದು ವ್ಯಂಗ್ಯವಾಡಿದ್ದಾನೆ. ಪಾಕಿಸ್ತಾನ ಈಗ ಏಕಕಾಲದಲ್ಲಿ ಅಮೆರಿಕವನ್ನು ಮೆಚ್ಚಿಸುವ, ಇರಾನ್‌ನನ್ನು ಬೆಂಬಲಿಸುವ ಒತ್ತಡದಲ್ಲಿ ಸಿಲುಕಿರುವುದು ಸ್ಪಷ್ಟ. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ವಿಚಾರದಲ್ಲಿ ಡೊನಾಲ್ಡ್ ಟ್ರಂಪ್ ತುಸು ತನ್ನ ಕಡೆ ವಾಲುತ್ತಿರುವುದನ್ನು ಗಮನಿಸಿದ ಪಾಕಿಸ್ತಾನ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಮನವಿ ಮಾಡಿದೆ. ಆದರೆ ಇರಾನ್ ಮೇಲಿನ ಅಮೆರಿಕ ದಾಳಿಯನ್ನು ಖಂಡಿಸಿರುವ ಪಾಕಿಸ್ತಾನ ತನ್ನ ಅನಿವಾರ್ಯತೆಯನ್ನು ಜಗತ್ತಿನ ಮುಂದೆ ಅನಾವರಣ ಮಾಡಿದೆ.

### ಪಾಕಿಸ್ತಾನ ಏನು ಹೇಳಿತ್ತು?

**ಇತ್ತೀಚೆಗೆ ಅಮೆರಿಕದ ಅಧ್ಯಕ್ಷರ ಆಹ್ವಾನದ ಮೇರೆಗೆ ರಾಜಧಾನಿ ವಾಷಿಂಗ್ಟನ್ ಡಿಸಿಗೆ ಭೇಟಿ ನೀಡಿದ್ದ ಪಾಕಿಸ್ತಾನ ಸೇನಾಧ್ಯಕ್ಷ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್, ಭಾರತ, ಪಾಕಿಸ್ತಾನ ನಡುವೆ ಕದನ ವಿರಾಮ ಒಪ್ಪಂದ ಜಾರಿಗೊಳಿಸುವಲ್ಲಿ ಡೊನಾಲ್ಡ್ ಟ್ರಂಪ್ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ಹೀಗಾಗಿ ಅವರಿಗೆ ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕು ಎಂದು ಆಗ್ರಹಿಸಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನ ಸರ್ಕಾರ, ನೊಬೆಲ್ ಶಾಂತಿ ಪ್ರಶಸ್ತಿಗೆ ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು ಅಧಿಕೃತವಾಗಿ ಸೂಚಿಸಿತ್ತು.**

# ಬಿಜೆಪಿ ನೂತನ ರಾಷ್ಟ್ರಾಧ್ಯಕ್ಷರ ಘೋಷಣೆಗೆ ಮಹೂರ್ತ ನಿಗದಿ

**ಹೊಸದಿಲ್ಲಿ:** ಇವತ್ತು ನಾಳೆ ಅಂದುಕೊಂಡು ಬಹಳ ದಿನಗಳಿಂದ ಅಂತಿಮವಾಗದ ಬಿಜೆಪಿ ರಾಷ್ಟ್ರಾಧ್ಯಕ್ಷರ ಹೆಸರು ಘೋಷಣೆಗೆ ಬಹುತೇಕ ದಿನಾಂಕ ನಿಗದಿಯಾದಂತಿದೆ. ಪಕ್ಷದ ಮೂಲಗಳ ಪ್ರಕಾರ, ಎಲ್ಲಾ ಅಂದುಕೊಂಡಂತೆ ನಡೆದರೆ, ಜುಲೈ 7ನೇ ತಾರೀಕಿನೊಳಗೆ ಹೆಸರು ಘೋಷಣೆಯಾಗಲಿದೆ ಎನ್ನುವ ಮಾಹಿತಿಯಿದೆ.

ಹಾಲೀ ಅಧ್ಯಕ್ಷರಾಗಿರುವ ಜೆಪಿ ನಡ್ಡಾ ಅವರು ಕೇಂದ್ರದಲ್ಲಿ ಆರೋಗ್ಯ ಇಲಾಖೆಯನ್ನೂ ನಿಭಾಯಿಸುತ್ತಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರ ಹೆಸರು ಘೋಷಣೆಗೆ ಮುನ್ನ, ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರೀಯ ಪ್ರಾಂತ್ ಪ್ರಚಾರಕ್ ಸಭೆ ಜುಲೈ 4 ರಿಂದ 6ನೇ ತಾರೀಕಿನವರೆಗೆ ದೆಹಲಿಯ ಕೇಶವ್ ಕುಂಜ್ ನಲ್ಲಿ ನಡೆಯಲಿದೆ. ಇದಾದ ನಂತರ, ಅಧ್ಯಕ್ಷರ ಹೆಸರು ಘೋಷಣೆಯಾಗಬಹುದು.

ಪಕ್ಷದ ಸಿದ್ದಾಂತದ ಪ್ರಕಾರ, ಅಧ್ಯಕ್ಷರ ಹೆಸರು ಘೋಷಣೆಗೆ ಬಿಜೆಪಿ ಎಲ್ಲಾ ಪೂರ್ವಸಿದ್ದತೆಯನ್ನು ಮಾಡಿಕೊಳ್ಳುತ್ತಿದೆ. ಕೆಲವು ರಾಜ್ಯಗಳಲ್ಲಿ ರಾಜ್ಯಾಧ್ಯಕ್ಷರ ಹೆಸರು ಇನ್ನೂ ಘೋಷಣೆಯಾಗಬೇಕಿದೆ. ಆ ಪ್ರಕ್ರಿಯೆ ಸದ್ಯದಲ್ಲೇ ಪೂರ್ಣಗೊಳ್ಳಲಿದೆ. ಅರ್ಧಕ್ಕಿಂತ ಹೆಚ್ಚು ರಾಜ್ಯಾಧ್ಯಕ್ಷರ ನೇಮಕವಾಗದೇ, ರಾಷ್ಟ್ರಾಧ್ಯಕ್ಷರ ಹೆಸರನ್ನು ಅಂತಿಮಗೊಳಿಸುವ ನಿಯಮ ಬಿಜೆಪಿಯಲ್ಲಿಲ್ಲ.

ಹೊಸ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಯನ್ನು ಇನ್ನೂ ಹೆಚ್ಚುದಿನ ಮುಂದಕ್ಕೆ ಹಾಕುವುದಿಲ್ಲ. ಬಹುತೇಕ ರಾಜ್ಯಗಳಲ್ಲಿ ಈಗಾಗಲೇ ಸಾಂಸ್ಥಿಕ ಚುನಾವಣೆ ಮುಕ್ತಾಯಗೊಂಡಿದೆ. ಕೆಲವು ರಾಜ್ಯಗಳಲ್ಲಿ ಬಾಕಿಯಿದ್ದು, ಅದನ್ನೂ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಬಿಜೆಪಿಯ ನಾಯಕರೊಬ್ಬರು ಹೇಳಿದ್ದಾರೆ.



ಇದುವರೆಗೆ ಐದು ಮುಖಂಡರ ಹೆಸರು ಕೇಳಿ ಬರುತ್ತಿತ್ತು, ಇದಕ್ಕೆ ಇನ್ನೂ ಮೂವರ ಹೆಸರು ಸೇರ್ಪಡೆಯಾಗಿದೆ. ಅದರಲ್ಲಿ ಒಬ್ಬರು ಕರ್ನಾಟಕದವರು ಎನ್ನುವುದು ಗಮನಿಸಬೇಕಾದ ವಿಚಾರ. ಆದರೂ, ಈಗಿರುವ ಸಂಭಾವ್ಯ 8 ಮುಖಂಡರನ್ನು ಹೊರತಾಗಿ, ಬಿಜೆಪಿ ಅಚ್ಚರಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿಲ್ಲ.

ಎಂಟು ಕೇಂದ್ರ ಸಚಿವರು ಮತ್ತು ಇತರ ಮೂವರ ನಾಯಕರು ಕೇಳಿ ಬರುತ್ತಿದ್ದರೂ, ಅದರಲ್ಲಿ ಎಂಟು ಮುಖಂಡರು ಮಾತ್ರ ರೇಸಿನಲ್ಲಿ ಇದ್ದಾರೆ ಎಂದು ಹೇಳಲಾಗುತ್ತಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹೆಸರೂ, ಸದ್ಯ ಕೇಳಿಬರುತ್ತಿರುವ ಸಂಭಾವ್ಯರ ಹೆಸರಿನಲ್ಲಿದೆ. ಬಿಜೆಪಿಯ ದೆಹಲಿ ನಾಯಕರು ಮತ್ತು ಸಂಘ ಪರಿವಾರದ ಜೊತೆಗೆ, ಜೋಶಿ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಕಳೆದ ದೆಹಲಿ ವಿಧಾನಸಭಾ ಚುನಾವಣೆಯ ವೇಳೆ ಹಲವು ಹೆಸರು ಕೇಳಿ ಬರುತ್ತಿತ್ತು. ಆದರೆ, ಬಿಜೆಪಿ ವರಿಷ್ಠರು ಅಚ್ಚರಿಯಾಗಿ ರೇಖಾ ಗುಪ್ತಾ ಅವರನ್ನು ಮುಖ್ಯಮಂತ್ರಿಯಾಗಿ ಘೋಷಣೆ ಮಾಡಿತ್ತು. ಅದೇ ರೀತಿ, ರಾಷ್ಟ್ರಾಧ್ಯಕ್ಷ ಹುದ್ದೆಗೂ ಮಹಿಳೆಯ ಹೆಸರನ್ನು ಫೈನಲ್ ಮಾಡಿದರೂ ಮಾಡಬಹುದು. ಹಾಗಾಗಿ, ಇಬ್ಬರು ಮಹಿಳೆಯರ ಹೆಸರು ಕೇಳಿ ಬರುತ್ತಿದೆ. ಒಟ್ಟಾರೆಯಾಗಿ ಹನ್ನೊಂದು ಸಂಭಾವ್ಯರ ಹೆಸರು ಈ ರೀತಿಯಿದ್ದು, ಅದರಲ್ಲಿ ಮೊದಲ ಎಂಟು ನಾಯಕರು ಪ್ರಮುಖವಾಗಿ ರೇಸಿನಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ.

- ಧರ್ಮೇಂದ್ರ ಪ್ರಧಾನ್ – ಕೇಂದ್ರ ಸಚಿವರು
- ಮನೋಹರ್ ಲಾಲ್ ಖಟ್ಟರ್ – ಕೇಂದ್ರ ಸಚಿವರು
- ಶಿವರಾಜ್ ಸಿಂಗ್ ಚೌಹಾಣ್ – ಕೇಂದ್ರ ಸಚಿವರು
- ಅರ್ಜುನ್ ರಾಮ್ ಮೇಘವಾಲ್ – ಕೇಂದ್ರ ಸಚಿವರು
- ಪ್ರಲ್ಹಾದ್ ಜೋಶಿ – ಕೇಂದ್ರ ಸಚಿವರು
- ನಿತಿನ್ ಜಯರಾಮ್ ಗಡ್ಕರಿ – ಕೇಂದ್ರ ಸಚಿವರು
- ಭೂಪೇಂದ್ರ ಯಾದವ್ – ಕೇಂದ್ರ ಸಚಿವರು
- ಜಿ. ಕಿಶನ್ ರೆಡ್ಡಿ – ಕೇಂದ್ರ ಸಚಿವರು
- ದಗ್ಗುಬಾಟಿ ಪುರಂದರೇಶ್ವರಿ – ಆಂಧ್ರ ಪ್ರದೇಶ ಬಿಜೆಪಿ ಮುಖ್ಯಸ್ಥೆ
- ವನತಿ ಶ್ರೀನಿವಾಸನ್ – ಬಿಜೆಪಿ ಮಹಿಳಾ ಮೋರ್ಚಾ
- ಕೇಶವ ಪ್ರಸಾದ್ ಮೌರ್ಯ– ಡಿಸಿಎಂ, ಉತ್ತರ ಪ್ರದೇಶ

# ಇಂಡಿಗೊ ವಿಮಾನಯಾನ ಸಂಸ್ಥೆಯ ಅಧಿಕಾರಿಗಳ ವಿರುದ್ಧ ಜಾತಿ ನಿಂದನೆ ಆರೋಪ

**ಗುರುಗ್ರಾಮ:** ಇಂಡಿಗೊ ವಿಮಾನಯಾನ ಸಂಸ್ಥೆಯ ಮೂವರು ಹಿರಿಯ ಅಧಿಕಾರಿಗಳು ನನಗೆ ಜಾತಿ ನಿಂದನೆ ಮಾಡಿದ್ದಾರೆ ಎಂದು ಉದ್ಯೋಗಿಯೊಬ್ಬರು ಆರೋಪಿಸಿದ್ದಾರೆ. ಬೆಂಗಳೂರಿನ 35 ವರ್ಷದ ಶರಣ್ ಎಂಬುವರು ನೀಡಿದ ದೂರಿನ ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.ಗುರುಗ್ರಾಮದಲ್ಲಿ ಘಟನೆ ನಡೆದ ಕಾರಣ ಬೆಂಗಳೂರು ಪೊಲೀಸರು ಪ್ರಕರಣವನ್ನು ಗುರುಗ್ರಾಮ ಪೊಲೀಸರಿಗೆ ವರ್ಗಾಯಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಗುರುಗ್ರಾಮದ ಡಿಎಲ್‌ಎಫ್ ಹಂತ–1 ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ರಾಜೇಶ್ ಕುಮಾರ್ ತಿಳಿಸಿದ್ದಾರೆ. ಶರಣ್ ಆರೋಪಗಳನ್ನು ಆಧಾರರಹಿತ ಎಂದಿರುವ ಇಂಡಿಗೊ ವಕ್ತಾರರು, ಯಾವುದೇ ರೀತಿಯ ಕಿರುಕುಳದ ಬಗ್ಗೆ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ನಾನು ಪರಿಶಿಷ್ಟ ಜಾತಿಯ ಆದಿ ದ್ರಾವಿಡ ಸಮುದಾಯಕ್ಕೆ ಸೇರಿದವನಾಗಿದ್ದು, ಇಂಡಿಗೊ ಕಂಪನಿಯಲ್ಲಿ ಕೆಲಸ ಮಾಡುವ ವೇಳೆ ಹಲವು ಜಾತಿ ಆಧಾರಿತ ಟೀಕೆಗಳಿಗೆ ಗುರಿಯಾಗಿದ್ದೇನೆ ಎಂದು ಶರಣ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಏ. 28ರಂದು ನಡೆದ ಸಭೆಯಲ್ಲಿ ಅಧಿಕಾರಿಗಳಾದ ತಪಸ್ ಡೇ, ಮನೀಶ್ ಸಾಕ್ಷಿ, ಕ್ಯಾಪ್ಟನ್ ರಾಹುಲ್ ಪಾಟೀಲ್ ಅವರು ಎಲ್ಲರ ಮುಂದೆ ನನ್ನ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುವ ಮೂಲಕ ಜಾತಿ ನಿಂದನೆ, ತಾರತಮ್ಯ ಮತ್ತು ಬೆದರಿಕೆ ಹಾಕಿದ್ದಾರೆ ಎಂದೂ ಶರಣ್ ದೂರಿದ್ದಾರೆ.

# ಜಮ್ಮುವಿನಲ್ಲಿ ಲ್ಯಾಂಡ್ ಆಗದೆ ಏರ್ ಇಂಡಿಯಾ ವಿಮಾನ ದೆಹಲಿಗೆ ವಾಪಸ್

**ಜಮ್ಮು:** ದೆಹಲಿಯಿಂದ ಜಮ್ಮು ಮೂಲಕ ಶ್ರೀನಗರಕ್ಕೆ ತೆರಳಬೇಕಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಮಧ್ಯಾಹ್ನ ಇಲ್ಲಿ ಲ್ಯಾಂಡ್ ಆಗದೆ ದೆಹಲಿ ವಿಮಾನ ನಿಲ್ದಾಣಕ್ಕೆ ಮರಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಲ್ಯಾಂಡ್ ಆಗದೆ ದೆಹಲಿಗೆ ಹಿಂದಿರುಗಲು ಕಾರಣವೇನೆಂದು ತಕ್ಷಣಕ್ಕೆ ತಿಳಿದುಬಂದಿಲ್ಲ ಎಂದು ಅವರು ಹೇಳಿದ್ದಾರೆ. ಐಎಕ್ಸ್–2564 ವಿಮಾನವು ಶ್ರೀನಗರಕ್ಕೆ ಹೊರಟಿತ್ತು. ಮಧ್ಯಾಹ್ನದ ಸುಮಾರಿಗೆ ಜಮ್ಮುವಿನಲ್ಲಿ ನಿಲುಗಡೆ ಇತ್ತು. ಆದರೆ, ಅದು ದೆಹಲಿಗೆ ಹಿಂದಿರುಗಿದೆ. ಹಿಂದಿರುಗುವುದಕ್ಕೂ ಮುನ್ನ ವಿಮಾನ ಕೆಲ ಕಾಲ ಜಮ್ಮು ವಿಮಾನ ನಿಲ್ದಾಣದ ಮೇಲೆ ಹಾರಾಟ ನಡೆಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಹವಾಮಾನದಲ್ಲಿ ಯಾವುದೇ ತೊಂದರೆ ಇರಲಿಲ್ಲ. ರನ್‌ವೇ ಸ್ಪಷ್ಟವಾಗಿತ್ತು. ಆದರೆ, ಪೈಲಟ್‌ಗೆ ಸೂಕ್ತವಾದ ಲ್ಯಾಂಡಿಂಗ್ ಪ್ರದೇಶವನ್ನು ಕಂಡುಕೊಳ್ಳಲಾಗಲಿಲ್ಲ ಎಂಬಂತೆ ತೋರುತ್ತಿದೆ ಎಂದು ಅವರು ಹೇಳಿದ್ದಾರೆ.

ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ವಿಮಾನ ಪತನವಾಗಿ 271ಕ್ಕೂ ಅಧಿಕ ಮಂದಿ ಮೃತಪಟ್ಟ ಬಳಿಕ ಏರ್ ಇಂಡಿಯಾದ ಹಲವು ವಿಮಾನಗಳಲ್ಲಿ ತಾಂತ್ರಿಕ ದೋಷದ ಬಗ್ಗೆ ವರದಿಯಾಗುತ್ತಿದೆ. ತಾಂತ್ರಿಕ ಪರಿಶೀಲನೆ ದೃಷ್ಟಿಯಿಂದ ಕಾರ್ಯಾಚರಿಸುತ್ತಿರುವ ವಿಮಾನಗಳ ಸಂಖ್ಯೆಯನ್ನೂ ಏರ್ ಇಂಡಿಯಾ ಕಡಿತಗೊಳಿಸಿದೆ.

# ಸಿಂಧೂ ನದಿ ನೀರು ಕೊಡಲು ನಿರಾಕರಿಸಿದರೆ ಪಾಕ್ ಮತ್ತೆ ಯುದ್ಧ ಮಾಡಲಿದೆ: ಬಿಲಾವಲ್

**ಇಸ್ಲಾಮಾಬಾದ್:** ಸಿಂಧೂ ನದಿ ನೀರಿನ ಒಪ್ಪಂದದ ಅನ್ವಯ ನ್ಯಾಯಯುತವಾಗಿ ನಮಗೆ ಸೇರಬೇಕಿರುವ ನೀರಿನ ಪಾಲನ್ನು ಕೊಡಲು ಒಪ್ಪದಿದ್ದರೆ ಭಾರತದ ವಿರುದ್ಧ ಪಾಕಿಸ್ತಾನ ಯುದ್ಧ ಸಾರಲಿದೆ ಎಂದು ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಹೇಳಿದ್ದಾರೆ.



26 ಮಂದಿ ಭಾರತೀಯರ ಜೀವ ತೆಗೆದ ಏಪ್ರಿಲ್ 22ರ ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಭಾರತವು 1960ರ ಸಿಂಧೂ ನದಿ ನೀರಿನ ಒಪ್ಪಂದವನ್ನು ರದ್ದು ಮಾಡಿತ್ತು. ಈ ಒಪ್ಪಂದವನ್ನು ಮರುಸ್ಥಾಪಿಸುವುದಿಲ್ಲ ಎಂದು ಕಳೆದ ವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದರು.

ಅಂತರರಾಷ್ಟ್ರೀಯ ಒಪ್ಪಂದದ ಬಗ್ಗೆ ಶಾ ಅವರ ಹೇಳಿಕೆ ಲಜ್ಜೆಗೇಡಿತನದ ನಿರ್ಲಕ್ಷ್ಯದಿಂದ ಕೂಡಿದೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯವು ಟೀಕಿಸಿದ ಎರಡು ದಿನಗಳ ನಂತರ ಬಿಲಾವಲ್ ಅವರ ಹೇಳಿಕೆ ಬಂದಿದೆ. ಸಂಸತ್ತಿನಲ್ಲಿ ಮಾಡಿದ ಭಾಷಣದಲ್ಲಿ ಬಿಲಾವಲ್, ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ನಿರ್ಧಾರವನ್ನು ವಿರೋಧಿಸಿದ್ದು, ಪಾಕಿಸ್ತಾನವು ನೀರಿನ ಪಾಲನ್ನು ಪಡೆದೇ ತೀರುವುದಾಗಿ ಹೇಳಿದ್ದಾರೆ. ಭಾರತಕ್ಕೆ ಎರಡು ಆಯ್ಕೆಗಳಿವೆ. ನೀರನ್ನು ನ್ಯಾಯಯುತವಾಗಿ ಹಂಚಿಕೊಳ್ಳಿ, ನಾವು ಆರು ನದಿಗಳಿಂದ ನೀರನ್ನು ಪಡೆದುಕೊಳ್ಳುತ್ತೇವೆ ಎಂದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ಉಲ್ಲೇಖಿಸಿ ಹೇಳಿದ್ದಾರೆ. ಒಪ್ಪಂದದ ಸ್ಥಗಿತ ಸಾಧ್ಯವಿಲ್ಲದ ಕಾರಣ ಅದಿನ್ನೂ ಅಸ್ತಿತ್ವದಲ್ಲಿದೆ ಎಂದಿದ್ದಾರೆ. ಸಿಂಧೂ ಒಪ್ಪಂದ ಕೊನೆಗೊಂಡಿದೆ, ಸ್ಥಗಿತಗೊಂಡಿದೆ ಎಂಬ ಭಾರತದ ಹೇಳಿಕೆ ಕಾನೂನುಬಾಹಿರವಾಗಿದೆ. ಏಕೆಂದರೆ, ಒಪ್ಪಂದ ಸ್ಥಗಿತಗೊಂಡಿಲ್ಲ. ಇದು ಪಾಕಿಸ್ತಾನ, ಭಾರತ ಎರಡೂ ದೇಶಗಳ ಬದ್ಧತೆಯಾಗಿದೆ. ನೀರನ್ನು ನಿಲ್ಲಿಸುವ ಬೆದರಿಕೆ ವಿಶ್ವಸಂಸ್ಥೆಯ ನಿಯಮಗಳ ಪ್ರಕಾರ ಕಾನೂನುಬಾಹಿರವಾಗಿದೆ ಎಂದು ಅವರು ಹೇಳಿದ್ದಾರೆ.

**ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಮುಖ್ಯಸ್ಥರಾಗಿರುವ ಬಿಲಾವಲ್, ಭಾರತವು ಬೆದರಿಕೆಯನ್ನು ಮುಂದುವರಿಸಿದರೆ, ನಾವು ಮತ್ತೆ ಯುದ್ಧ ಮಾಡಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ. ಭಾರತ, ಪಾಕಿಸ್ತಾನ ಮಾತುಕತೆ ನಿರಾಕರಿಸಿದರೆ, ಭಯೋತ್ಪಾದನೆಯ ಬಗ್ಗೆ ಯಾವುದೇ ಸಮನ್ವಯವಿಲ್ಲದಿದ್ದರೆ, ಎರಡೂ ದೇಶಗಳಲ್ಲಿ ಹಿಂಸಾಚಾರ ತೀವ್ರಗೊಳ್ಳುತ್ತದೆ ಎಂದಿದ್ದಾರೆ.**

# 5 ವಿಧಾನಸಭೆ ಉಪಚುನಾವಣೆಗಳಲ್ಲಿ 2 ಕಡೆ ಭರ್ಜರಿ ಜಯ ದಾಖಲಿಸಿದ ಎಎಪಿ

## ದಿಲ್ಲಿ ವಿಧಾನಸಭೆ ಚುನಾವಣೆ ಸೋಲಿನ ನಂತರ ಎಎಪಿಗೆ ಭರ್ಜರಿ ಬೂಸ್ಟ್ ನೀಡಿ ಉಪಚುನಾವಣೆ ಗೆಲುವು

**ಹೊಸದಿಲ್ಲಿ:** ದೇಶದ ಬೇರೆ ಬೇರೆ ರಾಜ್ಯಗಳ ಐದು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಎಎಪಿ ಎರಡು ಸ್ಥಾನಗಳನ್ನು ಗೆದ್ದುಕೊಂಡಿದ್ದರೆ, ಬಿಜೆಪಿ, ಕಾಂಗ್ರೆಸ್, ಟಿಎಂಸಿ ತಲಾ ಒಂದು ಸ್ಥಾನಗಳನ್ನು ಗೆದ್ದುಕೊಂಡಿವೆ. ದಿಲ್ಲಿಯ ಸೋಲಿನ ನಂತರ ತನ್ನ ರಾಜಕೀಯ ಭವಿಷ್ಯದ ಬಗ್ಗೆ ಅನಿಶ್ಚಿತತೆ ಎದುರಿಸುತ್ತಿದ್ದ ಎಎಪಿ ಪಂಜಾಬ್‌ನ ಲುಧಿಯಾನ ಪಶ್ಚಿಮ, ಗುಜರಾತ್‌ನ ವಿಸಾವದರ್ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಗಳಲ್ಲಿ ಗೆಲುವು ದಾಖಲಿಸಿದೆ. ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ ಕೇರಳದ ನಿಲಂಬೂರ್‌ನಲ್ಲಿ ನಿರ್ಣಾಯಕ ಗೆಲುವು ಸಾಧಿಸಿದ್ದರೆ, ಎಲ್ಲಾ ಐದು ಕಡೆ ಸ್ಪರ್ಧಿಸಿಯೂ ಬಿಜೆಪಿ ಗುಜರಾತ್‌ನ ಕಾಡಿಯಲ್ಲಿ ಮಾತ್ರ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಗಿದೆ.

ಮುಂದಿನ ವರ್ಷ ವಿಧಾನಸಭೆ ಚುನಾವಣೆ ಎದುರಿಸಲಿರುವ ಪಶ್ಚಿಮ ಬಂಗಾಳದ ಕಾಳಿಗಂಜ್ ಅನ್ನು ಉಳಿಸಿಕೊಳ್ಳುವಲ್ಲಿ ತೃಣಮೂಲ ಕಾಂಗ್ರೆಸ್ ಸಫಲವಾಗಿದೆ.

**ಎಎಪಿಗೆ ಬೂಸ್ಟ್ ನೀಡಿದ ಗೆಲುವು:** ಲುಧಿಯಾನ ಪಶ್ಚಿಮ ಉಪ ಚುನಾವಣೆಯಲ್ಲಿ ಎಎಪಿ ತನ್ನ ಎಲ್ಲಾ ಶಕ್ತಿಯನ್ನು ಬಳಸಿ ಪ್ರಚಾರ ನಡೆಸಿತ್ತು. ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್, ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ, ಮಾಜಿ ಸಿಎಂ ಅತಿಶಿ ಅವರು ಸಂಜೀವ್ ಅರೋರಾ ಪರ ಅಬ್ಬರದ ಪ್ರಚಾರ ನಡೆಸಿದ್ದರು. ಪಂಜಾಬ್ ಚುನಾವಣೆಗೆ ಎರಡು ವರ್ಷಗಳಿಗಿಂತ ಕಡಿಮೆ ಸಮಯ ಬಾಕಿ ಉಳಿದಿದ್ದು, ಇದು ಎಎಪಿ ಪಾಲಿಗೆ ನಿರ್ಣಾಯಕ ಚುನಾವಣೆ ಆಗಿತ್ತು. ಆದರೆ ಇದರಲ್ಲಿ ಕೇಜ್ರಿವಾಲ್ ಪಕ್ಷ ಗೆದ್ದು ಬೀಗಿದೆ. ಮಾಜಿ ರಾಜ್ಯಸಭಾ ಸಂಸದ ಮತ್ತು ಕೈಗಾರಿಕೋದ್ಯಮಿ ಸಂಜೀವ್ ಅರೋರಾ 10,000ಕ್ಕೂ ಹೆಚ್ಚು ಮತಗಳ ಅಂತರದಿಂದ ಇಲ್ಲಿ ಗೆದ್ದಿದ್ದಾರೆ. ಕಾಂಗ್ರೆಸ್‌ನ ಭರತ್ ಭೂಷಣ್ ಇಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ. ಇದು ಎಎಪಿ ಕೈಯಲ್ಲೇ ಇದ್ದ ಕ್ಷೇತ್ರ. ಜನವರಿಯಲ್ಲಿ ಎಎಪಿ ಶಾಸಕ ಗುರುಪ್ರೀತ್ ಬಸ್ಸಿ ಗೋಗಿ ಸ್ವಯಂ ಗುಂಡೇಟಿನಿಂದ ಸಾವನ್ನಪ್ಪಿದ ಕಾರಣ ಈ ಸ್ಥಾನ ಖಾಲಿಯಾಗಿತ್ತು. ಇವನು ಎಎಪಿಯ ಮಾಜಿ ರಾಜ್ಯಾಧ್ಯಕ್ಷ ಗೋಪಾಲ್ ಇಟಾಲಿಯಾ ವಿಸಾವದರ್‌ನಲ್ಲಿ ಬಿಜೆಪಿಯ ಮಾಜಿ ಜಿಲ್ಲಾ ಅಧ್ಯಕ್ಷ ಕಿರಿತ್ ಪಟೇಲ್ ಅವರನ್ನು ಸೋಲಿಸುವ ಮೂಲಕ ದೈತ್ಯ ಸಂಹಾರಿಯಾಗಿ ಹೊರಹೊಮ್ಮಿದ್ದಾರೆ. 75,942 ಮತಗಳನ್ನು ಪಡೆದ ಇಟಾಲಿಯಾ, ಬಿಜೆಪಿಯ ಭದ್ರಕೋಟೆಯಾಗಿದ್ದ ರಾಜ್ಯದಲ್ಲಿ 17,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ವಿಶೇಷವೆಂದರೆ 2007ರಿಂದ ಬಿಜೆಪಿ ಈ ಸ್ಥಾನವನ್ನು ಗೆದ್ದಿಲ್ಲ. ಆ ದಾಖಲೆ ಮುರಿಯುವ ಪ್ರಯತ್ನ ಈ ಬಾರಿಯೂ ವಿಫಲಗೊಂಡಿದೆ. ಇಲ್ಲಿ ಎಎಪಿ ಭೂಪೇಂದ್ರ ಭಯಾನಿ ಶಾಸಕರಾಗಿದ್ದರು, ಅವರು ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರಿಂದ 2023ರಿಂದ ಈ ಸ್ಥಾನ ಖಾಲಿಯಾಗಿದೆ.

**ಕಾಡಿಯಲ್ಲಿ ಬಿಜೆಪಿ ಗೆಲುವು:** ಕಾಡಿಯಲ್ಲಿ ಮಾತ್ರ ಬಿಜೆಪಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಬಿಜೆಪಿಯ ರಾಜೇಂದ್ರ ಚಾವ್ಡಾ 39,000ಕ್ಕೂ ಹೆಚ್ಚು ಮತಗಳ ಅಂತರದಿಂದ ಇಲ್ಲಿ ಗೆದ್ದಿದ್ದಾರೆ. ಬಿಜೆಪಿಯವರೇ ಆದ ಶಾಸಕ ಕರ್ಸನ್ ಸೋಲಂಕಿ ಅವರ ಮರಣದ ನಂತರ ಫೆಬ್ರವರಿಯಿಂದ ಈ ಸ್ಥಾನ ತೆರವಾಗಿತ್ತು. ಮೆಹ್ಸಾನಾ ಜಿಲ್ಲೆಯ ಈ ಕ್ಷೇತ್ರವು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೀಸಲಾಗಿದೆ. ತ್ರಿಕೋನ ಸ್ಪರ್ಧೆಯಲ್ಲಿ, ಕಾಂಗ್ರೆಸ್, ಎಎಪಿ ಕ್ರಮವಾಗಿ ರಮೇಶ್ ಚಾವ್ಡಾ, ಜಗದೀಶ್ ಚಾವ್ಡಾ ಅವರನ್ನು ಕಣಕ್ಕಿಳಿಸಿದ್ದವು. ರಮೇಶ್ ಚಾವ್ಡಾ 2012ರಲ್ಲಿ ಈ ಸ್ಥಾನವನ್ನು ಗೆದ್ದಿದ್ದರು.



**ಎಎಪಿ ಕೈಯಲ್ಲೇ ಇದ್ದ ಕ್ಷೇತ್ರ**

### ಸಮರದಲ್ಲಿ ಗೆದ್ದ ಪ್ರಿಯಾಂಗಾ ಗಾಂಧಿ

**ಇನ್ನು ಪ್ರಿಯಾಂಕಾ ಗಾಂಧಿ ಪ್ರತಿನಿಧಿಸುವ ವಯನಾಡ್ ಲೋಕಸಭಾ ಕ್ಷೇತ್ರದ ಭಾಗವಾಗಿರುವುದರಿಂದ ನಿಲಂಬೂರ್ ಉಪಚುನಾವಣೆಯನ್ನೂ ಪ್ರತಿಷ್ಠೆಯ ಹೋರಾಟವೆಂದು ಪರಿಗಣಿಸಲಾಗಿತ್ತು. ಇಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಜಯ ಸಾಧಿಸಿ ಈ ಫೈಟ್‌ನಲ್ಲಿ ಗೆಲುವು ಸಾಧಿಸಿದೆ.**

### ಮುಂದುವರಿದ ದೀದಿ ಅಬ್ಬರ

**ನಾಡಿಯಾ ಜಿಲ್ಲೆಯ ವ್ಯಾಪ್ತಿಗೆ ಬರುವ ಬಂಗಾಳದ ಕಾಳಿಗಂಜ್ ಕ್ಷೇತ್ರದಲ್ಲಿ, ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಅಲಿಫಾ ಅಹ್ಮದ್ ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕಬಿಲ್ ಉದ್ದೀನ್ ಶೇಖ್ ಅವರನ್ನು ಸೋಲಿಸಿದ್ದಾರೆ.**

## ಮಿನಿ ನ್ಯೂಸ್

# ಉಚಚುನಾವಣೆಯಲ್ಲಿ ಮುಖಭಂಗ ಗುಜರಾತ್ ಕೈ ಅಧ್ಯಕ್ಷ ರಾಜೀನಾಮೆ

**ಅಹಮದಾಬಾದ್:** ಕಾಡಿ, ವಿಸಾವದರ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಪಕ್ಷ ಅನುಭವಿಸಿರುವ ಸೋಲಿಗೆ ನೈತಿಕ ಹೊಣೆ ಹೊತ್ತಿರುವ ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಶಕ್ತಿಸಿನ್ಹ ಗೋಹಿಲ್ ಅವರು ತಮ್ಮ ಸ್ಥಾನಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ವಿಸಾವದರ ಕ್ಷೇತ್ರದಲ್ಲಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಗೋಪಾಲ್ ಇಟಾಲಿಯಾ ಮತ್ತು ಕಾಡಿಯಲ್ಲಿ ಬಿಜೆಪಿ ಅಭ್ಯರ್ಥಿ ರಾಜೇಂದ್ರ ಚಾವ್ಡಾ ಜಯ ಸಾಧಿಸಿದ್ದಾರೆ. ಈ ಕ್ಷೇತ್ರಗಳಲ್ಲಿ ಕ್ರಮವಾಗಿ ನಿತಿನ್ ರಂಪಾರಿಯಾ , ರಮೇಶ್‌ಭಾಯ್ ಚಾವ್ಡಾ ಅವರು ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದರು. ಈ ಎರಡು ಕ್ಷೇತ್ರಗಳಿಗೆ ಜೂನ್ 19ರಂದು ಮತದಾನ ನಡೆದಿತ್ತು. ಸೋಮವಾರ ಫಲಿತಾಂಶ ಪ್ರಕಟವಾಗಿದೆ. ಸೋಲಿನ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ಗೋಹಿಲ್, ಉಪಚುನಾವಣೆ ಫಲಿತಾಂಶಗಳು ನಾವು ನಿರೀಕ್ಷಿಸಿದಂತೆ ಬಂದಿಲ್ಲ. ಹಾಗಾಗಿ, ಪಕ್ಷದ ಸೋಲಿಗೆ ನೈತಿಕ ಹೊಣೆಯನ್ನು ನಾನೇ ಹೊರುತ್ತೇನೆ. ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ರಾಜೀನಾಮೆ ಪತ್ರವನ್ನು ನಮ್ಮ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈಗಾಗಲೇ ಮೇಲ್ ಮೂಲಕ ಕಳುಹಿಸಿದ್ದೇನೆ ಎಂದು ತಿಳಿಸಿದ್ದಾರೆ. ರಾಜ್ಯಸಭಾ ಸದಸ್ಯರಾಗಿರುವ ಗೋಹಿಲ್ ಅವರನ್ನು, 2024ರ ಸಾರ್ವತ್ರಿಕ ಚುನಾವಣೆಗೂ ಮೊದಲೇ ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ (2023ರ ಜೂನ್‌ನಲ್ಲಿ) ನೇಮಿಸಲಾಗಿತ್ತು.

# ಅನಿಯಂತ್ರಿತ ಮಹಾತ್ವಾಕಾಂಕ್ಷೆಯೇ ಜಾಗತಿಕ ಬಿಕ್ಕಟ್ಟಿಗೆ ಕಾರಣ

**ಪುಣೆ:** ಅನಿಯಂತ್ರಿತ ಮಹಾತ್ವಾಕಾಂಕ್ಷೆಯೇ ಜಾಗತಿಕ ಬಿಕ್ಕಟ್ಟಿಗೆ ಕಾರಣ ಆಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸೋಮವಾರ ಹೇಳಿದ್ದಾರೆ. ಪುಣೆಯಲ್ಲಿ ಎಂಐಟಿ ಸಮೂಹ ಸಂಸ್ಥೆ ನಿರ್ಮಿಸಿರುವ ಶ್ರೀ ಸರಸ್ವತಿ ಕರಾಡ್ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿರುವ ಅವರು, ಭಾರತವು ಶಾಂತಿ, ಮಾನವತೆಯ ಸಂದೇಶವನ್ನು ಜಗತ್ತಿಗೆ ಸಾರುವ ಅಗತ್ಯವಿದೆ ಎಂದಿದ್ದಾರೆ. ನಮ್ಮ ದೇಶದ ಪರಂಪರೆ, ಸಂಸ್ಕೃತಿ, ಇತಿಹಾಸವು ಎಷ್ಟು ಸಂಪದ್ಭರಿತವಾಗಿದೆ ಎಂದರೆ, ಸರ್ವಾಧಿಕಾರಿ, ವಿಸ್ತರಣಾವಾದಿ ಮನಸ್ಥಿತಿಯನ್ನು ನಾವು ಎಂದೂ ಹೊಂದಲೇ ಇಲ್ಲ. ಆದಾಗ್ಯೂ, ಜಗತ್ತಿನಾದ್ಯಂತ ಸಂಘರ್ಷ ಉಂಟುಮಾಡುವಂತಹ ಅನಿಯಂತ್ರಿತವಾದ ಮಹತ್ವಾಕಾಂಕ್ಷೆ ಇದೆ. ಜಾಗತಿಕ ಶಾಂತಿ ಹಾಗೂ ಮಾನವತೆಯ ಸಂದೇಶವನ್ನು ವಿಶ್ವಕ್ಕೆ ಸಾರುವ ಅನಿವಾರ್ಯತೆ ಎದುರಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಭಾರತವು ವಿಶ್ವಗುರು ಆಗಬೇಕು ಎಂದು ಒತ್ತಿಹೇಳಿದ ಸಚಿವ, ನಮ್ಮ ನೀತಿಶಾಸ್ತ್ರವು ನಮ್ಮ ಕಲ್ಯಾಣ ಅಥವಾ ನಮ್ಮ ಕುಟುಂಬದ ಕಲ್ಯಾಣದ ಬಗ್ಗೆ ಬೋಧಿಸುವುದಿಲ್ಲ. ಬದಲಾಗಿ, ಜಾಗತಿಕ ಸಮೃದ್ಧಿಯನ್ನು ಸಾರುತ್ತದೆ ಎಂದು ಹೇಳಿದ್ದಾರೆ.



# ಮರಾಠಿ ಮಹಾರಾಷ್ಟ್ರದ ಆತ್ಮ ಭಾಷೆಯ ಸ್ಥಾನಮಾನಕ್ಕೆ ಧಕ್ಕೆ ಇಲ್ಲ: ಎನ್‌ಸಿಪಿ

**ಮುಂಬೈ:** ಮಹಾರಾಷ್ಟ್ರದಲ್ಲಿ ಹಿಂದಿ ಭಾಷೆ ಹೇರಿಕೆಯ ಗದ್ದಲದ ನಡುವೆ ಎನ್‌ಸಿಪಿ ಪಕ್ಷವು, ಮರಾಠಿ ಮಹಾರಾಷ್ಟ್ರದ ಆತ್ಮವಿದ್ದಂತೆ ಎಂದು ಬಣ್ಣಿಸಿದೆ. ಮರಾಠಿ ಭಾಷೆಯ ಸ್ಥಾನಮಾನಕ್ಕೆ ಧಕ್ಕೆ ತರುವ ನಿರ್ಧಾರಗಳನ್ನು ಎಂದಿಗೂ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷದ ವಕ್ತಾರ ಆನಂದ್ ಪರಾಂಜಪೆ, ಮರಾಠಿ ಭಾಷೆಯ ಮಹತ್ವವನ್ನು ಎತ್ತಿಹಿಡಿಯಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ. ಮೋದಿ ಸರ್ಕಾರವು ಮರಾಠಿಯನ್ನು ಶಾಸ್ತ್ರೀಯ ಭಾಷೆಯಾಗಿ ಗುರುತಿಸಿದೆ. ಮರಾಠಿ ಮಹಾರಾಷ್ಟ್ರದ ಏಕೈಕ ಭಾಷೆ, ಆತ್ಮ ಮಹಾಯುತಿ ಸರ್ಕಾರವು ಅದರ ಸ್ಥಾನಮಾನಕ್ಕೆ ಧಕ್ಕೆ ತರುವ ನಿರ್ಧಾರವನ್ನು ಎಂದಿಗೂ ತೆಗೆದುಕೊಳ್ಳುವುದಿಲ್ಲ ಎಂದು ಆನಂದ್ ತಿಳಿಸಿದ್ದಾರೆ. ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ, ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಭಾಗವಾಗಿದೆ. ಮರಾಠಿ, ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಹಿಂದಿಯನ್ನು ತೃತೀಯ ಭಾಷೆಯಾಗಿ 1 ರಿಂದ 5ನೇ ತರಗತಿವರೆಗೆ ಕಡ್ಡಾಯವಾಗಿ ಕಲಿಸಬೇಕು ಎಂದು ಮಹಾರಾಷ್ಟ್ರ ಸರ್ಕಾರ ಆದೇಶಿಸಿದೆ.



ಹಿಂದಿ ಕಡ್ಡಾಯವಲ್ಲ ಎಂದು ಸರ್ಕಾರ ವಾದಿಸಿದ್ದರೂ, ಹಿಂದಿ ಹೊರತುಪಡಿಸಿ ಯಾವುದೇ ಭಾರತೀಯ ಭಾಷೆಯನ್ನು ಕಲಿಯಲು ಶಾಲೆಯಲ್ಲಿ ಪ್ರತಿ ತರಗತಿಗೆ ಕನಿಷ್ಠ 20 ವಿದ್ಯಾರ್ಥಿಗಳ ಒಪ್ಪಿಗೆ ಸೂಚಿಸುವುದು ಕಡ್ಡಾಯಗೊಳಿಸಿತು. ಸರ್ಕಾರದ ಕ್ರಮವನ್ನು ಖಂಡಿಸಿರುವ ಮರಾಠಿ ಭಾಷಾ ಹೋರಾಟಗಾರರು, ಹಿಂಬಾಗಿಲ ಮೂಲಕ ಸರ್ಕಾರವು ಹಿಂದಿ ಹೇರುತ್ತಿದೆ ಎಂದು ಆರೋಪಿಸಿದಾರೆ.

# 24 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ; ಶಾಲಾ ಶಿಕ್ಷಕನ ಬಂಧನ

**ಶಿಮ್ಲಾ:** ಹಿಮಾಚಲ ಪ್ರದೇಶದ ಸಿರ್ಮೌರ್ ಜಿಲ್ಲೆಯ ಸರ್ಕಾರಿ ಶಾಲೆಯೊಂದರಲ್ಲಿ 24 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಶಿಕ್ಷಕನೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ಸೋಮವಾರ ತಿಳಿಸಿವೆ. ಕಿರುಕುಳದ ಬಗ್ಗೆ 8 ರಿಂದ 10ನೇ ತರಗತಿಯ ವಿದ್ಯಾರ್ಥಿನಿಯರು ಶಾಲೆಯ ಪ್ರಾಂಶುಪಾಲರಿಗೆ ದೂರು ನೀಡಿದ್ದರು. ಬಳಿಕ ಶಿಕ್ಷಕನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಶಿಕ್ಷಕನು ನಮ್ಮನ್ನು ಅನುಚಿತವಾಗಿ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ವಿದ್ಯಾರ್ಥಿನಿಯರು ಪ್ರಾಂಶುಪಾಲರಿಗೆ ಲಿಖಿತ ದೂರು ಸಲ್ಲಿಸಿದ್ದರು. ಈ ದೂರನ್ನು ಶಾಲೆಯ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗೆ ರವಾನಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂಬಂಧ ವಿದ್ಯಾರ್ಥಿನಿಯರ ಪೋಷಕರ ಜತೆ ಸಭೆ ಏರ್ಪಡಿಸಲಾಗಿತ್ತು. ಈ ವೇಳೆ ಅನೇಕ ಪೋಷಕರು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ನಮ್ಮ ಮಕ್ಕಳು ತಿಳಿಸಿಲ್ಲ ಎಂದು ಕಳವಳ ವ್ಯಕ್ತಪಡಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಶಿಕ್ಷಕನನ್ನು ಬಂಧಿಸಲಾಗಿದ್ದು, ಆತನ ವಿರುದ್ಧ ಪೋಕ್ಸೊ ಕಾಯ್ದೆ ಸೇರಿದಂತೆ ಭಾರತೀಯ ನ್ಯಾಯ ಸಂಹಿತಾ ವಿವಿಧ ಸೆಕ್ಷನ್‌ಗಳ ಅಡಿಗಳಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

# 'ರೆಟ್ರೋ' ಪ್ರೀ-ರಿಲೀಸ್ ಈವೆಂಟ್‌ನಲ್ಲಿ ಆಕ್ಷೇಪಾರ್ಹ ಹೇಳಿಕೆ



ವಿಜಯ್ ದೇವರಕೊಂಡ ವಿರುದ್ಧ ಕೇಸ್ ದಾಖಲು

'ರೆಟ್ರೋ' ಪ್ರೀ-ರಿಲೀಸ್ ಈವೆಂಟ್‌ನಲ್ಲಿ ಬುಡಕಟ್ಟು ಸಮುದಾಯದ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ತೆಲುಗು ನಟ ವಿಜಯ್ ದೇವರಕೊಂಡ ವಿರುದ್ಧ ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಮೇ 1ರಂದು ತೆರೆಕಂಡಿರುವ 'ರೆಟ್ರೋ' ಸಿನಿಮಾದಲ್ಲಿ ತಮಿಳು ನಟ ಸೂರ್ಯ ಹಾಗೂ ನಟಿ ಪೂಜಾ ಹೆಗ್ಡೆ ನಟಿಸಿದ್ದಾರೆ. ಸಿನಿಮಾ ರಿಲೀಸ್‌ಗೂ ಮುನ್ನ ಏ.26ರಂದು ಹೈದರಾಬಾದ್‌ನ ಜೆಆರ್‌ಸಿ ಕನ್‌ವೆನ್ಷನ್‌ನಲ್ಲಿ ತೆಲುಗು 'ರೆಟ್ರೋ' ಸಿನಿಮಾದ ಪ್ರೀ-ರಿಲೀಸ್ ಈವೆಂಟ್ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ತೆಲುಗು ನಟ ವಿಜಯ್ ದೇವರಕೊಂಡ ಅವರು ಭಾಗಿಯಾಗಿದ್ದರು. ಈ ವೇಳೆ ಕಾಶ್ಮೀರದಲ್ಲಿ ನಡೆದ ಪಹಲ್ಗಾಮ್ ದಾಳಿಯನ್ನು ಉಲ್ಲೇಖಿಸಿ ಮಾತನಾಡಿದ್ದ ವಿಜಯ್, ಈ ರೀತಿಯ ಘಟನೆಗಳಿಗೆ ಪರಿಹಾರವೆಂದರೆ ಭಯೋತ್ಪಾದಕರಿಗೆ ಶಿಕ್ಷಣ ನೀಡುವುದು. ಅಂದರೆ ಭಯೋತ್ಪಾದಕರಾಗದಂತೆ ತಡೆಯುವುದು. ಭಯೋತ್ಪಾದನೆಯಿಂದ ಅವರಿಗೆ ಏನು ಲಾಭ ಕಾಶ್ಮೀರ ಭಾರತಕ್ಕೆ ಸೇರಿದ್ದು, ಕಾಶ್ಮೀರಿಗಳು ನಮ್ಮವರು. ಇನ್ನೂ ಪಾಕಿಸ್ತಾನದ ಮೇಲೆ ಭಾರತ ದಾಳಿ ಮಾಡುವ ಅವಶ್ಯಕತೆಯಿಲ್ಲ. ಈಗಾಗಲೇ ಪಾಕಿಸ್ತಾನದವರು ತಮ್ಮ ಸರ್ಕಾರದಿಂದಾಗಿ ಕಿತ್ತು ತಿನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಇದು ಹೀಗೆ ಮುಂದುವರಿದರೆ ಪಾಕಿಸ್ತಾನದ ಪ್ರಜೆಗಳೇ ತಮ್ಮ ಸರ್ಕಾರದ ಮೇಲೆ ದಾಳಿ ನಡೆಸುತ್ತಾರೆ. 500 ವರ್ಷಗಳ ಹಿಂದೆ ಸಾಮಾನ್ಯ ಜ್ಞಾನವಿಲ್ಲದೆ ಬುಡಕಟ್ಟು ಜನಾಂಗದವರು ಹೋರಾಡಿದಂತೆ ಇದೀಗ ಭಯೋತ್ಪಾದಕರು ವರ್ತಿಸುತ್ತಿದ್ದಾರೆ ಎಂದು ಹೇಳಿದರು. ಈ ಹೇಳಿಕೆಯಿಂದಾಗಿ ಬುಡಕಟ್ಟು ಸಮುದಾಯದವರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಬಳಿಕ ಇದನ್ನರಿತ ವಿಜಯ್ ಕ್ಷಮೆಯಾಚಿಸಿದ್ದರು.



# ಕಾಪಿ ಮಾಡಿದ್ದರಂತೆ ಸಲ್ಮಾನ್ ಖಾನ್



ಸಲ್ಮಾನ್ ಖಾನ್ ಅಭಿನಯದ ಸೂಪರ್ ಹಿಟ್ ಚಿತ್ರಗಳಲ್ಲಿ 'ತೇರೆನಾಮ್' ಚಿತ್ರವೂ ಒಂದು. ಈ ಚಿತ್ರದಲ್ಲಿ ಸಲ್ಮಾನ್ ಖಾನ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸ್ಕೊಂಡಿದ್ರು. ಹೇರ್‌ಸ್ಟೈಲ್ ಇನ್ನೂ ಭಿನ್ನವಾಗಿತ್ತು. ಚಿತ್ರದಲ್ಲಿ ಸಲ್ಮಾನ್ ಖಾನ್ ಉದ್ದ ತಲೆಕೂದಲನ್ನ ಎರಡು ಪಾರ್ಟಿಷನ್ ಆಗಿ ಬಾಚಿಕೊಂಡಿದ್ರು. ಈ ಹೇರ್‌ಸ್ಟೈಲ್ ಆಗಿನ ಕಾಲದಲ್ಲಿ ಟ್ರೆಂಡ್ ಸೃಷ್ಟಿಸಿತ್ತು. ಆದರೆ ಆ ಹೇರ್‌ಸ್ಟೈಲ್ ಅನ್ನು ಎಲ್ಲಿಂದ ಕಾಪಿ ಮಾಡಿದ್ದು ಅನ್ನೋದ್ರ ರಹಸ್ಯವನ್ನ ಇದೀಗ ಸಲ್ಮಾನ್ ಖಾನ್ ಬಿಚ್ಚಿಟ್ಟಿದ್ದಾರೆ. 2003ರಲ್ಲಿ ತೆರೆಕಂಡಿದ್ದ ತೇರೆನಾಮ್ ಚಿತ್ರದಲ್ಲಿ ಸಲ್ಮಾನ್ ಖಾನ್ ರಾಧೆಮೋಹನ್ ಹೆಸರಿನ ಪಾತ್ರದಲ್ಲಿ ಅಭಿನಯಿಸಿದ್ದರು. ಚಿತ್ರ ರಿಲೀಸ್ ಆದ್ಮೇಲೆ ಸಲ್ಮಾನ್ ಖಾನ್ ಹೇರ್‌ಸ್ಟೈಲ್ ಹಲವು ವರ್ಷ ಭಾರೀ ಟ್ರೆಂಡ್ ಕ್ರಿಯೇಟ್ ಮಾಡಿತ್ತು. ಆದರೆ ಈ ಹೇರ್‌ಸ್ಟೈಲ್ ಅನ್ನು ಸಲ್ಮಾನ್ ಖಾನ್ ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಹೇರ್‌ಸ್ಟೈಲ್‌ನಿಂದ ಸ್ಫೂರ್ತಿ ಪಡೆದು ಅಳವಡಿಸಿಕೊಂಡಿದ್ದರಂತೆ. ಸಿನಿಮಾ ತಯಾರಾಗುವ ವೇಳೆ ರಾಷ್ಟ್ರಪತಿಗಳಾಗಿದ್ದ, ವಿಜ್ಞಾನಿ ಡಾ.ಎಪಿಜೆ ಅಬ್ದುಲ್ ಕಲಾಂ ತಮ್ಮ ಸಾಧನೆ ಹಾಗೂ ನೋಟದಿಂದಲೂ ಭಿನ್ನರಾಗಿದ್ದರು. ಅವರ ಹೇರ್‌ಸ್ಟೈಲ್ ಸ್ಫೂರ್ತಿಗೊಂಡಿದ್ದ ಸಲ್ಮಾನ್ ತೇರೆನಾಮ್ ಚಿತ್ರದಲ್ಲಿ ಅದನ್ನ ಪ್ರಯೋಗ ಮಾಡಿರುವ ಗುಟ್ಟನ್ನ ಇದೀಗ ಶೋವೊಂದರಲ್ಲಿ ಬಿಟ್ಟುಕೊಟ್ಟಿದ್ದಾರೆ.

# ಯಶ್‌ಗೆ ಹಾಲಿವುಡ್‌ನ ಆಸ್ಕರ್ ವಿಜೇತ ಪ್ರೊಡ್ಯೂಸರ್ ಬಲ!



ರಾಮಾಯಣ ಚಿತ್ರವನ್ನು ಯಶ್ ನಟಿಸಿ, ನಿರ್ಮಿಸುತ್ತಿದ್ದಾರೆ. ಭಾರತದ ಧಾರ್ಮಿಕ ನಂಬಿಕೆಯ ಈ ಚಿತ್ರವನ್ನು ಯಶ್ ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಭರವಸೆಯನ್ನು ಈ ಹಿಂದೆಯೇ ಕೊಟ್ಟಿದ್ದರು. ಅದರಂತೆ ಯಶ್ ಈಗ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ.

ರಾಮಾಯಣ ಚಿತ್ರವನ್ನ ಜಾಗತಿಕ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಕಾರಣ ಈ ಚಿತ್ರಕ್ಕೆ ಓರ್ವ ನಿರ್ಮಾಪಕರಾಗಿ ಹಾಲಿವುಡ್‌ನ ಆಸ್ಕರ್ ಪ್ರಶಸ್ತಿ ಪುರಸ್ಕೃತ ನಿರ್ಮಾಪಕ ಚಾರ್ಲಿ ರೋವನ್ ಸೇರ್ಪಡೆಯಾಗಿದ್ದಾರೆ.

ಆದರೆ ಈ ಕುರಿತು ಸದ್ಯ ಚಿತ್ರತಂಡ ಅಧಿಕೃತ ಮಾಹಿತಿಯನ್ನು ಹಂಚಿಕೊಳ್ಳಬೇಕಿದೆ. ಚಿತ್ರದ ಚಿತ್ರೀಕರಣ ಈಗಾಗಲೇ ಪ್ರಾರಂಭವಾಗಿದ್ದು, ಚಿತ್ರವನ್ನ ಯಶ್ ನಟಿಸಿ, ನಿರ್ಮಿಸುತ್ತಿದ್ದಾರೆ. ರಾವಣನ ಪಾತ್ರದಲ್ಲಿ ಯಶ್ ಕಾಣಿಸಿಕೊಳ್ಳಲಿದ್ದು, ರಾಮನಾಗಿ ರಣಬೀರ್ ಕಪೂರ್ ಹಾಗೂ ಸೀತೆಯ ಪಾತ್ರದಲ್ಲಿ ಸಾಯಿ ಪಲ್ಲವಿ ನಟಿಸಿದ್ದಾರೆ. ಎರಡು ಸರಣಿಯಲ್ಲಿ ಚಿತ್ರ ತೆರೆಕಾಣಲಿದ್ದು, ಮೊದಲ ಭಾಗ 2026ರ ದೀಪಾವಳಿ ಹಬ್ಬಕ್ಕೆ ರಿಲೀಸ್ ಆಗಲಿದೆ. ಬಿಗ್ ಬಜೆಟ್‌ನಲ್ಲಿ ತಯಾರಾಗ್ತಿರುವ ರಾಮಾಯಣ ಚಿತ್ರವನ್ನ ಯಶ್ ತಮ್ಮ ನಿರ್ಮಾಣ ಸಂಸ್ಥೆ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಮೂಲಕ ನಿರ್ಮಿಸುತ್ತಿದ್ದಾರೆ. ಇನ್ನೋರ್ವ ನಿರ್ಮಾಪಕರಾಗಿ ಪ್ರೈಮ್ ಫೋಕಸ್ ಸ್ಟುಡಿಯೋ ನಮಿತ್ ಮಲ್ಹೋತ್ರಾ ಕೂಡ ಚಿತ್ರದ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ.

# ಜಯಂ ರವಿ ಜೊತೆ ಬೋಲ್ಡ್ ಆಗಿ ಕಾಣಿಸ್ಕೊಂಡ ಕೆನೀಶಾ

ತಮಿಳು ನಟ ಜಯಂ ರವಿ ಅಲಿಯಾಸ್ ರವಿಮೋಹನ್ ವಿಚ್ಛೇದನ ಘೋಷಿಸಿದ ಬಳಿಕ ಗಾಯಕಿ ಕೆನೀಶಾ ಜೊತೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗೇ ಇಬ್ಬರ ನಡುವಿನ ವದಂತಿ ಹೆಚ್ಚಾಗುತ್ತಿದೆ. ಈಗ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಜಯಂ ರವಿ ಕೆನೀಶಾ ಆಲ್ಬಂ ಸಕ್ಸಸ್ ಪಾರ್ಟಿ ಕೊಟ್ಟಿದ್ದಾರೆ. ಕೆನೀಶಾ ಫ್ರಾನ್ಸಿಸ್ ಜೊತೆ ಜಯಂ ರವಿ ಬಿಂದಾಸ್ ಆಗಿರುವ ಫೋಟೋ ವೈರಲ್ ಆಗಿದೆ.

ಕೆನೀಶಾ ಹಾಡಿರುವ ನಯಾ ಆಲ್ಬಂ ರಿಲೀಸ್ ಆಗಿದೆ. ವೀಡಿಯೋ ಕೊನೆಯಲ್ಲಿ ಜಯಂ ರವಿ ಎಂಟ್ರಿ ಇಬ್ಬರ ನಡುವಿಗೆ ಗಾಸಿಪ್‌ಗೆ ತುಪ್ಪ ಸುರಿದಂತಿತ್ತು. ಮ್ಯೂಸಿಕ್ ಆಲ್ಬಂ ರಿಲೀಸ್ ಬೆನ್ನಲ್ಲೇ ಈಗ ಚೆನ್ನೈನಲ್ಲಿ ಕೆನೀಶಾ, ಆಕೆಯ ಮ್ಯೂಸಿಕ್ ಟೀಮ್ ಹಾಗೂ ರವಿಮೋಹನ್ ಪಾರ್ಟಿ ಮಾಡಿದ್ದಾರೆ. ಪಾರ್ಟಿಯ ಫೋಟೋಗಳು ವೈರಲ್ ಆಗಿದೆ. ಕೆನೀಶಾ ಹಾಗೂ ಜಯಂ ರವಿ ಪರಸ್ಪರ ಭಾರೀ ಆಪ್ತತೆಯಿಂದ ಪಬ್‌ನಲ್ಲಿ ಸಕ್ಸಸ್ ಪಾರ್ಟಿ ಮಾಡಿದ್ದಾರೆ.

ರವಿ ಜೀವನದಲ್ಲಿ ಕೆನೀಶಾ ಪ್ರವೇಶ ಆಗಿದ್ದಕ್ಕೆ ಏಕಪಕ್ಷೀಯವಾಗಿ ರವಿ ತಮಗೆ ವಿಚ್ಛೇದನ ಘೋಷಿಸಿದ್ದಾರೆ ಎಂದು ರವಿ ಪತ್ನಿ ಆರತಿ ಆರೋಪ ಮಾಡಿದ್ದರು. ಬಳಿಕ ನಾಲ್ಕು ಗೋಡೆ ಮಧ್ಯೆ ನಡೆಯುತ್ತಿದ್ದ ಜಗಳ ಬೀದಿಗೆ ಬಂದಿತ್ತು. ಇಂದಿಗೂ ಪತ್ನಿ ಆರತಿ ಜೊತೆ ನಟ ರವಿಯ ವಿಚ್ಛೇದನವಾಗಿಲ್ಲ. ಅದಾಗಲೇ ರವಿ ಬಹಿರಂಗವಾಗಿ ಕೆನೀಶಾ ಜೊತೆ ಕಾಣಿಸಿಕೊಳ್ಳುತ್ತಿದ್ದಾರೆ.

# ಅಜಯ್ ರಾವ್ ಈಗ ರಗಡ್ ಹೀರೋ ಹೊಸ ಚಿತ್ರಕ್ಕೆ ಚಾಲನೆ




ಇನ್ನೂ ಹೆಸರಿಡದ ಈ ಚಿತ್ರ

'ನನ್ ಮಗಳೇ' ಹೀರೋಯಿನ್ ಚಿತ್ರವೂ ಸೇರಿದಂತೆ ಹಲವು ಸದಭಿರುಚಿಯ ಚಿತ್ರಗಳ ನಿರ್ದೇಶಕ ಎಸ್.ಕೆ. ಬಾಹುಬಲಿ ಇದೀಗ ಕೃಷ್ಣ ಅಜಯ್ ರಾವ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಪಿ.ಕೆ. ಪ್ರೊಡಕ್ಷನ್ಸ್ ಮೂಲಕ ನಿರ್ಮಾಪಕ ಕಿರಣ್ ಅವರು ಮೊದಲ ಬಾರಿಗೆ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಇನ್ನೂ ಹೆಸರಿಡದ ಈ ಚಿತ್ರದ ಮುಹೂರ್ತ ಸಮಾರಂಭ ಶ್ರೀ ಬಂಡೆ ಮಹಾಕಾಳಮ್ಮ ದೇವಸ್ಥಾನದಲ್ಲಿ ನೆರವೇರಿತು. ಚಿತ್ರದ ಪ್ರಥಮ ದೃಶ್ಯಕ್ಕೆ ಯೋಗರಾಜ್ ಭಟ್ಟರು ಕ್ಲಾಪ್ ಮಾಡಿದರೆ, ದಿನಕರ್ ತೂಗುದೀಪ ಕ್ಯಾಮೆರಾ ಚಾಲನೆ ಮಾಡಿದರು.

ನಿರ್ದೇಶಕ ಎಂ.ಡಿ. ಶ್ರೀಧರ್, ಎಸ್. ನಾರಾಯಣ್, ಶಿವತೇಜಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಲವರ್ ಬಾಯ್, ಆಕ್ಷನ್ ಹೀರೋ, ಭಗ್ನ ಪ್ರೇಮಿಯಾಗಿ ಕಾಣಿಸಿಕೊಂಡಿದ್ದ ಅಜಯ್ ರಾವ್ ಈ ಚಿತ್ರದ ಮೂಲಕ ರಗಡ್ ಹೀರೋ ಆಗುತ್ತಿದ್ದಾರೆ. ಮುಹೂರ್ತದ ನಂತರ ನಿರ್ದೇಶಕ ಬಾಹುಬಲಿ ಮಾತನಾಡುತ್ತ ಇದೊಂದು ಫ್ಯಾಮಿಲಿ ಥ್ರಿಲ್ಲರ್ ಚಿತ್ರ, ನ್ಯಾಷನಲ್ ಲೆವೆಲ್‌ನಲ್ಲಿ ನಡೆಯುವ ಕಥೆ. ಒಂದು ಘಟನೆಯನ್ನು ಇನ್‌ಸ್ಪಿರೇಶನ್ ಆಗಿ ತೆಗೆದುಕೊಂಡು ಸ್ಕ್ರಿಪ್ಟ್ ಮಾಡಿದ್ದೇವೆ. ನಾನು ಈ ಕಥೆ ಮಾಡಿಕೊಂಡಾಗಲೇ ಈ ಕ್ಯಾರೆಕ್ಟರನ್ನು ಅಜಯ್ ರಾವ್ ಕೈಲೇ ಮಾಡಿಸಬೇಕೆಂದುಕೊಂಡೆ. ಅವರು ಫ್ಯಾಮಿಲಿ ಹೀರೋ, ಕಥೆ ಕೇಳಿದ ತಕ್ಷಣ ಅವರೂ ಸಹ ಒಪ್ಪಿದರು. ಅವರ ಪಾತ್ರಕ್ಕೆ 4-5 ಶೇಡ್ಸ್ ಇದೆ. ಅದರಲ್ಲಿ ಈ ಬೋಳು ತಲೆಯ ಗೆಟಪ್ ಕೂಡ ಒಂದು. ಇದಕ್ಕೆ ಬಾಂಬೆಯಿಂದ ವಿಗ್ ಮೇಕರ್ ಕರೆಸಿದ್ದೆವು. ಅವರು ನಾಲ್ಕೈದು ಗಂಟೆ ತೆಗೆದುಕೊಂಡು ಅಜಯ್ ರಾವ್ ಅವರಿಗೆ ಈ ವಿಗ್ ಕೂರಿಸಿದರು.

# ವೃತ್ತಿಜೀವನಕ್ಕಾಗಿ ತಂಡ ತೊರೆಯಲು ನಿರ್ಧರಿಸಿದ ಪೃಥ್ವಿ ಶಾ



ಪೃಥ್ವಿಗೆ ತೂಕ ಇಳಿಸಿಕೊಳ್ಳಲು ಸಲಹೆ

ಪೃಥ್ವಿ ಶಾ ಅವರು ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೋರಿದ್ದು, ಬೇರೆ ರಾಜ್ಯದಿಂದ ಆಡಲು ಪೃಥ್ವಿ ಬಯಸಿರುವುದಾಗಿ ವರದಿಯಾಗಿದೆ. ಮುಂಬೈನಲ್ಲಿ ಅವರ ಅದ್ಭುತ ಪ್ರದರ್ಶನದ ಹೊರತಾಗಿಯೂ, ರಣಜಿ ಟ್ರೋಫಿ ಮತ್ತು ಐಪಿಎಲ್‌ನಲ್ಲಿ ಅವರಿಗೆ ಸರಿಯಾದ ಸ್ಥಾನ ದೊರೆಯದಿರುವುದು ಈ ನಿರ್ಧಾರಕ್ಕೆ ಕಾರಣವಾಗಿದೆ. ಭವಿಷ್ಯದಲ್ಲಿ ಅವರ ವೃತ್ತಿಜೀವನ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಒಂದು ಸಮಯದಲ್ಲಿ ಟೀಂ ಇಂಡಿಯಾದಲ್ಲಿ ಖಾಯಂ ಸ್ಥಾನ ಪಡೆದುಕೊಳ್ಳುವ ಎಲ್ಲಾ ಸೂಚನೆ ನೀಡಿದ್ದ ಯುವ ಆರಂಭಿಕ ಆಟಗಾರ ಪೃಥ್ವಿ ಶಾ ಗೆ, ಪ್ರಸ್ತುತ ರಾಜ್ಯ ತಂಡದಲ್ಲೂ ಸ್ಥಾನವಿಲ್ಲ.

ಪೃಥ್ವಿ ಟೀಂ ಇಂಡಿಯಾದಿಂದ ಹೊರಗುಳಿದಿರುವುದಲ್ಲದೆ ಮುಂಬೈ ಕೂಡ ಅವರನ್ನು ರಣಜಿ ಟ್ರೋಫಿಯಿಂದ ಕೈಬಿಟ್ಟಿದೆ. ಇದರ ಜೊತೆಗೆ ಅವರಿಗೆ ಐಪಿಎಲ್‌ನಲ್ಲಿ ಅವಕಾಶವೂ ಸಿಗಲಿಲ್ಲ. ಹೀಗಾಗಿ ತಮ್ಮ ವೃತ್ತಿ ಜೀವನದ ಉಳಿವಿಗಾಗಿ ಮಹತ್ವದ ನಿರ್ಧಾರ ತೆಗೆದುಕೊಂಡಿರುವ ಪೃಥ್ವಿ, ಮುಂಬೈ ಕ್ರಿಕೆಟ್ ತಂಡವನ್ನು ತೊರೆದು ಬೇರೆಡೆಗೆ ಹೋಗಲಿದ್ದಾರೆ ಎಂಬ ವರದಿಗಳಿವೆ. ಮಾಧ್ಯಮ ವರದಿಗಳನ್ನು ನಂಬುವುದಾದರೆ, ಪೃಥ್ವಿ ಶಾ ಬೇರೆ ರಾಜ್ಯದಿಂದ ಕ್ರಿಕೆಟ್ ಆಡಲು ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೇಳಿದ್ದಾರೆ. ಕಳೆದ ವರ್ಷ ಮುಂಬೈ ಕ್ರಿಕೆಟ್ ಆಯ್ಕೆ ಸಮಿತಿಯು ಪೃಥ್ವಿ ಶಾ ಅವರನ್ನು ತಂಡದಿಂದ ಕೈಬಿಟ್ಟಿತು. ಅಲ್ಲದೆ ಪೃಥ್ವಿ ಶಾ ಅವರನ್ನು ಅನರ್ಹ ಎಂದು ಘೋಷಿಸಿತ್ತು. ಆ ಬಳಿಕ ಪೃಥ್ವಿಗೆ ತೂಕ ಇಳಿಸಿಕೊಳ್ಳಲು ಸಲಹೆ ಕೂಡ ನೀಡಿತ್ತು. ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನ ಮೂಲಗಳ ಪ್ರಕಾರ, ಪೃಥ್ವಿ ಶಾ ಅವರು ಎಂಸಿಎಗೆ ಇಮೇಲ್ ಮಾಡಿದ್ದಾರೆ. ಅದರಲ್ಲಿ ಅವರು, 'ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನ ಅಚಲ ಬೆಂಬಲ ಮತ್ತು ತಂಡಕ್ಕಾಗಿ ಆಡಲು ಅವಕಾಶ ನೀಡಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಎಂಸಿಎಯ ಭಾಗವಾಗಿರುವುದು ನಿಜಕ್ಕೂ ಗೌರವದ ಸಂಗತಿ. ನನ್ನ ವೃತ್ತಿಜೀವನದ ಈ ಹಂತದಲ್ಲಿ, ನನಗೆ ಬೇರೆ ರಾಜ್ಯ ಸಂಘದಿಂದ ವೃತ್ತಿಪರ ಕ್ರಿಕೆಟ್ ಆಡುವ ಅವಕಾಶ ಸಿಗುತ್ತಿದೆ, ಇದು ಕ್ರಿಕೆಟಿಗನಾಗಿ ನನ್ನ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಮತ್ತಷ್ಟು ಕೊಡುಗೆ ನೀಡುತ್ತದೆ ಎಂದು ನನಗೆ ಖಚಿತವಾಗಿದೆ. ಭವಿಷ್ಯದಲ್ಲಿ ನಾನು ಆ ತಂಡಕ್ಕಾಗಿ ಆಡಲು ಸಾಧ್ಯವಾಗುವಂತೆ ನನಗೆ ನೀಡುವಂತೆ ನಾನು ವಿನಮ್ರವಾಗಿ ವಿನಂತಿಸುತ್ತೇನೆ ಎಂದು ಬರೆದಿದ್ದಾರೆ. ಪೃಥ್ವಿ ಶಾ ಮುಂಬೈ ಪರ ದೇಶೀಯ ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಲ್ಲಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ಜನವರಿ 1, 2017 ರಂದು ಮುಂಬೈ ಪರ ರಣಜಿ ಟ್ರೋಫಿಗೆ ಪಾದಾರ್ಪಣೆ ಮಾಡಿದ ಪೃಥ್ವಿ ಎರಡನೇ ಇನ್ನಿಂಗ್ಸ್‌ನಲ್ಲಿಯೇ ತಮಿಳುನಾಡು ವಿರುದ್ಧ ಭರ್ಜರಿ ಶತಕ ಬಾರಿಸಿದರು.

# 5 ವಿಕೆಟ್ ಪಡೆದ ಚೆಂಡನ್ನು ಬುಮ್ರಾ ಉಡುಗೊರೆಯಾಗಿ ನೀಡಿದ್ದು ಮಗನಿಗೆ



ಲೀಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಜಸ್ಪ್ರೀತ್ ಬುಮ್ರಾ ಅದ್ಭುತ ಪ್ರದರ್ಶನ ನೀಡಿ 5 ವಿಕೆಟ್ ಪಡೆದರು. 83 ರನ್‌ಗಳಿಗೆ 5 ವಿಕೆಟ್‌ಗಳನ್ನು ಪಡೆದು ಅವರು ಹಲವು ದಾಖಲೆಗಳನ್ನು ನಿರ್ಮಿಸಿದರು. ಈ ಐದು ವಿಕೆಟ್‌ಗಳನ್ನು ಪಡೆದ ಚೆಂಡನ್ನು ಅವರು ತಮ್ಮ ಮಗ ಅಂಗದ್‌ಗೆ ಉಡುಗೊರೆಯಾಗಿ ನೀಡಿದ್ದಾರೆ ಎಂದು ಅವರ ಪತ್ನಿ ಸಂಜನಾ ಗಣೇಶನ್ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಇಂಗ್ಲೆಂಡ್ ವಿರುದ್ಧದ ಲೀಡ್ಸ್ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಜಸ್ಪ್ರೀತ್ ಬುಮ್ರಾ 5 ವಿಕೆಟ್‌ಗಳನ್ನು ಕಬಳಿಸಿದರು. ಇದೀಗ ಬುಮ್ರಾ ತಾವು 5 ವಿಕೆಟ್‌ಗಳನ್ನು ಪಡೆದ ಚೆಂಡನ್ನು ತಮ್ಮ ಮಗ ಅಂಗದ್‌ಗೆ ನೀಡಿದ್ದಾರೆ. ಈ ವಿಚಾರವನ್ನು ಸ್ವತಃ ಅವರ ಮಡದಿ ಸಂಜನಾ ಗಣೇಶನ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಇಂಗ್ಲೆಂಡ್ ವಿರುದ್ಧದ ಲೀಡ್ಸ್ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಜಸ್ಪ್ರೀತ್ ಬುಮ್ರಾ 24.5 ಓವರ್‌ಗಳಲ್ಲಿ 83 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಬಳಿಸಿದರು.

ಇದರೊಂದಿಗೆ, ಅವರು ತಮ್ಮ ಹೆಸರಿನಲ್ಲಿ ಅನೇಕ ದಾಖಲೆಗಳನ್ನು ಸಹ ನಿರ್ಮಿಸಿದರು. 5 ವಿಕೆಟ್ ಪಡೆದ ಚೆಂಡನ್ನು ಮಗನಿಗೆ ನೀಡಿದ ಜಸ್ಪ್ರೀತ್ ಬುಮ್ರಾ ಐದು ವಿಕೆಟ್ ಪಡೆದ ಚೆಂಡನ್ನು ತನ್ನ ಮಗನಿಗೆ ನೀಡಿದ್ದಾರೆ ಎಂದು ಅವರ ಪತ್ನಿ ಸಂಜನಾ ಅವರ ಇನ್‌ಸ್ಟಾ ಸ್ಟೋರಿಯಲ್ಲಿ ಫೋಟೋ ಹಂಚಿಕೊಂಡಿದ್ದಾರೆ.

# ಭಾರತ ತಂಡದಲ್ಲಿಲ್ಲ ಸ್ಥಾನ

# ವಿದೇಶಿ ತಂಡದ ಪರ ಇಶಾನ್ ಪಾದಾರ್ಪಣೆ



ಟೀಮ್ ಇಂಡಿಯಾ ಪರ ಭರವಸೆ ಮೂಡಿಸಿದ ಯುವ ದಾಂಡಿಗರಲ್ಲಿ ಇಶಾನ್ ಕಿಶನ್ ಕೂಡ ಒಬ್ಬರು. ಅದರಲ್ಲೂ ಆರಂಭದಲ್ಲೇ ಸ್ಫೋಟಕ ಡಬಲ್ ಸೆಂಚುರಿ ಸಿಡಿಸುವ ಮೂಲಕ ಎಡಗೈ ಬ್ಯಾಟರ್ ವಿಶ್ವ ದಾಖಲೆ ನಿರ್ಮಿಸಿದ್ದರು. ಆದರೆ ಆ ಬಳಿಕ ಇಶಾನ್ ಭಾರತ ತಂಡದಲ್ಲಿ ಕಾಣಿಸಿಕೊಂಡಿದ್ದು ವಿರಳ. ಅದರಲ್ಲೂ 2023ರ ಏಕದಿನ ವಿಶ್ವಕಪ್ ಬಳಿಕ ಅವರನ್ನು ಟೀಮ್ ಇಂ ಡಿಯಾದಿಂದ ಕೈ ಬಿಡಲಾಗಿದೆ.

ಟೀಮ್ ಇಂಡಿಯಾದ ವಿಕೆಟ್ ಕೀಪರ್ ಬ್ಯಾಟರ್ ಭಾರತ ತಂಡದಿಂದ ಹೊರಬಿದ್ದು ವರ್ಷಗಳು ಕಳೆದಿವೆ. ಇದಾಗ್ಯೂ ಯುವ ದಾಂಡಿಗನ ಕಂಬ್ಯಾಕ್ ಪ್ರಯತ್ನ ಮುಂದುವರೆದಿದೆ. ಅದರ ಭಾಗವಾಗಿ ಇದೀಗ ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್‌ನಲ್ಲಿ ಇಶಾನ್ ಹೊಸ ಇನಿಂಗ್ಸ್ ಆರಂಭಿಸಿದ್ದಾರೆ. ಅದು ಸಹ ಖ್ಯಾತ ಕ್ಲಬ್ ನಾಟಿಂಗ್‌ಹ್ಯಾಮ್‌ಶೈರ್ ಪರ ಕಣಕ್ಕಿಳಿಯುವ ಮೂಲಕ ಎಂಬುದು ವಿಶೇಷ. ಕೌಂಟಿ ಚಾಂಪಿಯನ್‌ಶಿಪ್ ಡಿವಿಷನ್ ಒನ್ 2025 ರ 40ನೇ ಪಂದ್ಯದ ಮೂಲಕ ಇಶಾನ್ ಕಿಶನ್ ನಾಟಿಂಗ್‌ಹ್ಯಾಮ್‌ಶೈರ್ ಪರ ಪಾದಾರ್ಪಣೆ ಮಾಡಿದ್ದಾರೆ. ಯಾರ್ಕ್‌ಶೈರ್ ವಿರುದ್ಧದ ಈ ಪಂದ್ಯದಲ್ಲಿ 6ನೇ ಕ್ರಮಾಂಕದಲ್ಲಿ ಕಣಕ್ಕಿಳಿದಿರುವ ಇಶಾನ್ ಮೊದಲ ಇನಿಂಗ್ಸ್‌ನಲ್ಲಿ 53 ಎಸೆತಗಳಲ್ಲಿ 6 ಫೋರ್‌ಗಳೊಂದಿಗೆ ಅಜೇಯ 44 ರನ್ ಕಲೆಹಾಕಿದ್ದಾರೆ.

ಇಶಾನ್ ಕಿಶನ್ ಅವರ ಈ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ನಾಟಿಂಗ್‌ಹ್ಯಾಮ್‌ಶೈರ್ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 6 ವಿಕೆಟ್ ಕಳೆದುಕೊಂಡು 298 ರನ್ ಕಲೆಹಾಕಿದೆ. ಸದ್ಯ ಕ್ರೀಸ್‌ನಲ್ಲಿ ಇಶಾನ್ ಕಿಶನ್ ಹಾಗೂ ಲಿಯಾಮ್ ಪೀಟರ್ಸನ್ ಬ್ಯಾಟಿಂಗ್ ಕಾಯ್ದುಕೊಂಡಿದ್ದು, 2ನೇ ದಿನದಾಟಲ್ಲಿ ಬ್ಯಾಟಿಂಗ್ ಮುಂದುವರೆಸಲಿದ್ದಾರೆ.

ಇಶಾನ್ ಕಿಶನ್ ಟೀಮ್ ಇಂಡಿಯಾ ಪರ ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದು 2023ರಲ್ಲಿ. 2023ರ ಏಕದಿನ ವಿಶ್ವಕಪ್ ಬಳಿಕ ಅಶಿಸ್ತಿನ ಕಾರಣ ಭಾರತ ತಂಡದಿಂದ ಹೊರಬಿದ್ದಿದ್ದ ಯುವ ದಾಂಡಿಗನಿಗೆ ಮತ್ತೆ ಅವಕಾಶ ಸಿಕ್ಕಿಲ್ಲ. ಇದೀಗ ಇಂಗ್ಲೆಂಡನಲ್ಲಿ ಕೌಂಟಿ ಪಂದ್ಯಗಳನ್ನಾಡುವ ಮೂಲಕ ಮತ್ತೊಮ್ಮೆ ಟೀಮ್ ಇಂಡಿಯಾದ ಕದ ತಟ್ಟುವ ವಿಶ್ವಾಸದಲ್ಲಿದ್ದಾರೆ. ಅಂದಹಾಗೆ ಇಶಾನ್ ಕಿಶನ್ ಈವರೆಗೆ ಭಾರತದ ಪರ 2 ಟೆಸ್ಟ್, 27 ಏಕದಿನ ಹಾಗೂ 32 ಟಿ20 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ ಟೆಸ್ಟ್‌ನಲ್ಲಿ 78 ರನ್ ಕಲೆಹಾಕಿದರೆ, ಏಕದಿನ ಕ್ರಿಕೆಟ್‌ನಲ್ಲಿ 933 ರನ್ ಗಳಿಸಿದ್ದಾರೆ.

# ಸೆಹ್ವಾಗ್ ದಾಖಲೆ ಮುರಿದ ರಾಹುಲ್



ಇಂಗ್ಲೆಂಡ್ ವಿರುದ್ಧ ಅರ್ಧಶತಕ

ಲೀಡ್ಸ್‌ನಲ್ಲಿ ನಡೆದ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಅರ್ಧಶತಕದಂಚಿನಲ್ಲಿ ಎಡವಿದ್ದ ರಾಹುಲ್, ಎರಡನೇ ಇನ್ನಿಂಗ್ಸ್ ನಲ್ಲಿ ಭರ್ಜರಿ ಅರ್ಧಶತಕ ಬಾರಿಸಿ ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಅಲ್ಲದೆ ಇಂಗ್ಲೆಂಡ್‌ನಲ್ಲಿ 9ನೇ ಬಾರಿ 50+ ರನ್ ಗಳಿಸಿ, ಅವರು ವೀರೇಂದ್ರ ಸೆಹ್ವಾಗ್ ಅವರ ದಾಖಲೆಯನ್ನು ಮುರಿದರು. ಲೀಡ್ಸ್ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಅರ್ಧಶತಕದಂಚಿನಲ್ಲಿ ಎಡವಿದ್ದ ಕನ್ನಡಿಗ ಕೆಎಲ್ ರಾಹುಲ್ , 2ನೇ ಇನ್ನಿಂಗ್ಸ್ ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡದ ಇನ್ನಿಂಗ್ಸ್ ನಿಭಾಯಿಸಿದಲ್ಲದೆ, ಲೀಡ್ಸ್‌ನ ಕಠಿಣ ಪಿಚ್‌ನಲ್ಲಿ ಎರಡನೇ ಇನ್ನಿಂಗ್ಸ್‌ನಲ್ಲಿ ಕೆಎಲ್ ರಾಹುಲ್ ಅದ್ಭುತ ಅರ್ಧಶತಕ ಬಾರಿಸಿದ್ದಾರೆ.

ಈ ಮೂಲಕ ಕೆ.ಎಲ್.ರಾಹುಲ್ ಅವರು ತಮ್ಮ ಹೆಸರಿನಲ್ಲಿ ದೊಡ್ಡ ದಾಖಲೆಯನ್ನೂ ನಿರ್ಮಿಸಿದರು. ವಾಸ್ತವವಾಗಿ ರಾಹುಲ್ ಇಂಗ್ಲೆಂಡ್‌ನಲ್ಲಿ ಆರಂಭಿಕರಾಗಿ 9 ನೇ ಬಾರಿಗೆ ಐವತ್ತಕ್ಕೂ ಹೆಚ್ಚು ರನ್ ಕಲೆಹಾಕಿದ್ದು, ಈ ಮೂಲಕ ಮಾಜಿ ಆರಂಭಿಕ ಆಟಗಾರ ವೀರೇಂದ್ರ ಸೆಹ್ವಾಗ್ ಅವರನ್ನು ಹಿಂದಿಕ್ಕಿದ್ದಾರೆ. ರಾಹುಲ್ ಕೇವಲ 42 ಇನ್ನಿಂಗ್ಸ್‌ಗಳಲ್ಲಿ ಇಂಗ್ಲೆಂಡ್‌ನಲ್ಲಿ 9 ನೇ ಬಾರಿಗೆ ಐವತ್ತಕ್ಕೂ ಹೆಚ್ಚು ರನ್ ಗಳಿಸಿದ್ದರೆ, ಸೆಹ್ವಾಗ್ 49 ಇನ್ನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದ್ದರು. ಇಂಗ್ಲೆಂಡ್‌ನಲ್ಲಿ ಅತಿ ಹೆಚ್ಚು ಬಾರಿ ಐವತ್ತಕ್ಕೂ ಹೆಚ್ಚು ರನ್ ಗಳಿಸಿದ ಭಾರತೀಯ ಆರಂಭಿಕ ಆಟಗಾರರ ಪಟ್ಟಿಯಲ್ಲಿ ಮಾಜಿ ನಾಯಕ ಸುನಿಲ್ ಗವಾಸ್ಕರ್ ಮೊದಲ ಸ್ಥಾನದಲ್ಲಿದ್ದಾರೆ. ಅವರು 57 ಇನ್ನಿಂಗ್ಸ್‌ಗಳಲ್ಲಿ 19 ಬಾರಿ ಈ ಸಾಧನೆ ಮಾಡಿದ್ದರು.

# ಕ್ಯಾಚ್‌ಗಳನ್ನು ಕೈಚೆಲ್ಲಿದ ಬುಮ್ರಾ



ಲೀಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ತಂಡ 6 ಕ್ಯಾಚ್‌ಗಳನ್ನು ಕೈಬಿಟ್ಟು ನಿರಾಶೆಗೊಳಿಸಿತು. ಜಸ್ಪ್ರೀತ್ ಬುಮ್ರಾ ತಮ್ಮ ಬೌಲಿಂಗ್‌ನಲ್ಲಿ 3 ಕ್ಯಾಚ್‌ಗಳು ಕೈಬಿಟ್ಟಿದ್ದನ್ನು ಉಲ್ಲೇಖಿಸಿ, ಆಟಗಾರರನ್ನು ಪ್ರೋತ್ಸಾಹಿಸಿ ಮುಂದಿನತ್ತ ಗಮನ ಹರಿಸುವಂತೆ ಹೇಳಿದರು. ಬುಮ್ರಾ 5 ವಿಕೆಟ್ ಪಡೆದರೂ, ಕ್ಯಾಚ್‌ಗಳನ್ನು ಕೈಬಿಟ್ಟು ಪಂದ್ಯದ ಮೇಲಿನ ನಿಯಂತ್ರಣ ಕಳೆದುಕೊಳ್ಳಲಾಯಿತು. ಟೀಂ ಇಂಡಿಯಾ ಜೀವದಾನ ನೀಡಿದ ಆಟಗಾರರು ಬಿಗ್ ಇನ್ನಿಂಗ್ಸ್ ಆಡಿದ ಕಾರಣ ಇಂಗ್ಲೆಂಡ್ ಮೊದಲ ಇನ್ನಿಂಗ್ಸ್‌ನಲ್ಲಿ 465 ರನ್ ಕಲೆಹಾಕಿತು. ಈ ಕ್ಯಾಚ್‌ಗಳನ್ನು ಕೈಬಿಡುವ ಮೂಲಕ ಟೀಂ ಇಂಡಿಯಾ ಪಂದ್ಯದ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿತು. ಬೇಸರದ ಸಂಗತಿಯೆಂದರೆ ಟೀಂ ಇಂಡಿಯಾ ಕೈಚೆಲ್ಲಿದ 6 ಕ್ಯಾಚ್‌ಗಳಲ್ಲಿ, 3 ಕ್ಯಾಚ್‌ಗಳು ಜಸ್ಪ್ರೀತ್ ಬುಮ್ರಾ ಅವರ ಬೌಲಿಂಗ್‌ನಲ್ಲಿ ಸಂಭವಿಸಿದವು. 'ಕ್ಯಾಚ್‌ಗಳನ್ನು ಕೈಚೆಲ್ಲಿದಾಗ, ನಾನು ಒಂದು ಕ್ಷಣ ನಿರಾಶೆಗೊಂಡೆ. ಆದರೆ ಅದು ಆಟದ ಒಂದು ಭಾಗ. ಆಟಗಾರರು ಹೊಸಬರು ಮತ್ತು ಅವರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ನಾನು ಅವರ ವಿರುದ್ಧ ಯಾವುದೇ ಪ್ರತಿಕ್ರಿಯೆ ನೀಡಲು ಅಥವಾ ಅವರ ಮೇಲೆ ಒತ್ತಡ ಹೇರಲು ಬಯಸುವುದಿಲ್ಲ. ಯಾರೂ ಇದನ್ನು ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ. ಕ್ಯಾಚ್ ಹಿಡಿಯುವುದು ಆಟದ ಒಂದು ಭಾಗ. ಹೀಗಾಗಿ ಕ್ಯಾಚ್‌ಗಳನ್ನು ಕೈಚೆಲ್ಲಿದ ಬಗ್ಗೆ ಹೆಚ್ಚು ಯೋಚಿಸುವ ಬದಲು, ನಾವು ಮುಂದಿನ ಆಟದತ್ತ ಗಮನ ಹರಿಸಬೇಕು. ಸ್ವಾಭಾವಿಕವಾಗಿ, ಕ್ಯಾಚ್‌ಗಳನ್ನು ತೆಗೆದುಕೊಂಡರೆ ಅದು ಉತ್ತಮವಾಗಿರುತ್ತದೆ. ಆದರೆ ಆಟಗಾರರು ಇದರಿಂದ ಕಲಿಯುತ್ತಾರೆ' ಎಂದು ಬುಮ್ರಾ ಹೇಳಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966